ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

22 ಫೆಬ್ರವರಿ 2017 ಪುಟ 20 ರೂ. 15/-




ಅವಸಾನದ ಅಂಚಿನಲ್ಲಿ ಅಮೃತಮಹಲ್



ಶೂಟೌಟ್ ಹಿಂದೆ ಬಿಜೆಪಿ ರಕ್ತದಾಹ!

ನಂಜನಗೂಡು
ಗೌಡರ ದಾಳದ
ನಡುವೆ ಕಾಂಗ್ರೆಸ್
ಕೊಸರಾಟ

ಕುಮಟ
ಬೈಪಾಸ್‌ಗಾಗಿ
ಆರ್‌ಎಸ್‌ಎಸ್-ದೋಷಪಾಂಡೆ
ಜಂಟಿ ದೋಖಾ!!




ಚಿತ್ರದುರ್ಗ
ಅಂಬೇಡ್ಕರ್
ನಿಗಮಕ್ಕೆ
ವಕ್ಕರಿಸಿದ
ಮಹಾವಂಚಕಿ!

ಬಳ್ಳಾರಿ
ಜನದ್ರೋಹಿ
ಡಿಸಿ ದರ್ಬಾರ್‌ನಲ್ಲಿ
ಬಡವರು ಬರ್ಬಾದ್



ಬಜೆಟ್: ಕುತೂಹಲ ಮೂಡಿಸಬಹುದಾದ ಕೆಲವು ಸಂಗತಿಗಳ



ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಬಜೆಟ್ ಮಂಡಿಸಿದ್ದಾರೆ. ಬಹಳಷ್ಟು ಸಾರಿ ಬಜೆಟ್‌ನಲ್ಲಿ ಘೋಷಣೆಗಳ ರೂಪದಲ್ಲಿ ಏನೆಲ್ಲಾ ಹೇಳಲಾಗುತ್ತದೋ, ಅದರ ಒಳಹೊಕ್ಕು ನೋಡಿದರೆ ನಮ್ಮ ಮೊದಲ ಅನಿಸಿಕೆಗಿಂತ ಸಂಪೂರ್ಣ ವಿರುದ್ಧವಾದ ಸಂಗತಿ ಹೊರಗೆ ಬಂದಿರುತ್ತದೆ. ಹಾಗಾಗಿ ಇನ್ನೂ ನಾಲ್ಕಾರು ದಿನಗಳ ನಂತರ ಈ ಕುರಿತು ಸಂಪೂರ್ಣ ಚಿತ್ರಣ ಸಿಗುವ ಸಾಧ್ಯತೆಯೇ ಹೆಚ್ಚು. ಆದರೆ ಇಲ್ಲಿ ಬಜೆಟ್ ಅನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಕೆಲವು ಅಂಶಗಳನ್ನು ನಿಮ್ಮ ಮುಂದಿಡುವ ಪ್ರಯತ್ನ ಮಾಡಲಾಗಿದೆ.

ಬಜೆಟ್ ಎಂಬ ಪದದಿಂದಲೇ ಶುರು ಮಾಡೋಣ.



ಇಂಗ್ಲಿಷಿನ **Budget** ಎಂಬುದು **Bougette** ಎಂಬ ಫ್ರೆಂಚ್ ಪದದಿಂದ ಬಂದದ್ದು. ಈ ಪದದ ಅರ್ಥ ಚರ್ಮದ ಚೀಲ (Leather bag) ಎಂದು. ಅಂತಹದೊಂದು ಚೀಲವನ್ನು 1860ರಲ್ಲಿ ಬ್ರಿಟನ್ ರಾಣಿಯು ಅಂದಿನ ಹಣಕಾಸು ಸಚಿವ ವಿಲಿಯಂ ಎವಾರ್ಟ್ ಗ್ಲಾಡ್‌ಸ್ಟೋನ್ ಎಂಬುವವರಿಗೆ ನೀಡಿದ್ದರಂತೆ. ಆ ಚೀಲದಲ್ಲೇ ಬಜೆಟ್‌ನ ಪ್ರತಿಯನ್ನು ತಂದು ಆಯವ್ಯಯ ಮಂಡಿಸುವುದು ಅಲ್ಲಿನ ರೂಢಿಯಾಗಿತ್ತು, ಈಗಲೂ ಅದೇ ಚೀಲವನ್ನು ಒಬ್ಬರಾದ ಮೇಲೆ ಒಬ್ಬರು ಹಣಕಾಸು ಸಚಿವರು ಹೊತ್ತುಕೊಂಡು ಬಂದು ಬಜೆಟ್ ಮಂಡಿಸುತ್ತಾರೆ. 1947ರ ನಂತರ ಭಾರತದಲ್ಲೂ ಇಂತಹುದೇ ಸಂಪ್ರದಾಯವನ್ನು ಇಲ್ಲಿನ ಅರ್ಥ ಸಚಿವರೂ ಪಾಲಿಸಿಕೊಂಡು ಬಂದಿದ್ದಾರೆ. 1957ರಲ್ಲಿ ಮಾತ್ರ ಒಮ್ಮೆ ಟಿ.ಟಿ.ಕೃಷ್ಣಮಾಚಾರಿ ಎಂಬ ಹಣಕಾಸು ಸಚಿವರು ಒಂದು ಫೈಲನ್ನಷ್ಟೇ ಹೊತ್ತುಕೊಂಡು ಹೋಗಿ ಸಂಸತ್ತಿನಲ್ಲಿ ಬಜೆಟ್ ಮಂಡಿಸಿದ್ದರು. ಬಜೆಟ್‌ನ ಆರ್ಥಿಕ ವಿಶ್ಲೇಷಣೆ ಮಾಡಬೇಕಾದ ಸಂದರ್ಭದಲ್ಲಿ ಈ ಸೂಟ್‌ಕೇಸ್ ಪುರಾಣವನ್ನು ಕೇವಲ ಅದರ ಸ್ವಾರಸ್ಯಕರ ಚರಿತ್ರೆಯ ಕಾರಣಕ್ಕೆ ಮಾತ್ರ ಹೇಳುತ್ತಿಲ್ಲ, ಈ ಸಾರಿಯ ಬಜೆಟ್ ಭಾಷಣ ಆರಂಭ ಮಾಡುವಾಗ ಅರುಣ್ ಜೇಟ್ಲಿ ಒಂದು ಮಾತು ಹೇಳಿದರು.


ಭಾರತದಲ್ಲಿ 1924ರಿಂದಲೂ ರೈಲ್ವೇ ಬಜೆಟ್‌ಅನ್ನು ಪ್ರತ್ಯೇಕವಾಗಿ ಮಂಡಿಸಲಾಗುತ್ತಿತ್ತು, ಬ್ರಿಟಿಷರ ಕಾಲದ ಈ ಅಭ್ಯಾಸವನ್ನು ಈ ಸಾರಿ ಕೈಬಿಟ್ಟು, ರೈಲ್ವೆ ಬಜೆಟ್‌ಅನ್ನು ದೇಶದ ಬಜೆಟ್‌ನ ಜೊತೆಗೇ ಸೇರಿಸಲಾಗಿದೆ. "ವಸಾಹತುಶಾಹಿ ಕಾಲದ ಈ ಅಭ್ಯಾಸವನ್ನು ಕೈಬಿಟ್ಟಿರುವ ಮಹತ್ವ ಈ ಸಾರಿಯ ಬಜೆಟ್ ಮಂಡನೆಗಿದೆ" ಎಂದು ಜೇಟ್ಲಿ ಹೆಮ್ಮೆಯಿಂದ ಹೇಳಿದರು. ಫೆಬ್ರವರಿ ತಿಂಗಳ ಕಡೆಯ ದಿನ ಸಂಜೆ 5ಕ್ಕೆ ಬಜೆಟ್ ಮಂಡಿಸುತ್ತಿದ್ದುದು ವಾಡಿಕೆ. ಸಂಜೆ 5 ಸಹ ಬ್ರಿಟಿಷರ ಕಾಲದ ಪಳೆಯುಳಿಕೆಯೇ. ಆ ದಿನ ಬೆಳಗ್ಗೆ ಇಂಗ್ಲೆಂಡಿನಲ್ಲಿ ಬಜೆಟ್ ಮಂಡನೆಯಾಗುತ್ತಿತ್ತು, ಹಾಗಾಗಿ ಸಂಜೆ ಇಲ್ಲಿ ಮಂಡಿಸಲಾಗುತ್ತಿತ್ತು, ಅದನ್ನು ಬೆಳಗ್ಗೆ ತಂದಿದ್ದೂ 1999ರಲ್ಲಿ ಎನ್‌ಡಿಎ ಸರ್ಕಾರವೇ. ಫೆಬ್ರವರಿ 1ಕ್ಕೆ ಎಳೆದುಕೊಂಡು ಬಂದಿರುವುದು ಮಾತ್ರ ಈ ಸಾರಿ. ಇವೆಲ್ಲವನ್ನೂ ಬದಲಿಸಿದ ಜೇಟ್ಲಿ ಸೂಟ್‌ಕೇಸ್ ಹಿಡಿದುಕೊಂಡು ಬರುವುದನ್ನೇನೂ ಬಿಟ್ಟಿಲ್ಲ, ಇದು ಕೇವಲ ಸೂಟ್‌ಕೇಸ್ ಪ್ರಶ್ನೆಯಲ್ಲ, ಬಜೆಟ್ ಪ್ರತಿಯನ್ನು ಖಾದಿ ಬಟ್ಟೆಯಲ್ಲಿ ತಂದರೂ, ಲ್ಯಾಪ್‌ಟಾಪ್‌ನಲ್ಲಿ ತಂದರೂ ಅಂತಹ ವ್ಯತ್ಯಾಸವೇನಿಲ್ಲ, ಸಮಸ್ಯೆಯಿರುವುದು ವಸಾಹತುಶಾಹಿ ಮನಸ್ಥಿತಿಯಲ್ಲಿ, ಅದರಲ್ಲಿ ಅಂತಹ ಬದಲಾವಣೆಗಳೇನೂ ಆಗಿಲ್ಲ, ವಸಾಹತುಶಾಹಿಯ ಮುಂದುವರೆದ ರೂಪವಾದ ಆಧುನಿಕ ಕಾರ್ಪೊರೇಟ್ ಸಂಸ್ಥೆಗಳ ಪರವಾಗಿಲ್ಲದೇ, ಜನಪರವಾಗಿ ಬಜೆಟ್ ಮುಂದಿಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಸಕಾರಾತ್ಮಕ ಉತ್ತರವಿಲ್ಲ,

ಇಂತಹ ವಿಚಾರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ದೊಡ್ಡ ವ್ಯತ್ಯಾಸವಿಲ್ಲ, ಉದಾಹರಣೆಗೆ ಯಾವ ರೀತಿ ಬಜೆಟ್ ಇರಬೇಕೆಂಬ ಕುರಿತು ಎರಡು ಪಕ್ಷಗಳು ಬಹುತೇಕ ಒಂದೇ ಅಭಿಪ್ರಾಯವನ್ನು ಹೊಂದಿವೆ. ಅಷ್ಟೇ ಅಲ್ಲದೇ, ಬಜೆಟ್ ಹಿಡಿಯಬೇಕಾದ ದಾರಿ ಏನು ಎಂಬುದು ಕೇವಲ ಒಂದು ನೀತಿಯಲ್ಲ, ಅದು ಕಾನೂನಾಗಿದೆ. ಇದನ್ನು ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ (**Fiscal responsibility and budget management act) 2003** ಎಂದು ಕರೆಯಲಾಗುತ್ತದೆ. ಈ ಕಾಯ್ದೆ ಬಂದದ್ದು ಕೇಂದ್ರದಲ್ಲಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವಿದ್ದಾಗ. ಅದನ್ನು ನಂತರದ ಕಾಂಗ್ರೆಸ್ ಸರ್ಕಾರವೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದೆ. ಜನವರಿ 31ರಂದು ಸಂಸತ್ತಿನಲ್ಲಿ ಆರ್ಥಿಕ ಸಮೀಕ್ಷೆ ಮಂಡನೆಯಾದ ನಂತರ ಕಾಂಗ್ರೆಸ್‌ನ ನಾಯಕ (ಮಾಜಿ ವಿತ್ತಮಂತ್ರಿ) ಪಿ.ಚಿದಂಬರಂ ಅವರು ಟಿವಿ ಸಂದರ್ಶನದಲ್ಲಿ ಈ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕೆಂದು ಜೇಟ್ಲಿಗೆ ಕಿವಿಮಾತು ಹೇಳಿದರು.

ವಾಸ್ತವದಲ್ಲಿ ಬಜೆಟ್ ಎಂಬುದೇ ಒಂದು ಆರ್ಥಿಕ ನೀತಿಯಲ್ಲ, ಅದು ಆರ್ಥಿಕ ನೀತಿಯ ಭಾಗವಾಗಿ ಮುಂದಿನ ಒಂದು ವರ್ಷ ಯಾವ ರೀತಿಯ ಆಯವ್ಯಯ ಇರುತ್ತದೆ ಎಂಬುದರ ಲಿಖಿತ ಅಂದಾಜು ಅಷ್ಟೇ. ಇದರಲ್ಲಿ ಆರ್ಥಿಕ ನೀತಿಯೂ ಪ್ರತಿಬಿಂಬಿತಗೊಳ್ಳುತ್ತದೆ ಎಂಬುದು ನಿಜವಾದರೂ, ಆ ಆರ್ಥಿಕ ನೀತಿ ಜನರಿಗೆ ಗೊತ್ತಾಗದಂತೆ ಕಣ್ಕಟ್ಟು ಮಾಡುವ ವಿಧಾನವಾಗಿಯೂ ಬಜೆಟ್‌ಅನ್ನು ಮುಂದಿಡಲಾಗುತ್ತದೆ. ಇದು ಹೇಗೆ ಎಂಬುದನ್ನು ನೋಡುವ ಮುಂಚೆ ಆರ್ಥಿಕ ಸಮೀಕ್ಷೆ ಎಂದರೇನೆಂದು ನೋಡೋಣ. ಬಜೆಟ್ ಮಂಡನೆಗೆ ಒಂದು ದಿನ ಮುಂಚೆ ದೇಶದ ಒಟ್ಟಾರೆ ಆರ್ಥಿಕತೆಯ ಸ್ಥಿತಿಗತಿಯ ಅಧಿಕೃತ ವರದಿಯನ್ನು ಸಂಸತ್ತಿನ ಮುಂದಿಡಲಾಗುತ್ತದೆ. ಅದರಲ್ಲಿ ಆರ್ಥಿಕ ಸ್ಥಿತಿಗತಿಯ ಜೊತೆಗೆ ಸರ್ಕಾರದಿಂದ ಯಾವ ರೀತಿಯ ಸುಧಾರಣೆಯ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಸೂಚನೆಗಳಿರುತ್ತವೆ ಮತ್ತು ನೀತಿ ನಿರೂಪಣೆಯ ಮಟ್ಟದಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆಯೂ ಶಿಫಾರಸ್ಸುಗಳಿರುತ್ತವೆ. ಈ ಸಾರಿ ಕೇಂದ್ರ ಸರ್ಕಾರ ಪ್ರಧಾನ ಆರ್ಥಿಕ ಸಲಹೆಗಾರ ಅರವಿಂದ ಸುಬ್ರಮಣಿಯನ್ ನೇತೃತ್ವದಲ್ಲಿ ತಯಾರಾದ ಅಂತಹ ಸಮೀಕ್ಷೆಯನ್ನು ಜನವರಿ 31ರಂದು ಮಂಡಿಸಲಾಯಿತು.

ಮೇಲಿನ ಪ್ಯಾರಾದಲ್ಲಿ ಸುಧಾರಣೆ ಎಂಬ ಪದ ಬಳಸಲಾಗಿದೆ. ಅರ್ಥಶಾಸ್ತ್ರ, ಬಜೆಟ್‌ನ ಸಂದರ್ಭದಲ್ಲಿ ಬಳಸಲಾಗುವ ಎಷ್ಟೋ ಪದಗಳು ಜನಸಾಮಾನ್ಯರಿಗೆ ಅರ್ಥವೇ ಆಗುವುದಿಲ್ಲ, ಹಾಗಾಗಿಯೇ ಹೆಚ್ಚಿನವರು ಬಜೆಟ್‌ನ ಸಂಕೀರ್ಣತೆಯ ಕುರಿತು ತಲೆಯೇ ಕೆಡಿಸಿಕೊಳ್ಳುವುದಿಲ್ಲ, ಬಹುಶಃ ಅರ್ಥ ಆಗಬಾರದು ಎಂಬುದು ಉದ್ದೇಶಪೂರ್ವಕವೇ ಇರುತ್ತದೆ. ಏಕೆಂದರೆ ವಾಸ್ತವವನ್ನು ಸರಿಯಾಗಿ ಬಿಚ್ಚಿಟ್ಟರೆ, ಜನರು ಗಾಬರಿಯಾಗುತ್ತಾರೆ. ಉದಾಹರಣೆಗೆ ಈ ಸಾರಿಯ ಆರ್ಥಿಕ ಸಮೀಕ್ಷೆಯಲ್ಲಿ ಒಂದು ಮಾತು ಹೇಳಲಾಗಿದೆ. 'ಹೆಚ್ಚಿನ ಉದ್ಯೋಗ ಸೃಷ್ಟಿಯಾಗಬೇಕೆಂದರೆ ಅಪಾರೆಲ್ ಕ್ಷೇತ್ರದಲ್ಲಿ ಕಾರ್ಮಿಕ ಕಾನೂನುಗಳ ವಿಚಾರದಲ್ಲಿ ಸುಧಾರಣೆ ಆಗತ್ಯವಿದೆ' ಎಂಬುದೇ ಆ ವಾಕ್ಯ. ಇದನ್ನು ನೋಡಿದರೆ ಸಾಮಾನ್ಯ ಜನರಿಗೆ ಇದರಲ್ಲೇನೋ ಒಳ್ಳೆಯದಿರಬಹುದು ಅನ್ನಿಸುತ್ತದೆ. ನಿಜ ಏನೆಂದರೆ, 'ನಮ್ಮ ದೇಶದ ಮಹಿಳೆಯರ ಜೀವಚೈತನ್ಯವನ್ನೇ ಹಿಂಡುವ ಗಾರ್ಮೆಂಟ್ ಉದ್ದಿಮೆಯಲ್ಲಿ, ಅವರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲು ಇರುವ ಕಾರ್ಮಿಕ ಕಾನೂನುಗಳನ್ನೂ ಸಡಿಲಗೊಳಿಸಬೇಕು ಅಥವಾ ಕಿತ್ತು ಹಾಕಬೇಕು' ಎಂಬುದು ಇದರ ಅರ್ಥ. ಅಪಾರೆಲ್ ಎನ್ನುವ ಪದ ಹೆಚ್ಚಿನವರಿಗೆ ಗೊತ್ತಿರುವುದಿಲ್ಲ; ಜೊತೆಗೆ ಸುಧಾರಣೆ ಎಂದರೆ ಒಳ್ಳೆಯದನ್ನೇನೋ ಹೇಳುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಸಂಭವವೇ ಹೆಚ್ಚು.

ಹಾಗೆಯೇ 'ತೆರಿಗೆ ಕಡಿಮೆ ಮಾಡುವ' ಒಂದು ಸಂಗತಿ ಎರಡು ತಿಂಗಳಿಂದ ಚರ್ಚೆಯಲ್ಲಿದೆ. ನೋಟು ರದ್ಧತಿಯಿಂದ ಹೆಚ್ಚಿನ ಬಾಧೆಗೊಳಗಾದವರು ಸಾಮಾನ್ಯ ಜನರು. ಆದರೆ, ಸರ್ಕಾರದಿಂದ ರಿಯಾಯಿತಿ/ವಿನಾಯಿತಿ ಕೇಳುತ್ತಿರುವುದು ದೊಡ್ಡವರು. ಇಲ್ಲಿ ತೆರಿಗೆ ಕಡಿಮೆ ಮಾಡುವುದು ಎಂದರೆ, ಶ್ರೀಮಂತರಿಗೆ ಆದಾಯ ತೆರಿಗೆಯನ್ನೂ, ಕಾರ್ಪೊರೇಟ್ ಕಂಪೆನಿಗಳಿಗೆ ಕಾರ್ಪೊರೇಟ್ ತೆರಿಗೆಯನ್ನೂ ಕಡಿಮೆ ಮಾಡುವುದು ಎಂದೇ ಆಗಿದೆ. ಈ ರೀತಿ ಒಳಹೊಕ್ಕು ನೋಡುವ ಅಗತ್ಯವಿದೆ. ಪ್ರಸಕ್ತ ಅಧಿವೇಶನದ ಮೊದಲ ದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಸರ್ಕಾರವು ಬರೆದುಕೊಟ್ಟ ಭಾಷಣ ಓದಿದಾಗ, ಅದರಲ್ಲಿ ಒಂದು ಮಾತನ್ನು ಹೇಳಿದರು. 'ರಾಜ್ಯ ವಿಧಾನಸಭೆಗಳಿಗೂ, ಲೋಕಸಭೆಗೂ ಒಂದೇ ಸಾರಿ ಚುನಾವಣೆ ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನಾವು ಚಿಂತನೆ ನಡೆಸಬೇಕು' ಎಂದು ಹೇಳಿದ ಮಾತಿಗೆ 'ಪ್ರಧಾನಿ ನರೇಂದ್ರ ಮೋದಿಯವರು ಬಹುಕಾಲದಿಂದ ಮುಂದಿಡುತ್ತಿರುವ ಪ್ರಸ್ತಾಪವನ್ನು ಈ ಸಾರಿ ರಾಷ್ಟ್ರಪತಿ ಭಾಷಣದಲ್ಲಿ ಸೇರಿಸಲಾಗಿದೆ' ಎಂದು ಹಲವರು ಈಗಾಗಲೇ



ವ್ಯಾಖ್ಯಾನಿಸಿದ್ದಾರೆ. ಪದೇ ಪದೇ ಚುನಾವಣೆಗಳು ಇದ್ದರೆ, ಜನಸಾಮಾನ್ಯರ ಹಿತ ಕಾಯುವ ಆರ್ಥಿಕ ನೀತಿಗಳು, ಬಜೆಟ್‌ಗಳನ್ನು ಆಗಾಗ ಒಳಗೊಳ್ಳುತ್ತಲೇ ಇರಬೇಕಾಗುತ್ತದೆ; ಇಲ್ಲದಿದ್ದರೆ ಐದು ವರ್ಷ ನಿರಾತಂಕವಾಗಿ ಕಾರ್ಪೊರೇಟ್ ಶಕ್ತಿಗಳ ಹಿತಾಸಕ್ತಿಯನ್ನು ಕಾಯಬಹುದು ಎಂಬುದು ಇದರ ಹಿಂದಿನ ಹುನ್ನಾರ.'

ಇರಲಿ, ಮತ್ತೆ ಬಜೆಟ್‌ಗೆ ಬರೋಣ. ಬಜೆಟ್‌ಅನ್ನು ಅರ್ಥಮಾಡಿಕೊಳ್ಳುವಾಗ ಅದರ ವಿವರಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾ ಹೋದರೆ, ಬಜೆಟ್‌ನ ಒಟ್ಟಾರೆ ದಿಕ್ಕು ಮತ್ತು ಆದ್ಯತೆ ಏನು ಎಂದು ಗೊತ್ತಾಗುವುದಿಲ್ಲ, ಸರ್ಕಾರವೂ, ಮಾಧ್ಯಮಗಳೂ ಅದನ್ನೇ ಬಯಸುತ್ತವೆ. ಹಾಗಾಗಿ ನಾಲ್ಕು ಐದು ಪುಟಗಳಷ್ಟು ವಿವರಗಳನ್ನು ಬಜೆಟ್‌ನ ಮರುದಿನ ಪತ್ರಿಕೆಗಳು ಪ್ರಕಟಿಸಿದಾಗ, ನಮಗೆ ಸಿಗುವ ಚಿತ್ರಣವೇ ಬೇರೆ, ವಾಸ್ತವವೇ ಬೇರೆಯಾಗಿರುತ್ತದೆ. ಇನ್ನು 'ಕೃಷಿಕರತ್ತ ಪ್ರಧಾನಿಯ ಚಿತ್ತ; ಇದು ರೈತಪರ ಬಜೆಟ್' ಇತ್ಯಾದಿ ಶೀರ್ಷಿಕೆಗಳಂತೂ ಬಹಳಷ್ಟು ಸಾರಿ ಸುಳ್ಳಾಗಿರುತ್ತದೆ. ಉದಾಹರಣೆಗೆ ಕಳೆದ ಸಾರಿಯ ಜೇಟ್ಲಿ ಬಜೆಟ್‌ಅನ್ನು ಗ್ರಾಮೀಣಾಭಿವೃದ್ಧಿಯ, ರೈತಪರ ಬಜೆಟ್ ಎಂದು ಕರೆಯಲಾಗಿತ್ತು. ನಿಜ ಏನೆಂದರೆ, ಗ್ರಾಮೀಣಾಭಿವೃದ್ಧಿ, ಸಹಕಾರ ಮತ್ತು ಕೃಷಿ ಇಲಾಖೆಗೆ 2016-17ರಲ್ಲಿ ನೀಡಲಾದ 20,984 ಕೋಟಿ ರೂ.ಗಳ ಅನುದಾನ 2013-14ಕ್ಕಿಂತ ಕಡಿಮೆಯಾಗಿತ್ತು! ಅದೇ ರೀತಿ ದೇಶದಲ್ಲಿ ಕೃಷಿಯಲ್ಲಿ ನೀರಾವರಿ ವಿಸ್ತರಿಸುವ 'ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ' 12,000 ಕೋಟಿ ರೂ.ಗಳನ್ನು ಎತ್ತಿಡಲಾಗಿದೆ ಎಂದು ಘೋಷಿಸಲಾಗಿತ್ತು. 2014-15ರಲ್ಲಿ ಒಟ್ಟು 13,492 ಕೋಟಿ ರೂ.ಗಳ ಅನುದಾನದೊಂದಿಗೆ ಜಾರಿ ಮಾಡಲು ಉದ್ದೇಶಿಸಿದ್ದ ವಿವಿಧ ಯೋಜನೆಗಳನ್ನು ಒಂದೆಡೆಗೆ ತಂದು ಅದಕ್ಕೆ ಹೊಸ ಹೆಸರು ನೀಡಲಾಗಿತ್ತು ಅಷ್ಟೇ.

ಕಳೆದೊಂದು ವರ್ಷದಿಂದ ಚಲಾವಣೆಗೆ ಬಂದಿರುವ, ಈ ಸಾರಿಯ ಆರ್ಥಿಕ ಸಮೀಕ್ಷೆಯಲ್ಲೂ ಸ್ಥಾನ ಪಡೆದುಕೊಂಡಿರುವ 'ಸಾರ್ವತ್ರಿಕ ಕನಿಷ್ಠ ಆದಾಯ (**Universal basic income-UBI**)' ಖಾತರಿಯ ಬಗೆಗೂ ಸ್ವಲ್ಪ ನೋಡೋಣ. ಇಂತಹದೊಂದು ನೀತಿ ಪ್ರಪಂಚದ ಯಾವ ದೇಶದಲ್ಲೂ ಇಲ್ಲ. ಫಿನ್ಲೆಂಡ್ ಮತ್ತು ಸ್ಕಾಟ್ಲೆಂಡ್‌ನಂತಹ ದೇಶಗಳಲ್ಲಿ ಇದರ ಬಗ್ಗೆ ಚರ್ಚೆ ನಡೆದಿದೆ. ಸ್ವಿಟ್ಜರ್ಲೆಂಡ್‌ನಲ್ಲಿ ಇದನ್ನು ತಿರಸ್ಕರಿಸಲಾಗಿದೆ. ಏನಿದು ಯುಬಿಐ? ದೇಶದ ಜನಸಾಮಾನ್ಯರಲ್ಲಿ ಪ್ರತೀ ವ್ಯಕ್ತಿಗೂ ಇಂತಿಷ್ಟು ಮಾಸಿಕ ಹಣವನ್ನು ಸರ್ಕಾರವು ನೇರವಾಗಿ ನೀಡುವುದು. ಕೆಲವೆಡೆ ಇದನ್ನು ಹಣದ ರೂಪದಲ್ಲಿ ಅಲ್ಲದೇ ವೋಚರ್, ನಗದು ಕೂಪನ್ ಇತ್ಯಾದಿ ರೂಪಗಳಲ್ಲೂ ನೀಡುವ ಚರ್ಚೆ ನಡೆಯುತ್ತಿದೆ. ತಿಂಗಳಿಗೆ 1000 ರೂ. ಇರಬೇಕು ಎಂದು ಕೆಲವರು ಹೇಳುತ್ತಿದ್ದರು. ಆರ್ಥಿಕ ಸಮೀಕ್ಷೆ ನಡೆಸಿದ ಅರವಿಂದ ಸುಬ್ರಮಣಿಯನ್ 7,620 ರೂ. ಎಂದು ಹೇಳಿದ್ದಾರೆ. ಇದಕ್ಕೆ ಏನು ಎಂಬುದು ಇನ್ನೂ ಗೊತ್ತಾಗಬೇಕು. ಈ 7,620 ರ ಕುಟುಂಬವೊಂದಕ್ಕಾ, ಪ್ರತೀ ವ್ಯಕ್ತಿಗಾ ಎಂಬ ಗೊತ್ತಾಗಬೇಕು. ಪ್ರತೀ ವ್ಯಕ್ತಿಗೂ ಕನಿಷ್ಠ ಮೂಲ ಆದಾಯ ಇರಬೇಕೆಂಬುದರಲ್ಲಿ ಎರಡನೇ ಮಾತಿಲ್ಲ. 'ದುಡಿದು ತಿನ್ನಲು ಕೆಲಸ ಕೊಡದೇ ಅಕ್ಕಿ ಕೊ ಯೋಜನೆ'ಯನ್ನು ವಿರೋಧಿಸುವ ಚಿಂತನೆ ಬಿಜೆಪಿಯವರು ಇದರ ಬಗ್ಗೆ ಏಕೆ ಮಾತಾಡುತ್ತಿ

ಈ ರೀತಿ ಹಣ ನೀಡುವುದು ಈಗಾಗಲೇ ಸಿಗು ಬೇರೆ ಬೇರೆ ರೀತಿಯ ಸಬ್ಸಿಡಿ, ವಿನಾಯಿತಿಗಳ ಜೊ ಬದಲಿಗೆ ಎಲ್ಲಾ ಬಗೆಯ ಸಬ್ಸಿಡಿಗಳನ್ನು ಕಿತ್ತುಹಾ ಹಣವನ್ನು ನೀಡಲಾಗುತ್ತದೆಯಂತೆ. ಎಲ್ಲಾ ಸಬ್ಸಿಡಿಗಳು ಎಂದರೆ ಏನರ್ಥ? ಸರ್ಕಾರೀ ಶಾಲಾ, ಕಾ ಆಸ್ಪತ್ರೆಗಳನ್ನೂ ಕಿತ್ತುಹಾಕುತ್ತಾರೆಯೇ? ಗೊತ್ತಿಲ್ಲ. ನಗದು ಎನ್ನುವ ಆಲೋಚನೆಯೇ ಈ ದೇಶದಲ್ಲಿ ಬಡ ದುರ್ಬಲಗೊಳಿಸುತ್ತದೆ ಎಂಬುದು ಪ್ರತ್ಯೇಕ ಚರ್ಚೆ. ಒಂದಂತೂ ಸ್ಪಷ್ಟ. ಸಬ್ಸಿಡಿಗಳನ್ನು ಕಿತ್ತುಹಾಕುತ್ತಾ ಆದಾಯಕ್ಕೂ ಕತ್ತರಿ ಹಾಕುವ ಮತ್ತು ಉದ ಭದ್ರತೆಯನ್ನೂ ಇಲ್ಲವಾಗಿಸುವ ಒಂದು ಹುನ್ನಾ ಯುಬಿಐ ಬರುತ್ತಿದೆ. ಇದನ್ನು ಇನ್ನೊಮ್ಮೆ ಚರ್ಚಿಸಬಹುದು. ಈ ಸಾರಿ ಇಲ್ಲಿ ಪ್ರಸ್ತಾಪಿ ಕಾರಣವೇನೆಂದರೆ, ಮೇಲ್ನೋಟಕ್ಕೆ ಹೊಸದೇ ಮಾಡಲಾಗುತ್ತಿದೆ ಎಂಬಂತೆ ಕಾಣುವ ಸ್ಕೀಮುಗಳಲ್ಲಿ ಸ್ಕೀಮು ಇರಲು ಸಾಧ್ಯ ಎಂಬುದು ಗಮನದಲ್ಲಿರದಿದ್ದರೆ ಮೋಸ ಹೋಗುವುದು ಖ

ಬಜೆಟ್‌ಅನ್ನು ಅರ್ಥ ಮಾಡಿಕೊಳ್ಳಲು ಇನ್ನೂ ಸಂಗತಿಯನ್ನು ನೋಡಬೇಕು. ಕೆಲವು ಸಾರಿ, ಇದ ನಿರ್ದಿಷ್ಟ ಪರಿಹಾರವೇ ಸಿಗುತ್ತಿದೆ ಎಂದೆನಿಸಿದಾ ಅದನ್ನು ಕೆದಕಬೇಕು. 2017ರ ಜೇಟ್ಲಿ ಭಾಷ ಮಾತ್ರವಲ್ಲದೇ, ನರೇಂದ್ರ ಮೋದಿಯವರ 2 ಲೋಕಸಭಾ ಚುನಾವಣಾ ಪ್ರಚಾರದಲ್ಲೂ ಒಂದು ಎದ್ದು ಕಾಣುತ್ತಿತ್ತು. ಅದೇನೆಂದರೆ, ನಾವು ಆದಾಯವನ್ನು ದ್ವಿಗುಣ ಮಾಡುತ್ತೇವೆ ಎಂದು. ಹಾಕಿ ಮಾಡಬೇಕಲ್ಲದೇ ಬೇರೇನೂ ಆಗುವಂತೆ ಕಾ ಏಕೆಂದರೆ, ರೈತರ ಆದಾಯ ಹೆಚ್ಚಿಸುವ ಯಾವ ನಿರ್ದಿಷ್ಟ ಅನುದಾನವಾಗಲೀ, ಕಾರ್ಯಕ್ರಮವ ಸೌಲಭ್ಯಗಳನ್ನಾಗಲೀ, ಯೋಜನೆಯನ್ನಾಗಲೀ ಸ ಮುಂದಿಟ್ಟಿಲ್ಲ. ಬೆಳೆ ನಷ್ಟಕ್ಕೆ ಪರಿಹಾರ ಕೊ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯೊಂ ದೊಡ್ಡ ಮೋಸದ ಸ್ಕೀಮು ಎಂಬುದನ್ನು ಅರಿ ಚಿತ್ರದುರ್ಗ ಜಿಲ್ಲೆಯ ರೈತರ ಅನುಭವ ನೋ ಗೊತ್ತಾಗುತ್ತದೆ.


ಒಬ್ಬ ರಾಜಕಾರಣಿಯ ಡೆತ್‌ನೋಟ್‌ನಲ್ಲಿನ ಸತ್ಯಗಳು

ಕಲಿಖೊ ಪುಲ್ ಎಂಬ ಅರುಣಾಚಲ ಪ್ರದೇಶದ ರಾಜಕಾರಣಿಯ ಹೆಸರನ್ನು ಹೆಚ್ಚಿನ ಜನ ಕೇಳಿರಲಿಲ್ಲ. ಆತನ ಇರುವು ಕೂಡ ಹೆಚ್ಚಿನ ಜನರಿಗೆ ಗೊತ್ತಾದದ್ದು ಆತ ಹೋದವರ್ಷ ಆಗಸ್ಟ್ 8ರಂದು ಅರುಣಾಚಲ ಪ್ರದೇಶದ ರಾಜಧಾನಿ ಇಟಾನಗರ್‌ನಲ್ಲಿರುವ ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ.

ಇದೀಗ ಪುಲ್ ಅವರ ಹೆಸರು ಮತ್ತೆ ಮಾಧ್ಯಮಗಳಲ್ಲಿ ಪ್ರಸ್ತಾಪವಾಗುತ್ತಿದೆ. ಅದಕ್ಕೆ ಕಾರಣ ಪುಲ್ ಬಿಟ್ಟುಹೋಗಿರುವ 60 ಪುಟಗಳ ಡೆತ್‌ನೋಟ್ ಈಗ ಬಹಿರಂಗಗೊಂಡಿರುವುದು.

ಪುಲ್ ಜೀವನದ ಪಯಣವು ದಟ್ಟದರಿದ್ರ ಸ್ಥಿತಿಯಿಂದ ಭ್ರಷ್ಟನಾಗದೆ ಕೋಟ್ಯಾಧಿಪತಿಯಾದ ಕತೆ; ಪ್ರಾಮಾಣಿಕತೆಯನ್ನು ಉಳಿಸಿಕೊಂಡು ಜನರಿಗೆ ಕೈಲಾದಷ್ಟು ಸಹಾಯ ಮಾಡಲು ಮುಂದಾದ ವ್ಯಕ್ತಿ ಎದುರಿಸುವ ಕಷ್ಟಗಳ ಕತೆ; ತನ್ನ ಉದ್ದೇಶ ಈಡೇರದಿದ್ದಾಗ ನಿರಾಶೆಯಿಂದ ಸಾವನ್ನಪ್ಪಿದ ದುರಂತ ಕತೆ.

ಪುಲ್ ಹುಟ್ಟಿದ್ದು ಅರುಣಾಚಲದ ವಲ್ಲಾ ಎಂಬ ಪುಟ್ಟ ಹಳ್ಳಿಯಲ್ಲಿ. ಆತನ ಹೆತ್ತವರು ಬಡ ಬುಡಕಟ್ಟಿನವರು. ಪುಲ್ ಹುಟ್ಟಿದ ಹದಿಮೂರು ತಿಂಗಳಿಗೆ ಆತನ ತಾಯಿ



ಕಣ್ಣುಮುಚ್ಚಿದರು. ತಂದೆ ಕೂಡ ಪುಲ್ ಆರು ವರ್ಷದ ಬಾಲಕನಾಗಿದ್ದಾಗ ತೀರಿಕೊಂಡರು. ಇಂತಹ ವ್ಯಕ್ತಿ ಪಿಯುಸಿ ಓದುವ ಹಂತಕ್ಕೆ ಬರುವಷ್ಟರಲ್ಲಿ ಕೋಟ್ಯಾಧಿಪತಿಯಾಗಿದ್ದ. ಜನರ ಸೇವೆ ಮಾಡಬೇಕೆಂದು 1994ರಲ್ಲಿ ರಾಜಕಾರಣಕ್ಕೆ ಬಂದನಂತರ ಒಂದೇ ಒಂದು ಚುನಾವಣೆಯಲ್ಲೂ ಸೋಲನ್ನು ಕಾಣಲಿಲ್ಲ. 2016ರಲ್ಲಿ ಮುಖ್ಯಮಂತ್ರಿ ಸ್ಥಾನವನ್ನೂ ಪುಲ್ ಪಡೆದ. ಆದರೆ ಆತ ಆ ಹುದ್ದೆಯಲ್ಲಿದ್ದದ್ದು ಕೇವಲ ನಾಲ್ಕೂವರೆ ತಿಂಗಳು. ಬಂಡಾಯವೆದ್ದಿದ್ದ ಹಲವು ಕಾಂಗ್ರೆಸ್ ಶಾಸಕರು ಮತ್ತು ವಿರೋಧ ಪಕ್ಷವಾದ ಬಿಜೆಪಿಯ ಬೆಂಬಲದೊಂದಿಗೆ ವಿಧಾನಸಭೆಯಲ್ಲಿ ಪುಲ್ ತನ್ನ ಬಹುಮತವನ್ನು ಸಾಬೀತು ಮಾಡಿದರೂ 2016ರ ಜುಲೈ ತಿಂಗಳಲ್ಲಿ ಸುಪ್ರೀಂಕೋರ್ಟ್ ಆತನ ಸರ್ಕಾರ ಅಸಿಂಧು ಎಂದು ತೀರ್ಪು ನೀಡಿತು. ಈ ತೀರ್ಪಿನ ನಂತರ ಡಿಪ್ರೆಶನ್‌ಗೆ ತುತ್ತಾದ ಪುಲ್ ಒಂದು ತಿಂಗಳ ನಂತರ ಆತ್ಮಹತ್ಯೆ ಮಾಡಿಕೊಂಡರು. ಮುಖ್ಯಮಂತ್ರಿ ಸ್ಥಾನ ಹೋಗಿದ್ದರೂ ಅವರ ಸ್ವಂತ ಮನೆ ರಿಪೇರಿ ಆಗುತ್ತಿದ್ದರಿಂದ ಅವರಿನ್ನೂ ಮುಖ್ಯಮಂತ್ರಿ ನಿವಾಸದಲ್ಲೇ ತಂಗಿದ್ದರು. ಅಲ್ಲೇ ಡೆತ್‌ನೋಟ್ ಬರೆದಿಟ್ಟು ಈ ಲೋಕಕ್ಕೆ ವಿದಾಯ ಹೇಳಿದರು. ಆ ಡೆತ್‌ನೋಟ್ ಇವತ್ತಿನ ಭ್ರಷ್ಟಗೊಂಡಿರುವ ರಾಜಕೀಯದ ಸ್ಥಿತಿಗೆ ಕನ್ನಡಿ ಹಿಡಿದಿರುವುದರಿಂದ ಅದರ ಆಯ್ದ ಭಾಗಗಳನ್ನು ಇಲ್ಲಿ ನೀಡುತ್ತಿದ್ದೇನೆ.

"ಮಾನವನೊಬ್ಬ ಹುಟ್ಟಿದಾಗ ಅವನು ಹೆಸರು, ಜಾತಿ, ಧರ್ಮ, ಸಮುದಾಯ, ಭಾಷೆ, ಪ್ರದೇಶ, ಆಸ್ತಿ, ಐಶ್ವರ್ಯ ಯಾವುದೂ ಇಲ್ಲದೆ ಬರುತ್ತಾನೆ. ಆದರೆ ಈಗಿನ ಮಾನವ ಈ ಸತ್ಯಗಳನ್ನು ಮರೆಯುತ್ತಿದ್ದಾನೆ. ಇವೆಲ್ಲವುಗಳಿಗಾಗಿ ಆತ ಕೊಲೆ ಮಾಡಲೂ ಸಿದ್ಧನಾಗಿದ್ದಾನೆ.

ನನಗೆ ಚೆನ್ನಾಗಿ ಗೊತ್ತು ಈ ಲೋಕದಲ್ಲಿ ಇರುವ ಯಾವುದೂ ನನ್ನದಲ್ಲ - ಈ ದೇಹವೊಂದನ್ನು ಹೊರತುಪಡಿಸಿ. ನಾನು ತೊಡುವ ಬಟ್ಟೆ, ವಾಸಿಸುವ ಮನೆ, ಹಣ, ಐಶ್ವರ್ಯ, ವಾಹನಗಳು, ಭೂಮಿ, ಅಧಿಕಾರ ಮತ್ತು ಸ್ಥಾನಮಾನ - ಯಾವುದರ ಮೇಲೆ ನಮ್ಮ ಹಕ್ಕು ಸ್ಥಾಪಿಸಲು ಹವಣಿಸುತ್ತೇವೋ - ಅದ್ಯಾವುದೂ ಯಾವ ರೀತಿಯಲ್ಲೂ ನನ್ನದಲ್ಲ.

ಬಾಲಕನಾಗಿದ್ದಾಗಲೇ ನಾನು ಕಷ್ಟಗಳನ್ನು ಎದುರಿಸಿದೆ. ಒಂದು ಹೊತ್ತಿನ ಊಟಕ್ಕಾಗಿ, ನನ್ನ ಹಕ್ಕುಗಳಿಗಾಗಿ ಸವಾಲುಗಳನ್ನು ಎದುರಿಸಿದೆ. ಚಿಕ್ಕವನಾಗಿದ್ದಾಗ ಒಂದು ಹೊತ್ತಿನ ಊಟ ಬೇಯಿಸಲು ಹಲವಾರು ಮೈಲಿಗಳನ್ನು ಸುತ್ತಾಡಿ ಸೌದೆ ಸಂಗ್ರಹಿಸುತ್ತಿದ್ದೆ. ಬಡತನ ಮತ್ತು ಅಸಹಾಯಕತೆಯಲ್ಲಿ ಸಿಲುಕಿಕೊಂಡಿದ್ದ ನಾನು ಒಂದೂವರೆ ರೂಪಾಯಿ ದಿನಗೂಲಿಗಾಗಿ (ತಿಂಗಳಿಗೆ 45 ರೂ.) ಮರಗೆಲಸ ಮಾಡುತ್ತಿದ್ದೆ. ಇವತ್ತಿಗೂ ಆ ವೃತ್ತಿಯ ಸಲಕರಣೆಗಳು ನನ್ನ ಬಳಿ ಇವೆ.

ನಾನು ಕೆಲಸ ಮಾಡುತ್ತಿದ್ದರಿಂದ ಶಾಲೆಗೆ ಹೋಗಲು ಆಗುತ್ತಿರಲಿಲ್ಲ. ಬದಲಾಗಿ ರಾತ್ರಿ ವೇಳೆ ವಯಸ್ಕರಿಗೆ ನಡೆಸುತ್ತಿದ್ದ ಶಾಲೆಗೆ ಹೋಗುತ್ತಿದ್ದೆ. ಅಲ್ಲಿ ನನ್ನ ಅರ್ಪಣಾತ್ಮಕ ಗುಣ ಮತ್ತು ನಿಷ್ಠೆಯನ್ನು ಕಂಡವರು ನನಗೆ ಒಂದು ಟೆಸ್ಟ್ ಕೊಟ್ಟು, ಅದರಲ್ಲಿ ಪಾಸ್ ಆಗಿದ್ದರಿಂದ ನೇರವಾಗಿ ಆರನೆ ತರಗತಿಗೆ ಸೇರಿಸಿದರು. ಆಗ ನಾನು ಹಗಲು ಓದುತ್ತಾ ರಾತ್ರಿ ವಾಚ್‌ಮನ್ ಕೆಲಸ ಮಾಡುತ್ತಿದ್ದೆ. ನಂತರ ನಾನು ಕಂಟ್ರಾಕ್ಟರ್ ಆದೆ. ಮೊದಲು 400 ರೂ.ಗಳಿಗೆ ಚಿಕ್ಕ ಮನೆಯನ್ನು ನಿರ್ಮಿಸುವುದರಿಂದ ಶುರು ಮಾಡಿ ರಸ್ತೆ ನಿರ್ಮಾಣ, ಸರ್ಕಾರಿ ಗೃಹಗಳು ಮತ್ತು ಸೇತುವೆಗಳನ್ನು ಕಟ್ಟಿದೆ. ನಾನು ಪಿಯುಸಿ ಹಂತಕ್ಕೆ ಬಂದಾಗ ನನ್ನ ಬಳಿ ಒಂದು ಜಿಪ್ಸಿ ವ್ಯಾನ್ ಮತ್ತು ನಾಲ್ಕು ಲಾರಿಗಳಿದ್ದವು.

ನಾನು ಕಾಲೇಜು ಮೆಟ್ಟಿಲು ಹತ್ತಿದಾಗ ನನ್ನ ವ್ಯವಹಾರವೂ ಬೆಳೆದಿತ್ತು. ನನ್ನದೇ ವಾಹನ, ಕೆಲಸಗಾರರು, ಮೂರು ಕೊಠಡಿಗಳಿರುವ ಒಂದು ಆರ್‌ಸಿಸಿ ಮನೆ ಇದ್ದವು. ಕಳೆದ 23 ವರ್ಷಗಳಿಂದ ನಾನು ವಿವಿಧ ಇಲಾಖೆಗಳಿಗೆ ಸಚಿವನಾಗಿದ್ದರೂ ಆ ಮನೆಗೆ ಇನ್ನೊಂದು ಕೊಠಡಿಯನ್ನು ಕಟ್ಟಿಸಿಲ್ಲ.

ಶಾಸಕನಾಗುವ ಮುನ್ನ ನನ್ನ ಹತ್ತಿರ ಒಂದು ಸಾ ಮಿಲ್ ಇತ್ತು. ಅದರಿಂದ ನನಗೆ ವರ್ಷಕ್ಕೆ 46 ಲಕ್ಷ ಆದಾಯ ಬರುತ್ತಿತ್ತು. ನಾನು ಸ್ವಪ್ರಯತ್ನದಿಂದ ಮೇಲೆ ಬಂದವನು ಎಂಬುದರ ಬಗ್ಗೆ ನನಗೆ ಹೆಮ್ಮೆ ಇದೆ. ಆದರೆ ಅದರ ಬಗ್ಗೆ ಅಹಂಕಾರ ಇಲ್ಲ. ನನ್ನ ಐಶ್ವರ್ಯವನ್ನು ಬಡವರಿಗೆ, ಅಸಹಾಯಕರಿಗೆ, ಅನಾಥರಿಗೆ ಸಹಾಯ ಮಾಡಲು ಬಳಸುತ್ತೇನೆ. ಈಗಲೂ 96 ವಿದ್ಯಾರ್ಥಿಗಳಿಗೆ ಪ್ರತಿವರ್ಷ ಆರ್ಥಿಕ ನೆರವು ನೀಡುತ್ತಿದ್ದೇನೆ.

ನಾನು 94ರಲ್ಲಿ ರಾಜಕೀಯಕ್ಕೆ ಬಂದಾಗ, ನನ್ನ ಹತ್ತಿರ ಇದ್ದ ಎರಡು ಟ್ರೇಡಿಂಗ್ ಲೈಸೆನ್ಸ್‌ಗಳನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದೆ. ಯಾಕೆಂದರೆ ನನ್ನ ವ್ಯವಹಾರವನ್ನು ರಾಜಕೀಯದಿಂದ ಪ್ರತ್ಯೇಕವಾಗಿಡಬೇಕು ಎಂದು.

2007ರಲ್ಲಿ ಮುಖ್ಯಮಂತ್ರಿ ಆಗುವ ಅವಕಾಶ ನನಗೆ ಬಂತು. ಆದರೆ ನಿರಾಕರಿಸಿದೆ. 2011ರಲ್ಲೂ ಮತ್ತೊಮ್ಮೆ ಅಂತಹ ಅವಕಾಶ ಬಂತು. ಆಗಲೂ ನಿರಾಕರಿಸಿದೆ. ಯಾಕೆಂದರೆ ನನಗೆ ಚೆನ್ನಾಗಿ ಗೊತ್ತಿತ್ತು, ಶಾಸಕರು ಮತ್ತು ಮಂತ್ರಿಗಳು ಸಂವಿಧಾನಕ್ಕೆ ಬದ್ಧನಾಗಿ ಕೆಲಸ ಮಾಡಲು ನನ್ನನ್ನು ಬಿಡುವುದಿಲ್ಲ ಎಂದು. ಆದರೆ ಮೂರನೆ ಬಾರಿ (2016ರ ಫೆಬ್ರವರಿ) ಅಂತಹ ಅವಕಾಶ ಮತ್ತೆ ಬಂದಾಗ ನನ್ನ ರಾಜ್ಯದ ಅಭಿವೃದ್ಧಿಗಾಗಿ ನನ್ನ ಕನಸುಗಳನ್ನು ಈಡೇರಿಸಬಹುದು ಎಂಬ ಆಶಯದಿಂದ ಒಪ್ಪಿಕೊಂಡೆ.

14-15 ಲಕ್ಷ ಜನಸಂಖ್ಯೆ ಇರುವ ಈ ರಾಜ್ಯ 60 ಶಾಸಕರನ್ನು ಆಯ್ಕೆಮಾಡುತ್ತದೆ. ಅವರಲ್ಲಿ 12 ಜನ ಮಂತ್ರಿಗಳಾಗುತ್ತಾರೆ. ನಮ್ಮ ರಾಜಕಾರಣಿಗಳು, ತಮ್ಮ ಸಂಸಾರ, ಸಮುದಾಯ, ಜಾತಿ ಮತ್ತು ಧರ್ಮದಂತಹ ಸಂಕುಚಿತ ಭಾವನೆಗಳಿಂದ ಹೊರಬರಬೇಕು. ಆದರೆ ಅಂತಹ ಮನಸ್ಥಿತಿ ಹೊಂದಿರುವ ಜನನಾಯಕರು ಇವತ್ತು ತುಂಬಾ ವಿರಳವಾಗಿದ್ದಾರೆ.

ದೋರ್ಜಿ ಖಂಡು (2007ರಿಂದ 2011ರಲ್ಲಿ ಹೆಲಿಕಾಪ್ಟರ್ ಅಪಘಾತದಲ್ಲಿ ಸಾವನ್ನಪ್ಪುವ ತನಕ ಮುಖ್ಯಮಂತ್ರಿ ಆಗಿದ್ದವರು) ಖಂಡು ಸೇನೆಯಲ್ಲಿ ಓರ್ವ ಸಾಮಾನ್ಯ ಸೇನಾನಿ ಆಗಿದ್ದವರು. ಅವರು ಶಾಸಕರಾದಾಗಲೂ ಅವರ ಬಳಿ ಹೆಚ್ಚಿನ ಆಸ್ತಿ ಇರಲಿಲ್ಲ. ಆದರೆ ಸಚಿವರಾದ ನಂತರ ಅವರು ಅಪಾರ ಭ್ರಷ್ಟಾಚಾರದಲ್ಲಿ ತೊಡಗಿ ಎಲ್ಲೆಡೆ ಆಸ್ತಿಪಾಸ್ತಿಗಳನ್ನು ಮಾಡಿದರು. ಇವತ್ತು ಜನ ಖಂಡು ಬರೋಬ್ಬರಿ 1,700 ಕೋಟಿ ಆಸ್ತಿಯ ಒಡೆಯ ಎನ್ನುತ್ತಾರೆ. ಆದರೆ ಏನು ಪ್ರಯೋಜನ? ಆತ ಈಗಿಲ್ಲ. ಇಷ್ಟೊಂದು ಆಸ್ತಿ ಮಾಡಿದ್ದರಿಂದ ಆತನಿಗೆ ಸಿಕ್ಕಿದ್ದಾದರೂ ಏನು?

(ನನ್ನ ಸರ್ಕಾರದ ವಿರುದ್ಧ ನಡೆದ) ಸುಪ್ರೀಂಕೋರ್ಟ್ ವಿಚಾರಣೆಗೆ - ಒಟ್ಟು 90 ಕೋಟಿ ರೂಪಾಯಿಗಳನ್ನು ನನ್ನ ವಿರೋಧಿಗಳು ವೆಚ್ಚಮಾಡಿದರು. ತೀರ್ಪು ನನ್ನ ವಿರುದ್ಧ ಬಂತು. ಈ ವಿಚಾರಣೆಗೆ ಸಂಬಂಧಪಟ್ಟಂತೆ ಕೆಲವರು ನನಗೆ ಫೋನ್ ಮಾಡಿ 86 ಕೋಟಿ ರೂಪಾಯಿಗಳಷ್ಟು ಲಂಚ ನೀಡಿದರೆ ತೀರ್ಪು ನನ್ನ ಪರವಾಗಿ ಬರುವಂತೆ ಮಾಡುವುದಾಗಿ ಹೇಳಿದರು. ಆದರೆ ನನ್ನ ಆತ್ಮಸಾಕ್ಷಿ ಅದಕ್ಕೆ ಒಪ್ಪಲಿಲ್ಲ. ನಾನು ಭ್ರಷ್ಟನಲ್ಲ. ನನ್ನ ಹತ್ತಿರ ಅಕ್ರಮವಾಗಿ ಪಡೆದ ದುಡ್ಡಿಲ್ಲ. ಜೊತೆಗೆ ಈ ಅಧ್ವಾನದೊಳಗೆ ಸರ್ಕಾರವನ್ನು ಎಳೆಯುವ ಆಸೆಯೂ ನನಗಿರಲಿಲ್ಲ. ಜನರ ಸೊತ್ತಾದ ಸರ್ಕಾರದ ದುಡ್ಡನ್ನು ನನ್ನ ಅಧಿಕಾರ ಉಳಿಸಿಕೊಳ್ಳಲು ಈ ವಿಚಾರಣೆಗೆ ಉಪಯೋಗಿಸಲು ನನಗೆ ಇಷ್ಟವಿರಲಿಲ್ಲ. ಅದರ ಪರಿಣಾಮ ಈಗ ಜನರ ಕಣ್ಣಮುಂದಿದೆ.

ಸುಪ್ರೀಂಕೋರ್ಟ್ ತೀರ್ಪು ನನ್ನ ವಿರುದ್ಧ ಬಂದಾಗ ಹಲವಾರು ಶಾಸಕರು ನನ್ನ ಸರ್ಕಾರ ಉಳಿಸಲು 15 ಕೋಟಿ ರೂಪಾಯಿಗಳನ್ನು ಕೇಳಿದರು. ಆದರೆ ನಾನಾಗಲಿ, ಇತರರಾಗಲಿ ಹಣ ಮಾಡಲಿ ಎಂಬ ಉದ್ದೇಶದಿಂದ ನಾನು ಮುಖ್ಯಮಂತ್ರಿ ಆಗಿರಲಿಲ್ಲ. ಸಾರ್ವಜನಿಕರಿಗಾಗಿ ಸರ್ಕಾರದ ಹಣವನ್ನು ರಕ್ಷಿಸಬೇಕು ಎಂಬ ಉದ್ದೇಶ ನನ್ನದಾಗಿತ್ತು. ರಾಜ್ಯದಲ್ಲಿ ರಾಜಕೀಯ ವಿಷಮಸ್ಥಿತಿ ಉದ್ಭವಿಸಿದಾಗಲೆಲ್ಲ ಭ್ರಷ್ಟ ಶಾಸಕರಿಗೆ ಸುಗ್ಗಿಕಾಲ ಬಂದಂತೆ. ಯಾಕೆಂದರೆ ಅವರು ಎರಡೂ ಕಡೆಗಳಿಂದ ಹಣ ಪೀಕುತ್ತಾರೆ. ಹಾಗೆ ಮಾಡುವ ಮೂಲಕ ತಮ್ಮನ್ನೇ ಹರಾಜು ಹಾಕಿಕೊಳ್ಳುತ್ತಾರೆ.

ನಾನು ಕಾಲೇಜ್ ವಿದ್ಯಾರ್ಥಿ ಆಗಿದ್ದಾಗಲೇ ಕಾಂಗ್ರೆಸ್ ಪಕ್ಷ ಸೇರಿದೆ. ಕಳೆದ 33 ವರ್ಷಗಳಿಂದ ಈ ಪಕ್ಷದಲ್ಲಿದ್ದೇನೆ. ರಾಜೀವ್ ಗಾಂಧಿಯವರ ಅಭಿವೃದ್ಧಿ ಆಶಯಗಳಿಂದ ನಾನು ಈ ಪಕ್ಷ ಸೇರಿದೆ. 1995ರಿಂದ ನನ್ನ ಹಯುಲಿಯಾಂಗ್ ಕ್ಷೇತ್ರದಿಂದ - ರಾಜ್ಯದಲ್ಲೇ ಅತಿಹೆಚ್ಚು ಮತಗಳ ಅಂತರದಿಂದ - ಸತತವಾಗಿ ಆಯ್ಕೆಯಾಗಿದ್ದೇನೆ. ಆದರೆ ಈ ಐತಿಹಾಸಿಕ ಪಕ್ಷಕ್ಕೆ ಈಗ ಜನಸೇವೆ ಮಾಡುವ ಪ್ರಾಮಾಣಿಕರಿಗಿಂತ ಭ್ರಷ್ಟರು ಮತ್ತು ಅಪರಾಧಿಗಳು ಅಗತ್ಯವಾಗಿರುವುದು ನನ್ನಲ್ಲಿ ಬೇಸರ ಹುಟ್ಟಿಸುತ್ತದೆ.

ರಾಜ್ಯದಲ್ಲಿ ರಾಜಕೀಯ ಅನಿಶ್ಚಿತತೆ ಎದ್ದಾಗ ಸೋನಿಯ ಗಾಂಧಿ ಮತ್ತು ರಾಹುಲ್ ಗಾಂಧಿ ನನ್ನನ್ನು ಭೇಟಿ ಆಗಲಿಲ್ಲ. ಸಲ್ಮಾನ್ ಖುರ್ಶಿದ್ ಮತ್ತು ಗುಲಾಮ್ ನಭಿ ಆಜಾದ್ ನನಗೆ ನೆರವು ನೀಡುವುದಾಗಿ ಹೇಳಿದರು. ಆದರೆ (ಹೆಸರನ್ನು ರಹಸ್ಯವಾಗಿಡಲಾಗಿದೆ) ಪಕ್ಷಕ್ಕೆ ಮತ್ತು ಸ್ವಂತಕ್ಕೆ 110 ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದರು. ಇನ್ನೊಬ್ಬರು 130 ಕೋಟಿ ರೂಪಾಯಿಗಳನ್ನು ಕೇಳಿದರು. ನಾನು ಒಪ್ಪಲಿಲ್ಲ.

ಸುಪ್ರೀಂಕೋರ್ಟ್ ತೀರ್ಪಿನಿಂದಾಗಿ ನನಗೆ ನ್ಯಾಯಾಂಗದಲ್ಲೇ ಭರವಸೆ ಇಲ್ಲದಂತಾಗಿದೆ. ನಾನು ಚಿಕ್ಕವನಾಗಿದ್ದಾಗಲೇ ಜನರ ಪ್ರೀತಿ ಗಳಿಸಿದೆ. ನನ್ನ ವಿದ್ಯಾರ್ಥಿ ಕಾಲದಿಂದಲೂ ಯಾವುದೇ ಚುನಾವಣೆಯಲ್ಲಿ ಸೋತಿಲ್ಲ. ಇವತ್ತಿನ ತನಕ ನನ್ನ ರಾಜಕೀಯ ಜೀವನದಲ್ಲಿ ಸೋಲನ್ನು ನೋಡಿದವನಲ್ಲ. 1995ರಲ್ಲಿ ಮೊದಲ ಬಾರಿಗೆ ಶಾಸಕನಾದಾಗಲೇ ಮಂತ್ರಿಯೂ ಆದೆ. ಅವತ್ತಿನಿಂದ ಹಲವಾರು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದೇನೆ. ನನ್ನ ಹೆಸರಿಗೆ ಒಂದೇಒಂದು ಹಗರಣದ ಕಳಂಕ ಮೆತ್ತಿಕೊಂಡಿಲ್ಲ. ಆದ್ದರಿಂದ ನನಗೆ ಜೀವನದಲ್ಲಿ ಬೇಸರವಿಲ್ಲ. ಈ ಕಾರಣಕ್ಕೇ ಈ ಸುಪ್ರೀಂಕೋರ್ಟ್ ತೀರ್ಪನ್ನೂ ನನಗಾದ ಸೋಲು ಎಂದು ನಾನು ಭಾವಿಸುವುದಿಲ್ಲ.

ನನ್ನ ಪ್ರೀತಿಯ ಜನರಿಗೆ ನನ್ನದೊಂದು ಮನವಿ ಇದೆ. ಸಾರ್ವಜನಿಕ ಹಿತಾಸಕ್ತಿಗಾಗಿ ನಿಮ್ಮ ಮತವನ್ನು ಚಲಾಯಿಸಿ. ಒತ್ತಡಗಳಿಗೆ ಮಣಿದು ನಿಮ್ಮ ಭವಿಷ್ಯವನ್ನೇ ಕೊಂದುಹಾಕದಿರಿ. ಯಾವುದೇ ಬಲಾಢ್ಯನಿಗೆ ಹೆದರದಿರಿ. ಚುನಾವಣೆ ಸಮಯದಲ್ಲಿ ಹಂಚಲಾಗುವ ಹೆಂಡ ಮತ್ತು ಹಣದ ಆಮಿಷಕ್ಕೆ ಬಲಿಯಾಗದಿರಿ. ನಿಮ್ಮ ಹಕ್ಕುಗಳನ್ನು ಬಲಿಕೊಡದಿರಿ. ಮತ ಚಲಾಯಿಸುವ ಮುನ್ನ ನಿಮ್ಮ ಮಕ್ಕಳ ಮುಖ ನೋಡಿ ಅವರ ಭವಿಷ್ಯದ ಬಗ್ಗೆ ನೀವು ಯೋಚಿಸಿದರೆ ಖಂಡಿತವಾಗಿಯೂ ನಿಮ್ಮ ಓಟು ಸರಿಯಾದ ಅಭ್ಯರ್ಥಿಗೆ ಹೋಗುತ್ತದೆ. ಜನರು ಅಭ್ಯರ್ಥಿಯ ಚುನಾವಣಾ ಸ್ಲೋಗನ್‌ಗಳ ಟೊಳ್ಳುತನವನ್ನು ಅರಿಯಬೇಕು. ಅಭ್ಯರ್ಥಿ ಮತ ಕೇಳಿದಾಗ ಮತದಾರರು ಆತನನ್ನು ಪ್ರಶ್ನಿಸಬೇಕು; ಆತನ ಹಿನ್ನಲೆ, ಮೌಲ್ಯಗಳು, ನಿಷ್ಠೆ ಮತ್ತು ನಡವಳಿಕೆಯನ್ನು ಅಳೆದು ತೂಗಿದ ನಂತರ ಮತ ಚಲಾಯಿಸಬೇಕು.

ದೇವರೇ ಜನರನ್ನು ಕಾಪಾಡಬೇಕು. ಆದರೆ ಚುನಾವಣೆ ಸಮಯದಲ್ಲಿ ದೇವರೇನು ಇಲ್ಲಿಗೆ ಬಂದು ಈ ಭ್ರಷ್ಟ ವ್ಯವಸ್ಥೆಯನ್ನು ಶುಚಿಗೊಳಿಸಲು ಮತ ಚಲಾಯಿಸುವುದಿಲ್ಲವಲ್ಲ. ಜನ ಈ ನಿದ್ರಾವಸ್ಥೆಯಿಂದ ಯಾವಾಗ ಎಚ್ಚೆತ್ತುಕೊಳ್ಳುವುದು ಎಂದು ನಾನು ಪ್ರಶ್ನಿಸುತ್ತೇನೆ. ನಾಯಕರ ಐಶಾರಾಮಿ ಕಾರ್‌ಗಳಿಗೆ ಆಕರ್ಷಿತರಾಗದೆ, ರಾಜಕಾರಣಿಗಳು ಕೊಡುವ ಹೆಂಡ ಮತ್ತು ಹಣದ ಆಮಿಷಕ್ಕೆ ಬಲಿಯಾಗದೆ, ಅವರು ಹೇಳುವ ಸುಳ್ಳುಗಳನ್ನೆಲ್ಲ ಸತ್ಯ ಎಂದು ನಂಬದೇ ಇನ್ನೆಷ್ಟು ಕಾಲ ಹೀಗೆ ಮುಂದುವರೆಯುತ್ತಾರೆಂದೂ ನಾನು ಪ್ರಶ್ನಿಸುತ್ತೇನೆ. ವಾಸ್ತವವಾಗಿ ಜನರಿಗೆ ಭ್ರಾಂತಿಸ್ವರ್ಗದಲ್ಲೇ ಇರಬೇಕು ಅನ್ನಿಸುತ್ತಿರಬಹುದು. ಜನರೇ ತಮಗೆ ಏನು ಬೇಕೆಂದು ನಿರ್ಧರಿಸಬೇಕು. ನನ್ನ ಕೆಲಸ ಅವರಿಗೆ ಸತ್ಯವನ್ನು ಹೇಳುವುದಷ್ಟೇ. ಏಕೆಂದರೆ ಚುನಾವಣೆಗಳು ಜನರ ಕೈಗಳಲ್ಲಿದೆ."

* * *

ಕಂಡಹಾಗೆ





• ಗೌರಿ ಲಂಕೇಶ್

editorlankesh@gmail.com


ಕಳೆದ ವಾರ ನನ್ನ 'ಮಗ' ಕನ್ಹಯ್ಯ ಕುಮಾರನ ಬಗ್ಗೆ ಬರೆದಿದ್ದೆ. ಈ ವಾರ ಇನ್ನೊಬ್ಬ 'ಮಗ'ನ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕಿದೆ. ಆತ ಗುಜರಾತಿನ ಜಿಗ್ನೇಶ್ ಮೇವಾನಿ. ಮೂರು ದಿನಗಳ ಹಿಂದೆ ನನಗೆ ಫೋನ್ ಮಾಡಿದ ಜಿಗ್ನೇಶ್ ಇದೇ 15ರಂದು ಮಂಗಳೂರಿನಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಬರುತ್ತಿದ್ದೇನೆ ಎಂದ. "ಹೌದಾ?" ಅಂದಿದ್ದಕ್ಕೆ, "ಆದರೆ ಸುಮ್ಮನೆ ಅಲ್ಲಿಗೆ ಬಂದು ವಾಪಸ್ ಬರಲು ನನಗೆ ಇಷ್ಟವಿಲ್ಲ. ಆದ್ದರಿಂದ ಬೆಂಗಳೂರಿಗೆ ಬಂದು ನಿನ್ನ ಜೊತೆ ಎರಡು ದಿನ ಇದ್ದು ಹೋಗುತ್ತೇನೆ. ಓಕೆ?" ಅಂದ. "ಅಯ್ಯೋ, ನನ್ನ ಕಂದ ಬಾ. ನಿನಗೆ ಹೋಟೆಲ್ ರೂಮ್ ಬುಕ್ ಮಾಡಬೇಕಾ?" ಅಂದೆ. "ನಿನ್ನ ಜೊತೆ ಬೆಂಗಳೂರಿನಲ್ಲಿ 'ಚಿಲ್' ಮಾಡೋದಕ್ಕೆ ಬರುತ್ತೇನೆ. ಹೋಟೆಲ್ ರೂಮ್ ಯಾಕೆ. ನಿನ್ನ ಮನೆಯಲ್ಲೇ ಇರುತ್ತೇನೆ. ನನಗೆ ಒಂದು 'ಬಿಯರ್' ಮತ್ತು ಊಟ ಹಾಕಿಸು" ಎಂದು ನಕ್ಕ.


ಕನ್ಹಯ್ಯನನ್ನು ಭೇಟಿ ಆದಾಗಿನಿಂದ ನಾನಿನ್ನೂ 'ಸನ್'ಸ್ಟ್ರೋಕ್‌ನಿಂದ ಹೊರಬಂದಿಲ್ಲ. ಈಗ ಇನ್ನೊಬ್ಬ 'ಮಗ'ನೂ ಮತ್ತೊಂದು 'ಸನ್'ಸ್ಟ್ರೋಕ್ ಕೊಡುವುದಕ್ಕೆ ಬರುತ್ತಿದ್ದಾನೆ. ಇಷ್ಟೊಂದು ಪ್ರೀತಿಯ, ಪ್ರತಿಭಾವಂತರಾದ, ಭವಿಷ್ಯದ ಭರವಸೆಗಳಾದ, ಹೊಸ ತಲೆಮಾರಿನ ನಾಯಕರಾದ ಇಂತಹ ಮಕ್ಕಳನ್ನು ಹೊಂದಿರುವ ನಾನು ಧನ್ಯಳು!!!


ಸುರೇಶ್‌ಪ್ರಭು


ಮನೋಹರ್ ಪಾರಿಕ್ಕರ್


ನಿತಿನ್ ಗಡ್ಕರಿ


ಪರ್ತಗಾಳಿ ಸ್ವಾಮಿ



ಮೋದಿ


ಕುಮಟಾ: ಬೈಪಾಸ್‌ಗಾಗಿ ಆರ್‌ಎಸ್‌ಎಸ್-ದೋಷಪಾಂಡೆ ಜಂಟಿ ದೋಖಾ!!

ಪಾಳೆಗಾರಿ ಪ್ರುಢಾರಿ ಮತ್ತು ಅಬ್ರಾಹ್ಮಣ ವಿರೋಧಿ ಆರ್‌ಎಸ್‌ಎಸ್ ಒಂದಾಗಿ ಕಿತಾಪತಿ ಮಾಡಿದರೆ ಅದೆಂಥ ಅನಾಹುತ ಆಗಬೇಡಾ? ಅಂಥದ್ದೊಂದು ದುರಂತವಾಗುವ ಆತಂಕದಲ್ಲಿ ಮೀನು-ಅಡಿಕೆ-ಉಪ್ಪು ಹವೆಯ ಮುಗ್ಧ ಕುಮಟಾ ಚಡಪಡಿಸುತ್ತಿದೆ. ಇಡೀ ತಾಲ್ಲೂಕಿನ ಜೀವನಾಡಿಯಂತಿರುವ ರಾಷ್ಟ್ರೀಯ ಹೆದ್ದಾರಿ 66 (ಎನ್‌ಎಚ್-17) ಆಪೋಷನ ಪಡೆದು ಅಮಾಯಕ ಶೂದ್ರ ಸಂಕುಲದ ಮಾರಣಹೋಮ ಮಾಡಲು ಕಪ್ಪುಕಾಸಿನ ಕೊಂಕಣಿ ವರ್ತಕರ ಠೋಳಿ ಕರಾಮತ್ತು ಮಾಡುತ್ತಿದೆ. ಈ ಪಾಪಿಷ್ಟರ ದೋ ನಂಬರಿ ದಂಧೆ ಸಾಮ್ರಾಜ್ಯ ಸಂರಕ್ಷಿಸಲು ಮೋದಿ ಮಾಮನ ಸರ್ಕಾರದ ಆಯಕಟ್ಟಿನ ಕೊಂಕಣಿ-ಚಿಡ್ಡಿ ಸಚಿವಾಗ್ರೇಸರು ಮತ್ತು ಸಿದ್ದು ಸಂಪುಟದ ಸೈತಾನ ದೋಷಪಾಂಡೆ ಟೊಂಕಕಟ್ಟಿ ನಿಂತಿರುವುದು ಕುಮಟಿಗರನ್ನು ಕಂಗಾಲಾಗಿಸಿಬಿಟ್ಟದೆ!!

ಕೇಂದ್ರದ 'ದೇಶೋದ್ಧಾರಕ' ಸರ್ಕಾರ 300 ಕೋಟಿ ರೂಪಾಯಿ ಬೊಕ್ಕಸಕ್ಕೆ ದಂಡ ಮಾಡಿ ಕುಮಟಾದಲ್ಲಿ ಅಗತ್ಯವೇ ಇಲ್ಲದ ಬೈಪಾಸ್ ಹೆದ್ದಾರಿ ಮಾಡಲು ರಹಸ್ಯ ತೀರ್ಮಾನ ಮಾಡಿಬಿಟ್ಟಿದೆ. ಸರ್ಕಾರಿ ಜಾಗ ಕಬಳಿಸಿ ಭರ್ಜರಿ ಕಟ್ಟಡ ಕಟ್ಟಿರುವ ನಾಲ್ಕೈದು ಕೊಂಕಣಿ ಖಳರನ್ನು ಬಿಟ್ಟರೆ ಈ ಬೈಪಾಸ್ ಬೇಕೆಂದು ಒಂದೇ ಒಂದು ನರಪಿಳ್ಳೆ ಹೇಳುತ್ತಿಲ್ಲ. ನಿಯೋಜಿತ ಚತುಷ್ಪಥ ಹೆದ್ದಾರಿ ನೇರ ಹೋದರೆ ಯಾವ ಪರವಾನಗಿಯೂ ಇಲ್ಲದೆ ಅಕ್ರಮವಾಗಿ ಬಹುಮಹಡಿ ಕಟ್ಟಡಗಳನ್ನು ಕಟ್ಟಿರುವ ಶಿರೀಶ್ ನಾಯಕ್, ದಾಸಾ ರಂಗಶಾನಭಾಗ್, ರಾಮನಾಥ ವಾಸುದೇವ ಶಾನಭಾಗ್, ಶೇಷಗಿರಿ ಕೃಷ್ಣ ಶಾನಭಾಗ್ (ಬಲಮುರಿ ದಾಸ) ಮತ್ತು ಮಹಾಲಕ್ಷ್ಮೀ ಅಸೋಸಿಯೇಟ್ಸ್‌ನ ಕೊಂಕಣಿಗನ ಬಿಟ್ಟರೆ ಮತ್ಯಾರಿಗೂ ಅನುಕೂಲವಾಗದು.

ಈ ಭೂಗಳ್ಳರೆಲ್ಲ 1970ರ ನಂತರ, ಅಂದರೆ 1968ರಲ್ಲಿ ರಾಷ್ಟ್ರೀಯ ಹೆದ್ದಾರಿಗಾಗಿ ಸರ್ಕಾರ ಪರಿಹಾರ ಕೊಟ್ಟು ಭೂಮಿ ವಶಪಡಿಸಿಕೊಂಡನಂತರ ಅತಿಕ್ರಮಣ ಮಾಡಿದ ಪಕ್ಕಾ ಅಪರಾಧಿಗಳು. ಈ ಜಾಗಕ್ಕಾಗಿ ಈಗಾಗಲೇ ಸರ್ಕಾರ ಪರಿಹಾರ ಬಟಾವಡೆ ಮಾಡಿಯಾಗಿದೆ. ಆದರೂ ಈ ಹಪಾಹಪಿ ಮಂದಿ ಹೆದ್ದಾರಿ ಪ್ರಾಧಿಕಾರದ ಜಾಗ ಕಬ್ಜಾ ಮಾಡಿಕೊಂಡಿದ್ದಾರೆ. ಸ್ಥಳೀಯಾಡಳಿತದ ಪರವಾನಗಿಯೂ ಸದ್ರಿ ಕಟ್ಟಡಗಳಿಗಿಲ್ಲ. ಅಷ್ಟೇ ಅಲ್ಲ, ಹೆದ್ದಾರಿ ಪ್ರಾಧಿಕಾರ ಈ ಅತಿಕ್ರಮಣ ಕಟ್ಟಡಗಳನ್ನು ತೆರವು ಮಾಡುವಂತೆ ಜಿಲ್ಲಾಧಿಕಾರಿಗೂ ಹೇಳಿದ್ದಿದೆ. ಇಷ್ಟಾದರೂ ದುಡ್ಡಿನ ದುರಹಂಕಾರದಿಂದ ಕಟ್ಟಡ ನಿರ್ಮಾಣ ಮಾಡಲಾಗಿದೆ.



ಚಡ್ಡಿ ಬಳಗದ ಅಕ್ರಮ ಕಟ್ಟಡ


ಚಡ್ಡಿ ಬಳಗದ ಬಿಲ್ಡಿಂಗ್ ಈ ಅಕ್ರಮ ಕಟ್ಟಡ ಉಳಿಸಲು ದುಬಾರಿ ಬೈಪಾಸ್

ಹೆದ್ದಾರಿ ಪ್ರಾಧಿಕಾರಿ 2013-14ರಲ್ಲಿ ಚತುಷ್ಪಥ ಕಾಮಗಾರಿ ಹಚ್ಚಿಕೊಂಡಾಗ ಬೈಪಾಸ್‌ನ ಪ್ರಸ್ತಾಪವೇ ಇರಲಿಲ್ಲ. ನೇರವಾಗಿ ಹೆದ್ದಾರಿ ಹೋದರೆ ತಮ್ಮ ಕಳ್ಳ ಕಟ್ಟಡಕ್ಕೆ, ವಾಣಿಜ್ಯ ಮಳಿಗೆಗೆ, ವಾಸ್ತವ್ಯದ ಫ್ಲಾಟ್‌ಗಳಿಗೆ ಸಂಚಕಾರ ಬರುತ್ತದೆಂದು ಕಂಗಾಲು ಬಿದ್ದ ನಾಯಕ್-ಶಾನ್‌ಭಾಗ್ ಗ್ಯಾಂಗ್ ದೇಶಪಾಂಡೆ ಮೂಲಕ ಅಂದಿನ ಹೆದ್ದಾರಿ ಮಂತ್ರಿ ಆಸ್ಕರ್ ಫರ್ನಾಂಡಿಸ್‌ಗೆ ಬೈಪಾಸ್ ಯೋಜನೆ ಮಾಡುವಂತೆ ಬೆನ್ನಿಗೆ ಬಿದ್ದಿತ್ತು. ದಿಲ್ಲಿ ಮಟ್ಟದಲ್ಲಿ ದೋಷಪಾಂಡೆ ಸಾಹೇಬ ಹಗಲು-ರಾತ್ರಿ ತನ್ನ ಈ ಚೋರ ಚೇಲಾಗಳ ಅಕ್ರಮ ಆಸ್ತಿ ಉಳಿಸಲು ತಿಪ್ಪರಲಾಗ ಹಾಕಿದ ದಾಖಲೆ ಇದೆ! ಅಷ್ಟರಲ್ಲೇ ಕೇಂದ್ರದ ಯುಪಿಎ ಸರ್ಕಾರ ಪತನವಾಗಿ ಸ್ವಯಂಘೋಷಿತ ದೇಶಭಕ್ತರ ಆಡಳಿತ ಆರಂಭವಾಯ್ತು.

ಕಾರವಾರ-ಹೊನ್ನಾವರ-ಭಟ್ಕಳ-ಅಂಕೋಲೆಯಲ್ಲೂ ಹೆದ್ದಾರಿ ಅಗಲೀಕರಣದ ಬಗ್ಗೆ ಒಂದಿಷ್ಟು ವಿರೋಧ ವ್ಯಕ್ತವಾಗಿತ್ತು. 45 ಮೀಟರ್ ಬದಲಿಗೆ 30 ಮೀಟರ್ ಅಗಲಕ್ಕೆ, ಫ್ಲೈ ಓವರ್‌ಗೆ, ಬೈಪಾಸ್‌ಗೆ ಬೇಡಿಕೆ ಇಡಲಾಗಿತ್ತು. ಆಗ ಜಿಲ್ಲಾಧಿಕಾರಿಯಾಗಿದ್ದ ಡಾ. ಎಂ.ಟಿ. ರೇಜುಗೆ ಈ ಬೇಡಿಕೆ ಬಗ್ಗೆ ವರದಿ ಕೊಡುವಂತೆ ಹೆದ್ದಾರಿ ಪ್ರಾಧಿಕಾರಿ ಸೂಚಿಸಿತ್ತು. ಆ ವರದಿಯಲ್ಲಿ ಡಾ. ರೇಜು ಕುಮಟಾದಲ್ಲಿ ಬೈಪಾಸ್‌ನ ಅಗತ್ಯವೇ ಇಲ್ಲ ಎಂದು ಹೇಳಿದ್ದರು. ಈಗಾಗಲೇ ಹೆದ್ದಾರಿಗೆ ಬೇಕಾದ ಶೇಕಡಾ 88ರಷ್ಟು ಜಾಗ ಪ್ರಾಧಿಕಾರದ ಬಳಿಯಿದೆ. ಇನ್ನುಳಿದ ಶೇಕಡಾ 12ರಷ್ಟನ್ನು ಬಲಾಢ್ಯರು ಅತಿಕ್ರಮಿಸಿಕೊಂಡಿದ್ದಾರೆ. ಇದನ್ನು ಖುಲ್ಲಾಪಡಿಸಿದರೆ ನಿರಾಯಾಸವಾಗಿ 45 ಮೀಟರ್ ಅಗಲದ ಹೆದ್ದಾರಿ ಕುಮಟಾದಲ್ಲಿ ನಿರ್ಮಿಸಬಹುದೆಂಬ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ್ದರು.


ಆದರೆ ದೇಶಪಾಂಡೆ ಇದ್ಯಾವುದನ್ನೂ ಕೇರ್ ಮಾಡಲಿಲ್ಲ. ಜಾತ್ಯಸ್ಥ ಜನರ ಹಿತ ಕಾಪಾಡುವ ಏಕೈಕ ಗುರಿ ಇಟ್ಟುಕೊಂಡು ದಿಲ್ಲಿ-ಬೆಂಗಳೂರು-ಕುಮಟೆಯನ್ನೆಲ್ಲ ಒಂದು ಮಾಡಿ ಆತ ತುಂಡುಗುಪ್ಪಳ ಹೊಡೆಯುತ್ತಲೇ ಇದ್ದರು. ಯಾವಾಗ ಕೇಂದ್ರದಲ್ಲಿ ಸಂಘ ಪರಿವಾರದ ಸರ್ಕಾರ ಅಸ್ತಿತ್ವಕ್ಕೆ ಬಂತೋ ಆಗ ದೋಷಪಾಂಡೆ ದುರಾಚಾರಕ್ಕೆ ಬಲ ಬಂದುಬಿಟ್ಟಿತು! ಅಕ್ರಮ ಕಟ್ಟಡದ ಬಚಾವಿಗೆ ಬೈಪಾಸ್ ಬೇಡಿಕೆ ಈಡೇರಿಸಿಕೊಳ್ಳಲು ಹವಣಿಸುತ್ತಿದ್ದವರೆಲ್ಲರೂ ಪಕ್ಕಾ ಆರ್‌ಎಸ್‌ಎಸ್ 'ಗಣವೇಷ'ಧಾರಿಗಳು. ಬಹುಮಹಡಿ ಫ್ಲಾಟ್ ಹೆದ್ದಾರಿ ಜಾಗದಲ್ಲೇ ಕಟ್ಟಿರುವ ಬಲಮುರಿ ದಾಸನ ಖಾಸಾ ಅಣ್ಣನೇ ಉತ್ತರ ಕನ್ನಡದ 'ಕಲ್ಲಡ್ಕ'ನೆಂದು ಕುಖ್ಯಾತನಾಗಿರುವ ಚಿಡ್ಡಿ ಡಾನ್! ಈತನ ಮೂಲಕ ಕೇಂದ್ರ ಮಂತ್ರಿ ನಿತಿನ್ ಗಡ್ಕರಿ ಮೇಲೆ ಒತ್ತಡ ಹೇರಲಾಯ್ತು. ಕುಮಟೆಯ ಕೊಂಕಣಿ ಲಾಬಿ ಆರ್‌ಎಸ್‌ಎಸ್‌ನಲ್ಲಿ


ದೇಶಪಾಂಡೆ

ಪ್ರಭಾವಿಯಾಗಿರುವ ಮಂಗೇಶ್ ಭೇಂಡೆ ಎಂಬ ಸ್ವ-ಜಾತಿ ಸರದಾರನ ಮೂಲಕ ಮಂತ್ರಿ ಗಡ್ಕರಿಯನ್ನು ಒಲಿಸಿಕೊಂಡಿತ್ತು. ಉತ್ತರ ಕನ್ನಡದ ಆರ್‌ಎಸ್‌ಎಸ್ ದೊರೆ ಹನುಮಂತ ಶಾನ್‌ಭಾಗ್-ಮಂಗೇಶ್ ಭೇಂಡೆ ಕೇಂದ್ರ ಸರ್ಕಾರದಲ್ಲಿ ಶಕ್ತಿಶಾಲಿಗಳಾದ ಸ್ವಜಾತಿಯ ಮನೋಹರ ಪಾರಿಕ್ಕರ್, ಸುರೇಶ್ ಪ್ರಭುಗಳಂಥವರನ್ನೂ ಬೈಪಾಸ್ ಮಂಜೂರಿಗೆ ಮುಂದೆಬಿಟ್ಟಿತ್ತು. ಇವರೆಲ್ಲರಿಗೆ ಕೊಂಕಣಿಗರ ಪರ್ತಗಾರಿ ಮಠಾಧೀಶರ ಕೃಪಾಶೀರ್ವಾದವೂ ಇತ್ತು.

ಕೇಂದ್ರದ ಮೂರ್ಮೂರು ಮಂತ್ರಿಗಳು, ರಾಜ್ಯದ ಕೊಂಕಣಿ ಕಂಠೀರವ ದೇಶಪಾಂಡೆ, ಸಾಕ್ಷಾತ್ ಪರ್ತಗಾರಿ ಸ್ವಾಮಿಗಳಂಥವರ ಪಡೆಯ ಪವಾಡದೆದುರು ಬೈಪಾಸ್ ಬೇಡ ಎಂದು ಹೋರಾಟ ಆರಂಭಿಸಿದ್ದ ಕುಮಟೆಯ ಮಂದಿಯ ಮಾತಿಗೆ ಬೆಲೆಯೇ ಸಿಗಲಿಲ್ಲ. ದೇಶಪಾಂಡೆಯಂತೂ ರಾಜ್ಯ ಲೋಕೋಪಯೋಗಿ ಮಂತ್ರಿ ಮಹದೇವಪ್ಪರನ್ನು ತಾಳಕ್ಕೆ ತಕ್ಕಂತೆ ಕುಣಿಸಿಕೊಳ್ಳತೊಡಗಿದರು. ಆತ ಕುಮಟೆಯಲ್ಲಿ ಬೈಪಾಸ್ ಮಾಡಿದರೆ ರಾಜ್ಯ ಸರ್ಕಾರ ಆ ಖರ್ಚು ಕೊಡುತ್ತದೆಂದು ಹೇಳಿಯೂಬಿಟ್ಟರು. ಹೆದ್ದಾರಿ ಮಾರ್ಗ ಬದಲಿಸಲು ಮೊದಲು ಹೊರಡಿಸಿದ್ದ 3ಡಿ ನೋಟಿಫಿಕೇಷನ್ ಬದಲಿಸಲು ರಾಜ್ಯ ಸರ್ಕಾರ ಹವಣಿಸಿತು. ಆದರೆ ಬೈಪಾಸ್ ಸ್ವರೂಪದ ಬದಲಾವಣೆಗೆ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿದೆ. ಅದೂ ಅಷ್ಟು ಸುಲಭವಲ್ಲ. ವಿಸ್ತೃತ ಯೋಜನಾ ವರದಿ (ಡಿಪಿಆರ್)ನಲ್ಲಿ 'ಬದಲಾವಣೆ' ಸೇರಿಸಿ ಸಾರ್ವಜನಿಕ-ಚರ್ಚೆ, ವಿಚಾರಣೆ ನಡೆಸಬೇಕು. ಆದರೂ ಕೇಂದ್ರ-ರಾಜ್ಯ ಸರ್ಕಾರ ಬೈಪಾಸ್ ಮಾರ್ಗವೆಂದು ಬದಲಾವಣೆ ಏಕಪಕ್ಷೀಯವಾಗಿ -ಕಾನೂನುಬಾಹಿರವಾಗಿ ಮಾಡಿ ಮೋಕಳಿಕ್ ಆಗಿದೆ!

ಕೊಂಕಣಿ-ಚಿಡ್ಡಿ ಪಟಾಲಮ್‌ನ ಪ್ರಭಾವ ಕೇಂದ್ರ


ಹಿಂದಿನ ಡಿಸಿ ಡಾ.ರೇಜು ಬೈಪಾಸ್ ಅನಾವಶ್ಯವೆಂದು ಬರೆದ ಪತ್ರ

ಸರ್ವೆ ಮತ್ತು ಡಿಸಿ


ಬಹುತೇಕ ಐಎಎಸ್ ಪ್ರಭೃತಿಗಳಿಗೆ ಜನಸಾಮಾನ್ಯರ ಸಂಕಷ್ಟ-ಸಮಸ್ಯೆ ಅರ್ಥವೇ ಆಗದೆಂಬ ಅಭಿಪ್ರಾಯವಿದೆ. ಅದರಲ್ಲೂ ದೇಶಪಾಂಡೆಯಂಥ ಧಡತ್‌ಶಾಹಿ ಮಂತ್ರಿ ಮಾಂಡಲೀಕನ ಆಡಳಿತದಲ್ಲಿರುವ ಜಿಲ್ಲಾಧಿಕಾರಿಗೆ ಮನುಷ್ಯತ್ವವೂ ಇಲ್ಲದಾಗುವುದು ಸಹಜವೇ. ಮೊನ್ನೆ ಕುಮಟಾದ ಬೈಪಾಸ್‌ನಿಂದ ತೊಂದರೆಗೀಡಾಗುವ ಮಂದಿ ಎದುರು ಡಿಸಿ ನಕುಲ್ ನಡೆದುಕೊಂಡ ರೀತಿ ಅಧಿಕಾರಶಾಹಿ ಅನಾಚಾರಕ್ಕೆ ಉದಾಹರಣೆ ಅಂತಿತ್ತು.



ನಕುಲ್

ಬೈಪಾಸ್ ಸರ್ವೆ ಕದ್ದು ಮುಚ್ಚಿ ಮಾಡಲಾಗುತ್ತಿದೆ. ಜನರಿಗೆ ಯಾವ ಮಾಹಿತಿಯೂ ಜಿಲ್ಲಾಡಳಿತ ಕೊಡದೆ ಕಳ್ಳಾಟ ಆಡುತ್ತಿದೆ. ದೇಶಪಾಂಡೆಯ ಆಣತಿಯೇ ಹಾಗಿರಬಹುದು. ಆದರೆ ಡಿಸಿಯಾದವನು ಆತಂಕಿತರನ್ನು ಕನಿಷ್ಠ ಸಂತೈಸುವುದಾದರೂ ಮಾಡಬೇಡವಾ? ನಾಲ್ಕು ಸಮಾಧಾನದ ಮಾತಾಡಬಾರದಾ? ಅದೆಲ್ಲ ಬಿಟ್ಟು ಉಲ್ಟಾ ಮಾತಾಡಿದರೆ ಹೇಗೆ? ಸರ್ವೆಗೆ ಅವಕಾಶ ಕೊಡದಿದ್ರೆ ಪೊಲೀಸರ ಬಲದಲ್ಲಿ ಸಮೀಕ್ಷೆ ಮಾಡ್ತೇವೆ ಎಂದು ಬೆದರಿಸಿದ್ದಾರೆ ಡಿಸಿ ಸಾಹೇಬ. ಅಷ್ಟೇ ಹೋರಾಟಗಾರರ ಮುಖಂಡರೊಂದಿಗೆ ದರ್ಪದಿಂದ ಮಾತಾಡಿ ಪ್ರತಿಭಟನೆ ತಣ್ಣಗಾಗಿಸುವ ತಂತ್ರ ಮಾಡಿದ್ದಾರೆ. ಈ ಡಿಸಿ ಸಾಹೇಬ ನಕುಲ್ ಪ್ರತಿಭಟನಾಕಾರರಿಂದ ಮನವಿ ಪಡೆಯಲಿಕ್ಕೂ ಒಪ್ಪಲಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯ ಹಕ್ಕಿರುವುದೇ ಅರ್ಥವಾಗದವರು ಜಿಲ್ಲಾಧಿಕಾರಿಯಾದರೆ ಜನರ ಗತಿಯೇನಾದೀತು?


ಜಿಲ್ಲಾಡಳಿತ, ಸಂಘ ಪರಿವಾರ, ದೋಷಪಾಂಡೆಗಳೆಲ್ಲ ಬೈಪಾಸ್ ವಿರೋಧಿ ಹೋರಾಟ ಹತ್ತಿಕ್ಕಲು ಹವಣಿಸಿದಂತೆಲ್ಲ ನೆಲದ ಜನರ ರೊಚ್ಚು ಹೆಚ್ಚಾಗುತ್ತಿದೆ. ಯಾವ ರೀತಿಯಲ್ಲೂ ಅವಶ್ಯವೇ ಇಲ್ಲದ ಬೈಪಾಸ್‌ಗೆ ಕೇಂದ್ರ-ರಾಜ್ಯ ಸರ್ಕಾರ ಹಟ ಹಿಡಿದರೆ ಸಂತ್ರಸ್ತರು ಸಿಡಿದೇಳೋದು ಗ್ಯಾರಂಟಿ. ಮಣಕಿ ಗ್ರೌಂಡಿನ ಗಿಬ್ ಹೈಸ್ಕೂಲ್ ಕಾಂಪ್ಲೆಕ್ಸ್ ಕೇಸು ಕೋರ್ಟ್‌ನಲ್ಲಿದೆ. ಇಲ್ಲಿ ದುಗ್ಗಾಣಿ ಬಾಡಿಗೆಗೆ ಅಂಗಡಿ ನಡೆಸುತ್ತಿರುವ ಮಾಫಿಯಾ ಕುಳನೊಬ್ಬ ಹೋರಾಟಗಾರರಿಗೆ ಅನಾಮಧೇಯ ಬೆದರಿಕೆ-ಪತ್ರ ಬರೆಯುತ್ತಿದ್ದಾನೆ. ಬೈಪಾಸ್ ಪರವಿರುವವರ ವಕ್ತಾರನಂತೆ ಹಾರಾಡುವ ಈ ಹರಾಮಿ ಎಪಿಎಂಸಿ ಜಾಗ ಸೈಟ್ ಮಾಡಿ ತನ್ನವರಿಗೆಲ್ಲ ಹಂಚಿ ಕಾಸು ಬಾಚಿದ್ದೇ ದೊಡ್ಡ ಕತೆ!

ಗುಪ್ತಚರ ಇಲಾಖೆಗೆ ಬೈಪಾಸ್ ಮಾಫಿಯಾದ ಪಾತಕದ ಅರಿವಿದೆಯಾ? ಪರಿಸ್ಥಿತಿ ಬಿಗಡಾಯಿಸುವ ಮೊದಲೇ ಜಿಲ್ಲಾಡಳಿತ ಎಚ್ಚೆತ್ತುಕೊಂಡೀತಾ?


ಬೈಪಾಸ್ ವಿರುದ್ಧ ಬಂಡೆದ್ದವರು


ಬೈಪಾಸ್‌ಗೆ ಬಲಿಯಾಗಲಿರುವ ಬಡ ಮಂದಿ

ಸರ್ಕಾರದ ಮೇಲೆ ಅದೆಷ್ಟು ಪ್ರಖರವಾಗಿದೆ ಎಂಬುದಕ್ಕೆ ಈ ಅನೈತಿಕ-ಅಕ್ರಮ ಬೈಪಾಸ್ ನಿರ್ಮಾಣದ ದಾದಾಗಿರಿಯೊಂದೇ ಸಾಕು! ಕೇರಳದಿಂದ ಗೋವಾದವರೆಗೆ ಹಲವು ಕಡೆಯಲ್ಲಿ ಬೈಪಾಸ್‌ಗೆ ಬೇಡಿಕೆ ಇಡಲಾಗಿತ್ತು. ಭಟ್ಕಳಿಗರಂತೂ ಫ್ಲೈಓವರ್ ನಿರ್ಮಿಸಿದರೆ ಅದಕ್ಕೆ ತಗಲುವ ವೆಚ್ಚ ಕೊಡುವುದಾಗಿ ಹೇಳಿದ್ದರು. ಆದರೆ ಇದ್ಯಾವುದಕ್ಕೂ ಹೆದ್ದಾರಿ ಪ್ರಾಧಿಕಾರ ಕೇರ್ ಮಾಡಲಿಲ್ಲ. ಕೇರಳದಿಂದ ಗೋವಾದ ನಡುವೆ ಕುಮಟಾದಲ್ಲಿ ಮಾತ್ರ ಬೈಪಾಸ್! ಕೇಂದ್ರ ನಿಜಕ್ಕೂ ಜನಪರ-ನ್ಯಾಯಪರವಾಗಿದ್ದರೆ ದೇಶಪಾಂಡೆಯ ಮಾತಿಗೆ ಸೊಪ್ಪು ಹಾಕುತ್ತಿತ್ತಾ? ಯಾವ ಆ್ಯಂಗಲ್‌ನಿಂದ ನೋಡಿದರೂ ಕುಮಟಾದಲ್ಲಿ ಅಕಸ್ಮಾತ್ ಬಲಾತ್ಕಾರವಾಗಿ ಬೈಪಾಸ್ ನಿರ್ಮಾಣ ಆಗಿದ್ದೇ ಹೌದಾದರೆ ಅದರ ರೂವಾರಿಗಳು ಸಂಘ ಪರಿವಾರ ಸರದಾರರು ಮತ್ತು ಪ್ರಧಾನಿ ಮೋದಿ!!


ಅಕ್ರಮ ಕಟ್ಟಡಗಳ ಒಡೆಯರು-ಪುರಸಭೆ ದಾಖಲು


ಈಗ ಇಡೀ ಕುಮಟಾಕ್ಕೆ ಕುಮಟಾನೇ ಬೈಪಾಸ್ ಕರಾಮತ್ತಿನ ವಿರುದ್ಧ ತಿರುಗಿಬಿದ್ದಿದೆ. ಪ್ರತಿಭಟನೆ-ಹೋರಾಟ ಜೋರಾಗುತ್ತಿದೆ. 3ಡಿ ನೋಟಿಫಿಕೇಶನ್ ನಿಯಮ ಬುದ್ಧಿಪೂರ್ವಕವಾಗೇ ಧಿಕ್ಕರಿಸಿರುವ ಕೇಂದ್ರ ಸರ್ಕಾರ ಬೈಪಾಸ್ ಮಾಡಲು ಮುಂದಾಗಿ ಸರ್ವೆಗೆ ಏಜೆನ್ಸಿ ನೇಮಿಸಿದೆ. ಈ ಬೈಪಾಸ್‌ನಿಂದ ಹಂದಿಗೋಣ, ಹೆರವಟ್ಟಾ, ಬಗ್ಗೋಣ, ಸೋಕನಮಕ್ಕಿ, ಗುಡಾಳ್, ಚಿಕ್ಕೊಳ್ಳಿ, ಸಿದ್ದನಬಾವಿ, ಮಾನೀರ್ ಮುಂತಾದ ಹಲವು ಹಳ್ಳಿಗಳ ಸಾವಿರಾರು ಕುಟುಂಬಗಳು ಬೀದಿ ಪಾಲಾಗುತ್ತವೆ. ಬಡ ರೈತರ ಜೀವನಾಧಾರ ಕೃಷಿ, ಅತಿಕ್ರಮಣ ಜಮೀನೆಲ್ಲ ಬಲಿಯಾಗುತ್ತದೆ. ಕಮ್ಮಿಯೆಂದರೂ 150 ಮನೆಗಳು ನೆಲಸಮ ಮಾಡಬೇಕಾಗುತ್ತದೆ. ಇಲ್ಲಿರುವ ಮಂದಿಯಲ್ಲಿ ಹೆಚ್ಚಿನವರು ಹಾಲಕ್ಕಿ ಒಕ್ಕಲಿಗ ಬುಡಕಟ್ಟಿನವರು, ಪರಿಶಿಷ್ಟ ವರ್ಗದವರು, ಶೂದ್ರಾದಿಗಳು. ಪರಿಸರ ದೃಷ್ಟಿಯಿಂದಲೂ ಬೈಪಾಸ್ ಹಾನಿಕಾರಕ-ಅಪಾಯಕಾರಿಯೆಂದು ಪರಿಸರತಜ್ಞರು ವಿಸ್ತೃತ ವರದಿಯೇ ಕೊಟ್ಟಿದ್ದಾರೆ. ಬರೀ ನಾಲ್ಕೈದು ಉಳ್ಳವರ ಕಳ್ಳ ಆಸ್ತಿ ಕಾಪಾಡಲು ಸಾವಿರಾರು ಮಂದಿಯ ಆಹುತಿ ಪಡೆಯುತ್ತಿರುವುದು ಸಂಘಪರಿವಾರದ ಅಸಲೀ ಧೋರಣೆ ಸಾಬೀತುಪಡಿಸುವಂತಿದೆ ತಾನೆ?!

ಇದೆಲ್ಲ ತಾನೊಬ್ಬನೇ ಪ್ರಾಮಾಣಿಕ-ಪರಿಶುದ್ಧ-ಜನಪರ ಎಂದು ಬೀಗುವ ಮೋದಿ ಮಾಮನಿಗೆ ಬೇಕಿತ್ತಾ? ಆತನ ಮಂತ್ರಿ ಮಾಫಿಯಾ ಬಡ ಮಂದಿಯ ನಿರಾಶ್ರಿತರಾಗಿಸುವ ಪಾತಕಕ್ಕೆ ಕೈಹಾಕಿರುವುದು ಗೊತ್ತಾಗಿಲ್ಲವಾ? ಈ ಬೈಪಾಸ್ ಬೇಕಾ? ಹೆದ್ದಾರಿ ಪ್ರಾಧಿಕಾರದ ಬಳಿ ಶೇ.88ರಷ್ಟು ಜಾಗ ಮೂಲ ಹೈವೇ ಪಕ್ಕದಲ್ಲೇ ಇದೆ. ಇನ್ನುಳಿದ ಜಾಗ ಸಂಘಿಗಳು ಕಬಳಿಸಿದ್ದಾರೆ. ಇದನ್ನು ವಶಪಡಿಸಿಕೊಂಡರೆ ಸಲೀಸಾಗಿ 45 ಮೀಟರ್ ಹೈವೇ ಯಾವ ಹಾನಿಯೂ ಇಲ್ಲದೆ ಮಾಡಬಹುದಲ್ಲವಾ? ಬೈಪಾಸ್‌ನಿಂದ ಕಡಿಮೆಯೆಂದರೂ 300-400 ಕೋಟಿ ಬೊಕ್ಕಸಕ್ಕೆ ಹಾನಿಯಲ್ಲವಾ? ಬಡ-ಅಸಹಾಯಕರ ಬೀದಿಪಾಲು ಮಾಡಿ ಶ್ರೀಮಂತರ ಸಂಪತ್ತು ರಕ್ಷಿಸುವುದು ಯಾವ ನ್ಯಾಯ? ಮಾನವ ಹಕ್ಕು ಉಲ್ಲಂಘನೆಯ ಪಾತಕ ಇದಲ್ಲವಾ?

ಇದೆಲ್ಲ ಮೋದಿಜೀಗೆ ಹೇಳೋರು ಯಾರು? ಮೋದಿ ತನ್ನದು 56 ಇಂಚಿನ ಛಾತಿ ಎಂದು ಅದೆಷ್ಟೇ ಕೊಚ್ಚಿಕೊಳ್ಳಲಿ. ಆತನ ಜುಟ್ಟು ಇರುವುದು ಆರ್‌ಎಸ್‌ಎಸ್ ಕೈಲಿ ಎಂಬುದು ಜಗಜ್ಜಾಹೀರು. ಕುಮಟೆಯ ಅನಾಹುತಕಾರಿ ಬೈಪಾಸ್ ಭಾನಗಡಿ ಮೋದಿ ಚೆಡ್ಡಿ ಅಡಿಯಾಳೆಂಬುದಕ್ಕೆ ಒಂದು ತಾಜಾ ನಿದರ್ಶನ!

■ ವರದಿಗಾರ

ಹುಬ್ಬಳ್ಳಿ: ಎಪಿಎಂಸಿ ಮೇಯುತ್ತಿರುವ ಪುಂಡ ದನ


ಮಂಜುನಾಥ್ ಮುದರೆಡ್ಡಿ

ಕಳೆದ ವಾರವಷ್ಟೇ 'ಪತ್ರಿಕೆ' ಹುಬ್ಬಳ್ಳಿ ಎಪಿಎಂಸಿಗೆ ವಕ್ಕರಿಸಿರುವ ಮಂಜುನಾಥ್ ಮುದರೆಡ್ಡಿಯೆಂಬ ಜಿಗಣೆ ಆಸಾಮಿಯ ಕಂತೆಪುರಾಣ ಬಿಚ್ಚಿಟ್ಟಿತ್ತು. ಈ ಬಾರಿ ಮುದರೆಡ್ಡಿಯ ಮತ್ತಷ್ಟು ಕಲರ್‌ಫುಲ್ ಕಲರವಗಳು ಓದುಗರ ಮುಂದೆ ತೆರೆದುಕೊಂಡಿವೆ.

ರೈತರಿಗೆ ಉಪಯೋಗವಾಗಲಿ ಅಂತ ಸಲಕರಣೆ ಮಾರಾಟ ಮಾಡುವ ಪೂರೈಕೆದಾರರಿಗೆ ಲೈಸೆನ್ಸ್ ನೀಡಲಾಗುತ್ತೆ, ಅಂತಹ ಲೈಸೆನ್ಸ್ ಪಡೆದಿರುವ ಈತ ಅದರ ಮೂಲಕವೇ ಎಪಿಎಂಸಿಯ ಸಂಸ್ಕರಣಾ ಘಟಕದ ಖೋಟಾದಡಿ ಎಪಿಎಂಸಿಗೆ ಒಕ್ಕರಿಸುತ್ತಲೇ ಬಂದಿದ್ದಾನೆ.


ಹುಬ್ಬಳ್ಳಿ ಎಪಿಎಂಸಿಯಲ್ಲಿ ಸಲಕರಣೆ ಮಾರಾಟಕ್ಕೆಂದು ಜಾಗೆಯನ್ನು ದಿ. 13.11.2007ರಂದು ಖರೀದಿ ಮಾಡಿದ ಈತ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಅಜಮಾಸು ಏಳು ಲಕ್ಷ ಸಾಲ ಎತ್ತಿ ಅಲ್ಲೊಂದು ಕಟ್ಟಡ ನಿಲ್ಲಿಸಿದ್ದಾನೆ. 1,056 ಚದರ ಮೀಟರ್ ವಿಸ್ತೀರ್ಣದ ಈ ಜಾಗದ ಬೆಲೆ ಈಗ ಏನಿಲ್ಲವೆಂದರೂ ಕೋಟಿ ದಾಟುತ್ತದೆ.


ಆ ಸಂದರ್ಭದಲ್ಲಿ ಮುದರೆಡ್ಡಿಯ ಗೆಳೆಯನಾದ ವೀರಣ್ಣ ಮಳಗಿ ಎಂಬಾತನೇ ಹುಬ್ಬಳ್ಳಿ ಎಪಿಎಂಸಿಯ ಅಧ್ಯಕ್ಷ ಗಾದಿಯಲ್ಲಿ ಠಿಕಾಣಿಹೂಡಿದ್ದರಿಂದ ಮತ್ತು ತಾನೇ ಸ್ವತಃ ಎಪಿಎಂಸಿ ಸದಸ್ಯನೂ ಆಗಿದ್ದದ್ದು ಆತನಿಗೆ ಜಾಗ ಆರಾಮಾಗಿ ಸಿಗಲು ನೆರವಾಗಿತ್ತು. ಹೀಗೆ ರಿಯಾಯಿತಿ ದರದಲ್ಲಿ ಜಾಗ ನೀಡುವಾಗ ಒಂದಷ್ಟು ಕರಾರುಗಳನ್ನೂ ವಿಧಿಸಲಾಗಿತ್ತು. ಯಾವುದೇ ಕಾರಣಕ್ಕೂ, ಆ ನಿವೇಶನವನ್ನಾಗಲಿ ಅಥವಾ ಅದರಲ್ಲಿ ನಿರ್ಮಿಸಿದ ಕಟ್ಟಡವನ್ನಾಗಲಿ ಮಾರಾಟ ಮಾಡುವಂತಿಲ್ಲ ಮತ್ತು ಬಾಡಿಗೆಗೆ ನೀಡುವಂತಿಲ್ಲ ಎಂಬದೂ ಅವುಗಳಲ್ಲಿ ಒಂದು.

ಅಂದಹಾಗೆ, ಯಾವುದೇ ವ್ಯಕ್ತಿ ಎಪಿಎಂಸಿ ಸದಸ್ಯನಾಗಿದ್ದಾಗ ತನ್ನ ಸದಸ್ಯತ್ವದ ಅವಧಿಯಲ್ಲಿ ಯಾವುದೇ ಲಾಭದಾಯಕ ಅಂಶಗಳನ್ನು ಖರೀದಿ, ಮಾರಾಟ, ಪರಭಾರೆ ಸ್ವಂತಕ್ಕಾಗಿ ಮಾಡುವಂತಿಲ್ಲ ಎನ್ನುವುದು ಎಪಿಎಂಸಿ ಕಾಯ್ದೆಯಲ್ಲಿದೆ. ಆದರೆ ಎಪಿಎಂಸಿ ಸದಸ್ಯನಾಗಿದ್ದ ಮಂಜುನಾಥ ಮುದರೆಡ್ಡಿ ಅವುಗಳನ್ನೆಲ್ಲಾ ಗಾಳಿಗೆ ತೂರಿ ಬಹು ಬೆಲೆಬಾಳುವ ಭೂಮಿಯನ್ನೇ ತನ್ನ ಹೆಸರಿಗೆ ಪರಭಾರೆ ಮಾಡಿಸಿಕೊಂಡಿದ್ದ.

ಎ-ಮಾದರಿಯ 3ನೇ ಸಂಖ್ಯೆಯಲ್ಲಿದ್ದ 10.56 ಗುಂಟೆ ಜಾಗೆಯಲ್ಲಿ ಹೀಗೆ ಕಟ್ಟಿದ ಸಂಸ್ಕರಣಾ ಸಲಕರಣೆ ಅಂಗಡಿಯ ಅರ್ಧ ಭಾಗವನ್ನು ಆಂಧ್ರ ಬ್ಯಾಂಕ್‌ಗೆ ಬಾಡಿಗೆಗೆ ಕೊಡಲು ಅನುಮತಿ ನೀಡಬೇಕೆಂದು ಸ್ವತಃ ತಾನೇ ಸದಸ್ಯನಾಗಿದ್ದುಕೊಂಡು ದಿ. 20.08.2015ರಲ್ಲಿ ಎಪಿಎಂಸಿಗೆ ಅರ್ಜಿ ಸಲ್ಲಿಸಿದ್ದ.

ಆಗ ಈ ಅರ್ಜಿ ಸಭೆಯಲ್ಲಿ ಚರ್ಚೆಗೆ ಬಂದು ಲೀಸ್ ಕಂ ಸೇಲ್ ಅಗ್ರಿಮೆಂಟಿನ ಕರಾರಿನಲ್ಲಿರುವ "ಯಾವುದೇ ಕಾರಣಕ್ಕೂ, ನಿವೇಶನವನ್ನಾಗಲಿ, ಅದರಲ್ಲಿ ನಿರ್ಮಿಸಿದ ಕಟ್ಟಡವನ್ನಾಗಲಿ ರೈತರಿಗೆ ಸಲಕರಣೆ ಮಾರಾಟ ಹೊರತಾಗಿ ಇತರೆ ವಹಿವಾಟು ನಡೆಸಲು ಉಪಯೋಗಿಸಬಾರದು ಅಥವಾ ಬಾಡಿಗೆಗೆ ಕೊಡಕೂಡದು' ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದ ಕಾರ್ಯದರ್ಶಿಯವರು ಯಾವ ಕಾರಣಕ್ಕೂ ಈ ರೀತಿಯ ಪರವಾನಗಿ ನೀಡಲು ಅವಕಾಶವಿಲ್ಲವೆಂದು ಕಡ್ಡಿ ತುಂಡು ಮಾಡಿದಂತೆ ತಿಳಿಸಿದ್ದರು.





ಆದರೂ ಪಟ್ಟುಬಿಡದೆ ಮುದರೆಡ್ಡಿ ತನ್ನ ಪ್ರಯತ್ನ ಮುಂದುವರೆಸಿದ್ದ. ಮುದರೆಡ್ಡಿಯ ಹುನ್ನಾರದ ವಿರುದ್ಧ ಸಿಡಿದೆದ್ದ ಹುಬ್ಬಳ್ಳಿ ಎಪಿಎಂಸಿ ಹಿತರಕ್ಷಣಾ ಸಮಿತಿ ಯಾವುದೇ ಕಾರಣಕ್ಕೂ ಬ್ಯಾಂಕ್‌ನವರಿಗೆ ಬಾಡಿಗೆ ಕೊಡಲು ಅವಕಾಶ ನೀಡಬಾರದೆಂದು 4.6.2016ರಂದು ಪತ್ರ ಬರೆದಿದ್ದರು. ರೈತರ ಉಪಯೋಗಕ್ಕೆಂದು ಎಪಿಎಂಸಿ ಮಂಜೂರು ಮಾಡಿದ್ದ ನಿವೇಶನವನ್ನು ಸ್ವತಃ ಒಬ್ಬ ಸದಸ್ಯನಾಗಿದ್ದುಕೊಂಡೂ ಮುದರೆಡ್ಡಿ ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿದ್ದನ್ನು ಪ್ರಶ್ನಿಸಿ ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಟಿ.ಎಲಿವಾಳ, ಎಸ್.ಎಸ್.ಬಳವಿ, ಸಿ.ಜೆ.ಪಾಟೀಲ, ಬಿ.ಡಿ. ಗಾಣಿಗೇರಿ, ಮಾಜಿ ಸದಸ್ಯರಾದ ರಾಜಶೇಖರ ಮೆಣಸಿನಕಾಯಿ, ಗೋಪಣ್ಣ, ನಲವಡಿ ಮುಂತಾದವರು ತಕರಾರು ಅರ್ಜಿ ಸಲ್ಲಿಸಿದ್ದರು.

ಇಷ್ಟೆಲ್ಲ ವಿರೋಧ ಇದ್ದಾಗ್ಯೂ 'ಈ ಮಾರುಕಟ್ಟೆಗೆ ನೆರೆ ರಾಜ್ಯ ಆಂಧ್ರಪ್ರದೇಶದಿಂದ ರೈತರು ಮತ್ತು ವ್ಯಾಪಾರಸ್ಥರು ಒಣ ಮೆಣಸಿನಕಾಯಿ ವ್ಯಾಪಾರಕ್ಕೆ ಬರುತ್ತಾರೆ. ಅವರೆಲ್ಲಾ ಆಂಧ್ರ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುತ್ತಾರೆ. ಅದಕ್ಕಾಗಿ ಆಂಧ್ರಬ್ಯಾಂಕ್ ತೆರೆಯಲು ಅವಕಾಶ ನೀಡುವುದು ಅವಶ್ಯಕ' ಅಂತೆಲ್ಲ ಅಸಂಬದ್ಧ ತರ್ಕ ಮಂಡಿಸಿ ಸಭೆಯಲ್ಲಿ ಸಮ್ಮತಿ ಗಿಟ್ಟಿಸಿಕೊಂಡಿದ್ದ. ಅವನ ಮುಂಗಿಗೆ ತಲೆದೂಗುವ ಕೆಲ ಚಮಚಾ ಸದಸ್ಯರೂ ಅದಕ್ಕೆ ಸೈ ಅಂದಿದ್ದರು. ಅರ್ಧ ಭಾಗವನ್ನು ಆಂಧ್ರಬ್ಯಾಂಕ್ ತೆರೆಯಲು ಬಾಡಿಗೆ ನೀಡಬಹುದು ಆದರೆ ಉಳಿದ ಅರ್ಧದಲ್ಲಿ ಎಪಿಎಂಸಿಯ ನಿಯಮದಂತೆ ತನ್ನ ಕೃಷಿ ಸಂಸ್ಕರಣಾ ಮಾರಾಟ ಅಂಗಡಿ ಮುಂದುವರೆಸಬೇಕೆಂದು ಸಭೆ ಅಂತಿಮ ತೀರ್ಪು ಹೇಳಿತ್ತು.

ಆದರೆ ಮುದರೆಡ್ಡಿ ಅದಕ್ಕೂ ಗೋಲಿ ಹೊಡೆದಿದ್ದಾನೆ. ಹುಬ್ಬಳ್ಳಿ ಎಪಿಎಂಸಿ ಎಂದರೆ ಅದು ತನ್ನ ಪಾರಂಪರಿಕ ಜಹಗೀರು ಅಂತ ಭಾವಿಸಿರೋ ಮುದರೆಡ್ಡಿ, ರೈತೋಪಯೋಗಿ ಸಲಕರಣೆ ಮಾರಾಟ ಮಾಡುತ್ತೇನೆ ಅಂತ ಮಕಮಲ್ ಟೋಪಿ ತೊಡಿಸಿ ಇನ್ನುಳಿದ ಅರ್ಧ ಭಾಗವನ್ನೂ ನಂದಿನಿ ಹಾಲಿನ ಮಾರಾಟ ಕೇಂದ್ರಕ್ಕೆ ಬಾಡಿಗೆ ಕೊಟ್ಟು, ತಾನೆಂಥ ಜಗಮೊಂಡ ಅನ್ನೋದನ್ನು ಸಾಬೀತು ಮಾಡಿದ್ದಾನೆ. ಒಟ್ಟಿನಲ್ಲಿ ಹುಬ್ಬಳ್ಳಿಯ ಎಪಿಎಂಸಿಗೆ ನುಗ್ಗಿದ ಪುಂಡ ದನದಂತೆ ಮುದರೆಡ್ಡಿ ಯಾರ ಹಂಗಿಲ್ಲದೆ ಮೆಯ್ಯಾಡುತ್ತಿದ್ದಾನೆ.

■ ಹುಬ್ಬಳ್ಳಿಯಾಂವ್







ಸತ್ತ ರಾಸುಗಳ ಕಳೇಬರಹ

ಅವಸಾನದ ಅಂಚಿನಲ್ಲಿ ಅಮೃತ್ ಮಹಲ್!

ಅಜ್ಜಂಪುರದ ಅಮೃತ್ ಮಹಲ್ ರಾಸುಗಳ ಅವನತಿಯನ್ನು ಯಾರೂ ತಡೆಯಲು ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಅಭಿವೃದ್ಧಿಯ ಉತ್ತುಂಗ ಸ್ಥಿತಿ ತಲುಪಿದ್ದು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ. ಆಗ ಇಲ್ಲಿ ನಿರ್ದೇಶಕರಾಗಿದ್ದ ಡಾ. ಕೃಷ್ಣಮೂರ್ತಿಯವರ ಇಚ್ಛಾಶಕ್ತಿಯು ಕಾರಣದಿಂದ ಅಮೃತ್ ಮಹಲ್ ಸರ್ವತೋಮುಖ ಅಭಿವೃದ್ಧಿ ಕಂಡಿತ್ತು, ಸಿಬ್ಬಂದಿಯಿಂದ ಕೆಲಸ ತೆಗೆಯುತ್ತಿದ್ದ ಕೃಷ್ಣಮೂರ್ತಿ, ರಾಸುಗಳ ಬೇಸಿಗೆ ಮೇವಿಗಾಗಿ ಕಾವಲಿನಲ್ಲಿ ಜೋಳ ಬಿತ್ತು ಒಡೆಗೆ ಬರುವ ಮುನ್ನವೇ ಕಟಾವು ಮಾಡಿ, ಬೃಹತ್ ಸಿಮೆಂಟ್ ತೊಟ್ಟಿಗಳಿಗೆ ತುಂಬಿಸಿ, ಉಪ್ಪು ಬೆಲ್ಲ ಎರಚಿ ಮುಚ್ಚಿಬಿಡುತ್ತಿದ್ದರು. ನಂತರ ಬೇಸಿಗೆಯಲ್ಲಿ ಹೊರ ತೆಗೆದು ರಾಸುಗಳಿಗೆ ಹಾಕುತ್ತಿದ್ದರೆ ಮನುಷ್ಯರಿಗೂ ರುಚಿ ನೋಡಬೇಕೆಂದು ಆಸೆಯಾಗುವ ಗಮಲು ಆಡರುತ್ತಿತ್ತು, ಬಹಳ ದೂರದೃಷ್ಟಿಯುಳ್ಳ ಆ ಅಧಿಕಾರಿ ಸಾಧನೆ ನೋಡಿ ಅಂದಿನ ಪಶು ಸಂಗೋಪನಾ ಸಚಿವರಾದ ಸಿದ್ದರಾಮಯ್ಯ ಕೂಡ ಮೆಚ್ಚಿಕೊಂಡು ಪ್ರೋತ್ಸಾಹಿಸಿದ್ದರು. ಲಂಕೇಶರು ಕೂಡ ಬಂದು ರಾಸುಗಳ ಸಾಮರ್ಥ್ಯವನ್ನು ಕಣ್ಣಾರೆ ಕಂಡು ಬರೆದಿದ್ದರು.


ಈ ಅಜ್ಜಂಪುರದ ಅಮೃತ್ ಮಹಲ್ ಆವರಣ ಎಷ್ಟು ಸೊಗಸಾಗಿತ್ತೆಂದರೆ ಚಿಕ್ಕಮಗಳೂರಿಗೆ ಬಂದು ಚುನಾವಣೆಗೆ ನಿಂತಿದ್ದ ಇಂದಿರಾ ಗಾಂಧಿ ಕೂಡ ಇಲ್ಲಿಗೆ ಬಂದು ವಿಶ್ರಾಂತಿ ಪಡೆದುಹೋಗಿದ್ದರು.

ಈ ರಾಸುಗಳ ಇತಿಹಾಸ ದೊಡ್ಡದಿದೆ. ಆರ್ಯರು ಭಾರತಕ್ಕೆ ಬರುವಾಗಲೇ ಈ ರಾಸುಗಳು ಬಂದವು ಎನ್ನುವವರೂ ಇದ್ದಾರೆ. ಉತ್ತರ ಭಾರತದಿಂದ ಬಂದ ಈ ತಳಿಯ ವಿಶೇಷವೆಂದರೆ 18 ಗಂಟೆ ನಿರಂತರವಾಗಿ ಕೆಲಸ ಮಾಡುವ ಶಕ್ತಿ ಪಡೆದಿರುವುದು. ಇದನ್ನು ಕೇಳಿದ ಲಂಕೇಶ್ ಇನ್ನಾವ ರೂಪದ ಯಂತ್ರ ಈ ತಳಿಯೊಳಗಿದೆ ಎಂದು ಉದ್ಗಾರ ತೆಗೆದಿದ್ದರು. ಸ್ವತಃ ಲಂಕೇಶ್ ಎತ್ತು ಕಟ್ಟಿದ ಮನೆಯವರು ಮತ್ತು ಬೆಂಗಳೂರಿನ ಜಮೀನಿನಲ್ಲೂ ದನ ಕಟ್ಟಿದ್ದರು. ಆ ಕಾರಣಕ್ಕೆ ಈ ಅಮೃತ್ ಮಹಲ್ ವಿಷಯದ ಹಲವು ಲೇಖನಗಳು ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.

ಈಗ ಕಾಲಮಾನದ ವೈಪರೀತ್ಯದಿಂದ ಈ ದೈತ್ಯ ಅಮೃತ್ ಮಹಲ್ ತಳಿ ಯಾರಿಗೂ ಬೇಡವಾಗಿದೆ. ಒಂದು ಜೊತೆ ಅಮೃತ್ ಮಹಲ್ ದನವಿದ್ದರೆ ಒಂದು ಟ್ರ್ಯಾಕ್ಟರ್ ಇದ್ದಂತೆ. ಆದರೆ ಟ್ರ್ಯಾಕ್ಟರ್‌ಗೆ ಡೀಸೆಲ್ ಹಾಕಿದರೆ ಸಾಕು. ದನಗಳಿಗೆ ಮೇವು, ನೀರುನಿಡಿಯ ಅಗತ್ಯವಿದೆ. ಆದ್ದರಿಂದ ಅಮೃತ್ ಮಹಲ್ ಎಲ್ಲರ ಅನಾದರಕ್ಕೆ ತುತ್ತಾಗಿಹೋಗಿದೆ. ಈ ರಾಸುಗಳಿಗಿದ್ದ ಮೇವಿನ ಕಾವಲುಗಳನ್ನ ಬಲಾಢ್ಯರು ಆಕ್ರಮಿಸಿಕೊಂಡಿದ್ದಾರೆ. ಅದನ್ನು ತೆರವುಗೊಳಿಸಲಾಗುವುದಿಲ್ಲ, ಏಕೆಂದರೆ ಅವರೆಲ್ಲಾ ಸಾರಾಸಗಟು ರಾಜಕಾರಣಿಗಳು. ಆದ್ದರಿಂದ ಕಾವಲು ಕೈಬಿಟ್ಟಂತೆಯೇ ಸರಿ.

ಇನ್ನ ಉಳಿದ ರಾಸುಗಳನ್ನು ಉಳಿಸಿಕೊಳ್ಳಬೇಕಾದರೆ ಪಶುಸಂಗೋಪನಾ ಸಚಿವ ಮತ್ತು ಸಿಬ್ಬಂದಿ ಮನಸ್ಸು ಮಾಡಬೇಕು. ಆದರೆ ಈ ಹಿಂದಿನ ಸಚಿವ ಬೆಳಮಗಿ ಈ ಕಡೆ ತಲೆಹಾಕಲಿಲ್ಲ, ಇನ್ನು ರೈತರು ಮತ್ತು ದನಗಳ ಜಾತ್ರೆ ನಡುವಿನಿಂದ ಬಂದ ವಾಲಿ ಮಂಜಣ್ಣನೂ ಈವರೆಗೆ ಅಮೃತ್ ಮಹಲ್‌ಗೆ ಭೇಟಿ ನೀಡಿಲ್ಲ, ಅಲ್ಲಿಗೆ ಇದು ಸರಕಾರದ ನಿರ್ಲಕ್ಷ್ಯಕ್ಕೆ ತುತ್ತಾಗಿರುವ ಕೇಂದ್ರ ಎಂಬುದು ಸಾಬೀತಾಯಿತು.

ಇನ್ನು ಅಧಿಕಾರಿಗಳ ವಿಷಯಕ್ಕೆ ಬಂದರೆ ಯಾರೂ ಕೂಡ ಕನಿಷ್ಠ ಕಾಳಜಿಯುಳ್ಳವರಾಗಿಲ್ಲ, ಅಮೃತ್ ಮಹಲ್ ದನಗಳು ಮೇವಿಲ್ಲದೆ ಪ್ರತಿ ದಿನ ಸಾಯುತ್ತಿವೆ ಎಂಬ ಸುದ್ದಿ ಕೇಳಿದಕೂಡಲೇ ಪ್ರಿನ್ಸಿಪಲ್ ಸೆಕ್ರೆಟರಿ, ಆಯುಕ್ತ



ಅಮೃತ್ ಮಹಲ್ ಕಾವಲು ಉಳಿಸಿ ಹೋರಾಟಗಾರ ಸಮಿತಿ ಸಂಚಾಲಕ ಎಸ್. ಶಿವಾನಂದ್


ಜಾಯಿಂಟ್ ಡೈರೆಕ್ಟರ್ ಇವೆರೆಲ್ಲಾ ಅಜ್ಜಂಪುರಕ್ಕೆ ಓಡಿಬರಬೇಕಿತ್ತು, ಈಗವರು ಕೆಳಗಿನವರಿಗೆ ಫೋನ್ ಮಾಡಿ ತಮ್ಮ ಕರ್ತವ್ಯದಿಂದ ಕೈತೊಳೆದುಕೊಳ್ಳುತ್ತಿದ್ದಾರೆ.

ಈ ಹಿಂದೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾಗಿದ್ದ ಶೇಖರಪ್ಪನವರಿಗೆ, ವಿಷಯ ತಿಳಿಸಿದಕೂಡಲೇ ಓಡಿಬಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಮಂಡಿಯುದ್ದ ರಾಶಿಯಾಗಿದ್ದ ಸಗಣಿ ತೆಗೆಸಿದ್ದರು. ಈಗಲೂ ಬೆಂಗಳೂರಲ್ಲಿರುವ ಅವರಿಗೇ ಫೋನ್ ಮಾಡಲಾಗಿ ಅವರು ಡಿಸಿಯವರನ್ನು ಸಂಪರ್ಕಿಸಿ ಕೂಡಲೇ ಅಜ್ಜಂಪುರಕ್ಕೆ ಕಳಿಸಿದ್ದರು. ಜಿಲ್ಲಾಧಿಕಾರಿಗಳು ಬಂದು ಸಿಬ್ಬಂದಿಗೆ ಬೈದು ಹೋಗಿದ್ದಾರೆ. ಆದರೆ ಅಜ್ಜಂಪುರದ ಅಮೃತ್ ಮಹಲ್ ಕೇಂದ್ರದ ಸಿಬ್ಬಂದಿಗಳು ಬೈಗುಳಕ್ಕೆ ಜಗ್ಗುವಂತಿಲ್ಲ, ಏಕೆಂದರೆ ಅತ್ಯಂತ ಕಡಿಮೆ ಸಿಬ್ಬಂದಿಯಿರುವ ಅವರು ನೀವು ಬೇಕಾದ್ದು ಮಾಡಿಕೊಳ್ಳಿ, ಬೇಕಿದ್ದರೆ ಸಸ್ಪೆಂಡ್ ಮಾಡಿ, ವರ್ಗ ಮಾಡಿ ಇಲ್ಲ ಬಿಡಿ ನಾವೇ ವಾಲಂಟರಿ ರಿಟೈರ್ಡ್‌ಮೆಂಟ್ ತೆಗೆದುಕೊಂಡು ಹೋಗುತ್ತೇವೆ ಎನ್ನುವವರಾಗಿದ್ದಾರೆ. ಹಾಗಾದರೆ ಅಮೃತ್ ಮಹಲ್ ತಳಿಯನ್ನು ಯಾರು ಕಾಪಾಡಬೇಕು.

ವಿಶೇಷವೆಂದರೆ, ಈ ತಳಿ ಸಂವರ್ಧನಾ ಕೇಂದ್ರಕ್ಕೆ ಬರುವ ಕೋಟ್ಯಂತರ ರೂಪಾಯಿಗಳನ್ನು ಹೊಡೆದು ತಿನ್ನುವುದರಲ್ಲಿ ಅಧಿಕಾರಿಗಳು ಬಹಳ ಚುರುಕಾಗಿದ್ದಾರೆ. ಇಲ್ಲ ಎನ್ನುವುದಾದರೆ ದನಗಳು ಮೇವಿಲ್ಲದೆ ಸಾಯುತ್ತಿರಲಿಲ್ಲ, ಆಯುಕ್ತ ಶೇಖರ್ ಎಂಬಾತನಿಗೆ ಅಮೃತ್ ಮಹಲ್ ತಳಿಯ ವಿವರವೇ ಗೊತ್ತಿಲ್ಲ, ಸ್ಥಳೀಯ ವೀರಭದ್ರಯ್ಯ 45 ವರ್ಷದಿಂದ ಇಲ್ಲೇ ಇದ್ದರೂ ಅನಿವಾರ್ಯವಾಗಿ ತಮ್ಮ ನಿರ್ದೇಶಕರ ಹುದ್ದೆ ನಿಭಾಯಿಸುತ್ತಿದ್ದಾರೆ. ಎಸ್‌ಡಿಸಿ ಶೌಖತ್‌ಅಲಿ ದನಗಳಿಗೂ ತನಗೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಈ ಅಮೃತ್ ಮಹಲ್ ಕೇಂದ್ರ ಊರ ಹೊರಗಿದ್ದು ಯಾರೂ ಇಲ್ಲಿರಲು ಇಷ್ಟಪಡುತ್ತಿಲ್ಲ, ತನ್ನ ಉದ್ಯೋಗ ಮತ್ತು ರಾಸುಗಳ ಬಗ್ಗೆ ಕಾಳಜಿಯುಳ್ಳ ಸಿಬ್ಬಂದಿ ಮಾತ್ರ ಇಲ್ಲಿರಬಲ್ಲರು.

ಈ ಹಿಂದಿದ್ದ ಸಿಬ್ಬಂದಿಗಳಲ್ಲಿ ಅಂತಹ ಇಚ್ಛಾಶಕ್ತಿಯಿತ್ತು, ತಮಿಳುನಾಡಿನಿಂದ ಬಂದ ಕಾರ್ಮಿಕರು ಅಮೃತ್ ಮಹಲ್ ಕೇಂದ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ದುಡಿಯುತ್ತಿದ್ದರು. ಈಗ ಅಂತಹ ಜನಗಳ್ಯಾರೂ ಇಲ್ಲಿಲ್ಲ, ಆದ್ದರಿಂದ ಈ ಕೇಂದ್ರ ಅವನತಿಯ ಅಂಚು ತಲುಪಿದೆ. ಇಂತದೇ ಒಂದು ಸ್ಥಿತಿಗೆ ಕಾಯುತ್ತಿದ್ದವನಂತೆ ರಾಮಚಂದ್ರಾಪುರ ಮಠದ ಸ್ವಾಮಿ "ಬೇಕಿದ್ದರೆ ನಾನು ನಿರ್ವಹಿಸುತ್ತೇನೆ. ನನಗೆ ವಹಿಸಿ" ಎಂಬ ಜಪವನ್ನು ಇನ್ನು ಬಿಟ್ಟಿಲ್ಲ. ಹಸುಗಳನ್ನು ಕಂಡರೆ ಅಕ್ಕರೆ ತೋರುವ ಈತನ ಸುಪರ್ದಿಯಲ್ಲಿರುವ ದನಗಳಿಗೆ ಸರಿಯಾದ ಮೇವಿಲ್ಲ, ಆದರೂ ಅಮೃತ್ ಮಹಲ್ ಮೇಲಿನ ಆಸೆ ಇಟ್ಟುಕೊಂಡಿದ್ದಾನೆ. ಈಗಾಗಲೇ ಈತನ ಹೇಳಿಕೆಗೆ ಎಸ್. ಶಿವಾನಂದರು ಪ್ರತಿಭಟನೆ ಧ್ವನಿ ಹೊರಡಿಸಿದ್ದಾರೆ.

ಈ ಅಮೃತ್ ಮಹಲ್‌ಗೂ ಅಜ್ಜಂಪುರಕ್ಕೂ ಕರುಳು ಬಳ್ಳಿ ಸಂಬಂಧವಿದೆ. ನಾನು ಅಜ್ಜಂಪುರದಲ್ಲಿ 14 ವರ್ಷವಿದ್ದೆ ಅಂದಿನ ನಿರ್ದೇಶಕರು ನನಗೂ ಅರ್ಧ ಲೀಟರ್ ಹಾಲು




ಕೊಡುವಂತೆ ಮಾಡಿದ್ದರು. ಅರ್ಧ ಲೀಟರ್ ಎಂದರೆ ಪ್ರತಿ ಹಸುವಿನ ಒಂದು ಹನಿಯಾದರೂ ಇರುತ್ತಿತ್ತು, ಅಂತಹ ಹಾಲಿನಲ್ಲಿಯೇ ಅನ್ನ ಮಾಡಿಕೊಂಡು ಉಂಡರೆ ಹಸಿವೇ ಇಲ್ಲದ ವರ ಪಡೆದ ಅನುಭವವಾಗುತ್ತಿತ್ತು, ಜೊತೆಗೆ ನನ್ನ ರೂಮೇ ಅಮೃತ್ ಮಹಲ್ ಹಸುಗಳ ಹಾಲಿನ ವಾಸನೆಯಿಂದ ತುಂಬಿರುತ್ತಿತ್ತು, ಆದ್ದರಿಂದ ಈಗಲೂ ಅಮೃತ್ ಮಹಲ್ ದನಗಳು ಸಾಯುತ್ತಿರುವ ವಿಷಯ ಕೇಳಿದರೆ ನಮ್ಮಪ್ಪನ ಸಾವಿನ ಸುದ್ದಿ ಕೇಳಿದಂತಾಗುತ್ತದೆ. ಏನಾದರೂ ಮಾಡಿ ನನ್ನ ಊರಿಗೆ ಎರಡು ಅಮೃತ್ ಮಹಲ್ ರಾಸುಗಳನ್ನು ತೆಗೆದುಕೊಂಡು ಹೋಗಬೇಕೆಂದು ಮನಸ್ಸು ಮಾಡುತ್ತಿದ್ದೆ, ಆಗ ಅಷ್ಟು ದುಡ್ಡಿರಲಿಲ್ಲ, ಈಗ ಇದೆ. ಆದರೆ ಊರಲ್ಲಿ ಇದ್ದ ದನ ಮಾರಿದ ಮನೆಯ ಹುಡುಗರು ಬೆಂಗಳೂರಿಗೆ ಹೋಗಿ ಯಾವ ಯಾವುದೋ ದಂಧೆ ಮಾಡುತ್ತಿವೆ. ಆದ್ದರಿಂದ ಹಳ್ಳಿ ಕಡೆ ನಾಟಿ ತಳಿಯಾದ ಹಳ್ಳಿಕಾರ್ ಕಣ್ಮರೆಯಾಗುತ್ತಿದ್ದರೆ ಅಧಿಕಾರಿಗಳ ದೆಸೆಯಿಂದ ಅಮೃತ್ ಮಹಲ್ ಸಾವನ್ನಪ್ಪುತ್ತಿವೆ.


ಐತಿಹಾಸಿಕವಾಗಿ ವಿಜಯನಗರ ಸಾಮ್ರಾಜ್ಯದ ಅರಸರು, ಮೈಸೂರು ಅರಸರು, ಟಿಪ್ಪು ಸುಲ್ತಾನ್ ಇವರೆಲ್ಲಾ ತಮ್ಮ ಆಡಳಿತದ ಕಾಳಜಿ ಎಂಬಂತೆ ರಕ್ಷಿಸಿಕೊಂಡು ಬಂದ ಈ ಅಮೃತ್ ಮಹಲ್ ತಳಿಯನ್ನು ಬ್ರಿಟಿಷರ ಕಾಲದಲ್ಲಿ ಮೆಗ್ಗಾನ್ ಎಂಬ ಅಧಿಕಾರಿ ಅಭಿವೃದ್ಧಿಪಡಿಸಿದ್ದನು. ಅಮೃತ್ ಮಹಲ್ ಕೇಂದ್ರದಲ್ಲಿದ್ದ ಈತನ ಫೋಟೋವನ್ನೇ ತೆಗೆದು ಬಿಸಾಡಿದ್ದಾರೆ. ಈ ಬಗ್ಗೆ ಕೇಳಿದರೆ ಸಿಬ್ಬಂದಿ ತಲೆಹರಟೆ ಪ್ರಶ್ನೆ ಕೇಳಿದಂತೆ ನಮ್ಮನ್ನು ನೋಡುತ್ತಾರೆ. ರಾಜ್ಯದ ಆರು ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಕಾವಲು, ನೂರಾರು ಸಿಬ್ಬಂದಿಯನ್ನು ಹೊಂದಿದ್ದ ಅಮೃತ್ ಮಹಲ್ ಎಲ್ಲ ಕಡೆಯೂ ಅವನತಿ ಹೊಂದುತ್ತ ಬಂದಿದೆ. ಇದನ್ನು ನಿರ್ವಹಿಸುತ್ತ ಬರುತ್ತಿರುವ ಸಿಬ್ಬಂದಿಗಳನ್ನು ಯಾರು ಏನೂ ಮಾಡಿಕೊಳ್ಳಲಾಗುವುದಿಲ್ಲ, ಎಲ್ಲ ಇಲಾಖೆಗಳಲ್ಲೂ ಇದೇ ಪರಿಸ್ಥಿತಿ ಇದೆ. ಆದ್ದರಿಂದ ನಾಡಿನ ಕೃಷಿಕ ಸಮಾಜ ಹೋರಾಡಿ ಅಮೃತ್ ಮಹಲ್ ಉಳಿಸಿಕೊಳ್ಳಬೇಕಿದೆ. ಏಕೆಂದರೆ ಸಹಜ ಕೃಷಿಯವರಿಗೆ ಈ ದನದ ಸಗಣಿ, ಗಂಜಲ ಅಮೃತ ನಿಧಿಯಿದ್ದಂತೆ. ಯಾವ ಕಾಯಿಲೆಗಳೂ ಇಲ್ಲದ ಅತ್ಯಂತ ಬಲಿಷ್ಟವಾದ ಈ ತಳಿ ಹೋದರೆ, ಅಲ್ಲಿಗೆ ಕೃಷಿಕ ಸಮಾಜವೇ ಹೋದಂತೆ.

ಈ ರಾಸುಗಳ ಹಸಿವಿನ ಆಕ್ರಂದನ ಕೇಳಿದ ಪಾವಗಡದ ಜಪಾನಂದ ಸ್ವಾಮೀಜಿಯವರು ಒಂದು ಲಕ್ಷ ರೂ. ಬೆಲೆಯ ಲೋಡುಗಟ್ಟಲೆ ಮೇವು ಕಳಿಸಿದ್ದಾರೆ. ಮತ್ತೆ ಬೇಕಾದರೆ ಕಳಿಸುತ್ತೇನೆ ಎಂದಿದ್ದಾರೆ. ಇದಕ್ಕೂ ಮೊದಲು ಬೀರೂರು ಕೇಂದ್ರದಿಂದ 3 ಟ್ರ್ಯಾಕ್ಟರ್ ಲೋಡು ಬಂದಿತ್ತು, ಇದು ಯಾವ ಮೂಲೆಗೂ ಸಾಲುವುದಿಲ್ಲ, ಬೇಗ ಮುಗಿದು ಹೋಗಬಾರದೆಂದು ಒಂದೊಂದೇ ಹಿಡಿ ಹಾಕುತ್ತಿರುವ ಸಿಬ್ಬಂದಿಗಳೆಲ್ಲಾ ಕಣ್ಣೊರೆಸುವ ನಾಟಕ ಮಾಡುತ್ತಿದ್ದಾರೆ. ಜಪಾನಂದರ ಕಾಳಜಿ, ಇಡೀ ಇಲಾಖೆಯಲ್ಲಿ ಮೇವಾಕುವ ಸಿಬ್ಬಂದಿಯಿಂದ ಹಿಡಿದು ಮೇಲಿನ ಅಧಿಕಾರಿ ಮತ್ತು ಮಂತ್ರಿಯವರೆಗೆ ಯಾರಲ್ಲೂ ಕಂಡುಬರುತ್ತಿಲ್ಲ. ವಿಪರ್ಯಾಸವೆಂದರೆ ಒಂದು ಕಾಲದ ಪಶುಸಂಗೋಪನಾ ಸಚಿವರಾಗಿದ್ದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿರುವ ಅವಧಿಯಲ್ಲೇ, ಅಮೃತ್ ಮಹಲ್ ಅವಸಾನದ ಅಂಚಿಗೆ ದೂಡಲ್ಪಟ್ಟಿರುವುದು.

■ ಬಿ.ಚಂದ್ರೇಗೌಡ




ಕಡೂರು ಶಾಸಕ ವೈ.ಎಸ್.ವಿ. ದತ್ತ ಜಿಲ್ಲಾಧಿಕಾರಿ ಜಿ. ಸತ್ಯವತಿಯೊಂದಿಗೆ ಸಮಾಲೋಚನೆ



ಇಲಾಖೆ ಅಧಿಕಾರಿಯೊಂದಿಗೆ ಛೀಮಾರಿ ಹಾಕುತ್ತಿರುವ ಜಿಲ್ಲಾಧಿಕಾರಿ

ಂಜನಗೂಡು: ಗೌಡರ ದಾಳದ ನಡುವೆ ಕಾಂಗ್ರೆಸ್ ಕೊಸರಾಟ


ಶ್ರೀನಿವಾಸ್ ಪ್ರಸಾದ್

ದಿನದಿಂದ ದಿನಕ್ಕೆ ನಂಜನಗೂಡು ಪಚುನಾವಣಾ ಕಣದಲ್ಲಿ ಗೊಂದಲ, ಗದ್ದಲ, ಮಳಗಳ ರಂಗೇರುತ್ತಿದೆ. ಮುಖ್ಯಮಂತ್ರಿ ರಾಮಯ್ಯನವರಿಗೆ ಈ ಉಪಚುನಾವಣೆ ಯಲ್ಲಿ ಗ್ರೆಸ್ ಅಭ್ಯರ್ಥಿಯ ಗೆಲುವು ತಕ್ಷಣಕ್ಕೆ ಖ್ಯವಾಗಿದೆ. ಮುಂಬರುವ 2018ರ ವಿಧಾನಸಭಾ ನಾವಣೆಗೆ ಕಾರ್ಯಕರ್ತರಲ್ಲಿ ಹುಮ್ಮಸ್ಸು ಟ್ಟಿಸುತ್ತದೆ, ಮತದಾರರಲ್ಲಿ ಮೂಡುವ ಅಭಿಪ್ರಾಯದ ಮೇಲೆ ಪ್ರಭಾವ ಬೀರುತ್ತದೆ ನ್ನುವುದಕ್ಕಿಂತ ಪ್ರತಿಷ್ಠೆಯೇ ಇಲ್ಲಿ ತಲೆನೋವಿನ ಸ. ಯಾಕೆಂದರೆ ರಾಜೀನಾಮೆ ಬಿಸಾಕಿದ ದಿನದಿಂದ ಭಿಮಾನಿ ಸಮಾವೇಶ'ದ ಮೂಲಕ ಶ್ರೀನಿವಾಸ ದರು ಸಿದ್ದರಾಮಯ್ಯ ವಿರುದ್ಧ ವೈಯಕ್ತಿಕ ಹಗೆ ಸುತ್ತಲೇ ಬಂದಿದ್ದಾರೆ.

ಡರ ದಾಳ, ಎರಡು ಫಲ

ಇನ್ನು ಜೆಡಿಎಸ್‌ನ ದೇವೇಗೌಡ ಹಾಗೂ ಕುಮಾರ ಯ ಉಪಚುನಾವಣೆಯಲ್ಲಿ ಪಕ್ಷದ ಮಾನ, ಜೇಬಿನ ದ ಲೆಕ್ಕ ಹಾಕುತ್ತ ತಮ್ಮ ಪಾರ್ಟಿಯ ಕಳಲೆ ವಮೂರ್ತಿಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟು ಯಲ್ಲಿ ನೆಮ್ಮದಿಯಾಗಿ ಆಟ ನೋಡುವ ಣಿಕೆಯಲ್ಲಿದ್ದಾರೆ. ಅವರ ಈ ನಡೆಗೆ ಹಲವು ಣಗಳಿವೆ. ಮೊದಲನೆಯದು, ಕಾಂಗ್ರೆಸ್‌ಗೆ ಜೀನಾಮೆ ಕೊಟ್ಟ ಮೇಲೆ ಶ್ರೀನಿವಾಸ ಪ್ರಸಾದ್ ಎಸ್ ಸೇರುತ್ತಾರೆಂಬ ವದಂತಿಗಳಿದ್ದವು. ಅದಕ್ಕೆ ರಕವೆಂಬಂತೆ ದೇವೇಗೌಡರೂ ಶ್ರೀನಿವಾಸ ದ್ ಜೆಡಿಎಸ್‌ಗೆ ಬರುವುದಾದರೆ ಸ್ವಾಗತ ವಂತ ಇಲ್ಲ ಎಂದಿದ್ದರು. ಅಲ್ಲದೇ ಜೆಡಿಎಸ್ ಕ ಜಿ.ಟಿ.ದೇವೇಗೌಡರು ಶ್ರೀನಿವಾಸ ಪ್ರಸಾದ್‌ರನ್ನು ಟಿಯಾಗಿ ಮಾತುಕತೆಯನ್ನೂ ನಡೆಸಿದ್ದರು.


ಆದರೆ ಶ್ರೀನಿವಾಸ ಪ್ರಸಾದ್ ರಾಜಕೀಯ ಲಾಭ ದ ಲೆಕ್ಕಾಚಾರ ಹಾಕಿ ಬಿಜೆಪಿ ಸೇರಿಕೊಂಡರೆ ಂದೊಂದು ದಿನ ರಾಜ್ಯಪಾಲ, ರಾಜ್ಯಸಭಾ ಸ್ಯನಂತಹ ಹುದ್ದೆಗಳು ಒದಗಿಬರಬಹುದೆಂಬ ಬುಗನಸಿನಲ್ಲಿ ದಲಿತತ್ವದ ನೀತಿಯನ್ನು ಕಿತ್ತುಬಿಸಾಡಿ ಪಿಯ ಕೇಸರಿ ಪತಾಕೆ ಹಿಡಿದಿದ್ದಾರೆ. ತಮ್ಮ ಪಕ್ಷದ ನ್ ಕಡೆಗಣಿಸಿ ಬಿಜೆಪಿಯತ್ತ ಹೋದ ದ್‌ರನ್ನು ಮುಗಿಸುವುದಷ್ಟೇ ದೇವೇಗೌಡರ ಲೈನ್ ಉದ್ದೇಶದಂತಿದೆ. ಅದಕ್ಕೋಸ್ಕರವೇ ತಮ್ಮ ದ ಪ್ರಬಲ ಪ್ರತಿಸ್ಪರ್ಧಿಯನ್ನೇ ಕಾಂಗ್ರೆಸ್ ಅಖಾಡಕ್ಕೆ ಹಳೆಯ ಶಿಷ್ಯ ಸಿದ್ದರಾಮಯ್ಯನವರ ಮುಖ ಸುವ ಕೆಲಸ ಮಾಡುತ್ತಿದ್ದಾರೆ.

ಎರಡನೆಯದಾಗಿ, ಈ ದಾಳದಲ್ಲಿ ಚಾಣಾಕ್ಷ ಗೌಡರ ಇನ್ನೊಂದು ಲೆಕ್ಕಾಚಾರವೂ ಇದೆ. ನೆಂದರೆ 2018ರ ಎಲೆಕ್ಷನ್ ಫಲಿತಾಂಶ ಸಮ್ಮಿಶ್ರ ರದ ಅನಿವಾರ್ಯತೆ ತಂದಿಡುವುದು ಗ್ಯಾರಂಟಿ ನ್ನೋದು ಗೌಡರ ಗುಣಾಕಾರ. ಹಾಗಾದಲ್ಲಿ ಬಿಜೆಪಿ ತೆ ಸೇರಬೇಕೆಂದರೆ ಹೆಚ್ಚೇನು ಶ್ರಮ ಪಡಬೇಕಿಲ್ಲ, ಕಾರ ದಾಹದ ಕೇಸರಿವಾಲಾಗಳು ತಾವಾಗಿಯೇ ಹುಕಿಕೊಂಡು ಬರುತ್ತಾರೆ. ಒಂದೊಮ್ಮೆ ಕಾಂಗ್ರೆಸ್ ತೆ ಮೈತ್ರಿ ಸರ್ಕಾರ ರಚನೆ ಮಾಡುವ ಸಂದರ್ಭ ರಾದರೆ ಸಿದ್ದರಾಮಯ್ಯನೊಂದಿಗೆ ಇರುವ ಮುನಿಸು ಅಡ್ಡಾಗಬಹುದು. ಹಾಗಾಗಿ ಆದಷ್ಟು ಆ ರೊಂದಿಗೆ ಈಗಿನಿಂದಲೇ ಒಂದು ಸಮತೋಲಿತ ಂಬಂಧವನ್ನು ಮರುಸೃಷ್ಟಿಸಿಕೊಳ್ಳಬೇಕಿರುವ ತ್ಯವನ್ನು ಗೌಡರು ಅರ್ಥಮಾಡಿಕೊಂಡಿದ್ದಾರೆ. ಹಾಗಿ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲೇ ದು ಹೊಂದಾಣಿಕೆಯ ವಾತಾವರಣವನ್ನು ಸಿಕೊಳ್ಳುವ ಸಲುವಾಗಿಯೂ ಅವರು ಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡುತ್ತಿರುವ ಯನ್ನು ತಳ್ಳಿ ಹಾಕುವಂತಿಲ್ಲ.

ಕಳಲೆ ವರ್ಸಸ್ ಮಹದೇವಪ್ಪ

ಇನ್ನು ನಂಜನಗೂಡಿನಲ್ಲಿ ಭವಿಷ್ಯ ಹುಡುಕುತ್ತಿರುವವರ ಪಟ್ಟಿ ಬೆಳೆಯುತ್ತಲೇ ಇದೆ. ಈ ಉಪಚುನಾವಣೆಯಲ್ಲಿ ಶ್ರೀನಿವಾಸ್ ಪ್ರಸಾದ್ ಗೆದ್ದು ಬಂದರೂ ಅವರು ಮತ್ತೊಮ್ಮೆ ಚುನಾವಣೆಗೆ ಖಂಡಿತವಾಗಿ ಸ್ಪರ್ಧಿಸುವುದಿಲ್ಲ, ಹಾಗಾಗಿ ಅವರ ಗೆಲುವು ಇಲ್ಲಿ ಬಿಜೆಪಿಗೆ ಒಳ್ಳೆಯ ನೆಲೆ ಒದಗಿಸಿ ಕೊಟ್ಟು ಭವಿಷ್ಯದಲ್ಲಿ ನನಗೆ ನೆರವಾಗುತ್ತದೆ ಅನ್ನೋ ಲೆಕ್ಕಾಚಾರದಲ್ಲಿ ಕೋಟೆ ಎಂ ಶಿವಣ್ಣ ಮುಳುಗಿದ್ದರೆ ಸಚಿವ ಎಚ್.ಸಿ. ಮಹದೇವಪ್ಪ ಅವರು ಮುಂದಿನ ಚುನಾವಣೆ ವೇಳೆಗೆ ತಮ್ಮ ಕ್ಷೇತ್ರವನ್ನು ನಂಜನಗೂಡಿಗೆ ಬದಲಾಯಿಸಿಕೊಳ್ಳುವ ಇರಾದೆಯಲ್ಲಿ ಇದ್ದಂತಿದೆ.


ಅಸಲಿಗೆ ಈ ಉಪಚುನಾವಣೆಯಲ್ಲೇ ಅವರು ತಮ್ಮ ಮಗ ಸುನೀಲ್ ಬೋಸ್‌ನನ್ನು ನಂಜನಗೂಡಿನಲ್ಲಿ ಪ್ರತಿಷ್ಠಾಪಿಸಬೇಕಿತ್ತು, ಆದರೆ ಆತ


ದೇವೇಗೌಡ


ಮಾಡಿಕೊಂಡಿರುವ ಅಪರಾತಪರಾಗಳು ಕಾಂಗ್ರೆಸ್ ಸರ್ಕಾರಕ್ಕೆ ಕಳಂಕ ಅಂಟಿಸಬಹುದೆನ್ನುವ ಕಾರಣಕ್ಕೆ ಸ್ವತಃ ಸಿದ್ದರಾಮಯ್ಯನವರೇ ಮನಸ್ಸು ಮಾಡಲಿಲ್ಲ, ಆ ಮುನಿಸು ಮಹದೇವಪ್ಪನಿಗೆ ಇದ್ದೇ ಇದೆ. ಆದರೆ 2018ರ ಚುನಾವಣೆ ವೇಳೆಗೆ ಮಗನಿಗೆ ರಾಜಕೀಯ ಭವಿಷ್ಯ ಕಲ್ಪಿಸುವುದು ಅನಿವಾರ್ಯವಾಗಿರುತ್ತದೆ. ಆಗ ಮಗನಿಗೆ ತಾವು ಪ್ರತಿನಿಧಿಸುತ್ತಿರುವ ಟಿ.ನರಸೀಪುರ ಬಿಟ್ಟುಕೊಟ್ಟು, ತಾನು ನಂಜನಗೂಡಿಗೆ ಪಲ್ಲಟಗೊಳ್ಳುವುದು ಮಹದೇವಪ್ಪನ ಉದ್ದೇಶ ಎನ್ನಲಾಗುತ್ತಿದೆ. ಆದರೆ ಕಳಲೆ ಕೇಶವಮೂರ್ತಿ ಇದಕ್ಕೆ ಅಡ್ಡಗಾಲಾಗುತ್ತಿದ್ದಾರೆ.

ನಂಜನಗೂಡಿನ ಮೇಲೆ ಕಣ್ಣಿಟ್ಟಿದ್ದ ಮಹದೇವಪ್ಪ ಬೇಕಂತಲೇ ಉಪಚುನಾವಣೆಗೆ ಅಭ್ಯರ್ಥಿಯ ಕೊರತೆ ಸೃಷ್ಟಿಸಿದ್ದಲ್ಲದೆ ಶ್ರೀನಿವಾಸ್ ಪ್ರಸಾದ್‌ರನ್ನು ಬಗ್ಗುಬಡಿಯಲು ಹೆಚ್.ಸಿ.ಮಹದೇವಪ್ಪ ಹಾಗೂ ಅವರ ಪುತ್ರ ಸುನೀಲ್ ಬೋಸ್‌ಗೆ ಮಾತ್ರ ಸಾಧ್ಯ ಎಂಬಂತೆ ಬಿಂಬಿಸಿದ್ದರು. ಅಭ್ಯರ್ಥಿ ಆಯ್ಕೆ ಮಾಡಲು ಕೆಪಿಸಿಸಿ ಉಪಾಧ್ಯಕ್ಷ ಎಲ್.ಹನುಮಂತಯ್ಯ ನೇತೃತ್ವದ ಸಮಿತಿ ಕ್ಷೇತ್ರದಲ್ಲಿ ಸುತ್ತಾಡಿದಾಗಲೂ ಜನರಿಂದ ಎಚ್.ಸಿ.ಮಹದೇವಪ್ಪ ಅಥವಾ ಸನೀಲ್ ಬೋಸ್ ಹೆಸರೇ ತೇಲಿಬರುವಂತೆ ನೋಡಿಕೊಂಡಿದ್ದರು. ಸಿದ್ದರಾಮಯ್ಯನವರ ನಿವಾಸದಲ್ಲಿ ನಡೆದ ಸಭೆಯಲ್ಲೂ ಹಲವು ಮುಖಂಡರ ಬಾಯಲ್ಲಿ ತಮ್ಮಿಬ್ಬರ ಹೆಸರುಗಳೇ ಧ್ವನಿಸುವಂತೆ ಮಾಡುವಲ್ಲಿ ಮಹದೇವಪ್ಪ ಯಶಸ್ವಿಯಾಗಿದ್ದರು.

ಇನ್ನೂ ಒಂದುಹೆಜ್ಜೆ ಮುಂದೆಹೋದ ಮಹದೇವಪ್ಪ ಮಾಜಿ ಸಂಸದ ಹೆಚ್.ವಿಶ್ವನಾಥ್ ಕೂಡಾ ತಮ್ಮ ಪರವಾಗಿ ಬ್ಯಾಟಿಂಗ್ ಮಾಡುವಂತ ವಾತಾವರಣ ಸೃಷ್ಟಿಸಿದ್ದರು. ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿದ ವಿಶ್ವನಾಥ್ "ನಂಜನಗೂಡು ಉಪಚುನಾವಣೆಯಲ್ಲಿ ಜೆಡಿಎಸ್‌ನ ಕಳಲೆ ಕೇಶವಮೂರ್ತಿಯನ್ನು ಕಾಂಗ್ರೆಸ್‌ಗೆ ಕರೆತಂದು ಟಿಕೆಟ್


ಮಹದೇವಪ್ಪ


ನೀಡಲು ಪ್ರಯತ್ನಗಳು ನಡೆಯುತ್ತಿವೆ. ಇದನ್ನೆಲ್ಲ ನೋಡಿಕೊಂಡು ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಸುಮ್ಮನಿದ್ದಾರೆ, ಇವರಿಗೆ ಮಾನಮರ್ಯಾದೆ ಇದೆಯೇ? ಬೇರೆ ಪಕ್ಷದವರನ್ನು ಕಾಂಗ್ರೆಸ್‌ಗೆ ಕರೆತರುವ ಅನಿವಾರ್ಯವಾದರೂ ಏನಿದೆ? ಕಾಂಗ್ರೆಸ್‌ನಲ್ಲಿರುವವರು ನಿಮಗೆ ಕಾಣುವುದಿಲ್ಲವೇ? ಶ್ರೀನಿವಾಸ್ ಅವರ ವಿರುದ್ಧ ನಿಲ್ಲುವವರು ಕಾಂಗ್ರೆಸ್‌ನಲ್ಲಿ ಯಾರೂ ಇಲ್ಲವೆಂದರೆ ಅರ್ಥವೇನು? ನಂಜನಗೂಡಿನಲ್ಲಿ ಕಾಂಗ್ರೆಸ್ ಬಲಿಷ್ಠ ಹಾಗೂ ಬಲವಾಗಿದೆ. ಅಲ್ಲಿ ಕಾಂಗ್ರೆಸ್ ಪರವಾಗಿ ಯಾರನ್ನು ಚುನಾವಣೆಗೆ ಇಳಿಸಿದರೂ ಗೆಲ್ಲುವುದು ಖಚಿತ. ಒಂದುವೇಳೆ ನಂಜನಗೂಡು ಉಪಚುನಾವಣೆಯಲ್ಲಿ ಕಾಂಗ್ರೆಸ್ ಸೋತರೆ ಸರ್ಕಾರ ಪತನವಾಗುತ್ತಾ? ಕಾಂಗ್ರೆಸ್‌ನಲ್ಲೇ ಸಾಕಷ್ಟು ಅಭ್ಯರ್ಥಿಗಳಿದ್ದು, ಅವರನ್ನು ಕಣಕ್ಕಿಳಿಸಲು ಪಕ್ಷದ ನಾಯಕರಿಗೆ ಧೈರ್ಯವಿಲ್ಲ" ಎಂದು



ಸಿದ್ದರಾಮಯ್ಯ

ಗುಡುಗಿದ್ದರು. ಇದು ಪರೋಕ್ಷವಾಗಿ ಮಹದೇವಪ್ಪ ಹಾಗೂ ಅವರ ಪುತ್ರ ಸುನೀಲ್ ಬೋಸ್‌ರ ಬೆನ್ನು ತಟ್ಟಿದಂತಿತ್ತು. ನಂತರ ನಂಜನಗೂಡಿನ ಮಹದೇವಪ್ಪನವರ ನಿವಾಸದಲ್ಲಿ ಕಳೆದ ವಾರವಷ್ಟೇ ಸಭೆ ನಡೆಸಿದ ಕ್ಷೇತ್ರದ ಮುಖಂಡರು "ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಸೇರುವುದು ಬೇಡವೇಬೇಡ, ಒಂದುವೇಳೆ ಅವರು ಪಕ್ಷಕ್ಕೆ ಬಂದರೆ ನಮ್ಮ ಬೆಂಬಲ ಇರುವುದಿಲ್ಲ" ಎಂದು ಹೇಳಿದ್ದಾರೆ. ಇದು ಮಹದೇವಪ್ಪನವರ ನಿವಾಸದಲ್ಲೇ ನಡೆದ ಸಭೆಯಾದ್ದರಿಂದ ಇಂತಹದ್ದೊಂದು ಹೇಳಿಕೆಯ ಉದ್ದೇಶ ಏನೆಂಬುದನ್ನು ಯಾರು ಬೇಕಾದರು ಊಹಿಸಬಹುದು.

ಈ ನಡುವೆ ಕಳಲೆ ಕೇಶವಮೂರ್ತಿ ತಾನು ಜೆಡಿಎಸ್‌ನಲ್ಲೇ ಉಳಿಯುವುದಾಗಿ ಹೇಳಿ ಎಲ್ಲರನ್ನು ಕನ್‌ಫ್ಯೂಷನ್‌ನಲ್ಲಿ ಇಟ್ಟಿದ್ದರು. ಆ ಕಾರಣಕ್ಕೆ ತುಸು ನಿರಾಳವಾಗಿದ್ದ ಮಹದೇವಪ್ಪಗೆ ಶಾಕ್ ನೀಡಿದ ಕಳಲೆ ಕೇಶವಮೂರ್ತಿ ಇತ್ತೀಚೆಗೆ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷದ ಘೋಷಿತ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಮಾರನೇ ದಿನದಿಂದಲೇ ಮತ ಬೇಟೆ ಪ್ರಾರಂಭಿಸಿರುವ ಕಳಲೆ ಕೇಶ್ವಮೂರ್ತಿ ಕಸುವಿನಹಳ್ಳಿ, ಹೊಸೂರು, ನವಿಲೂರು ಮುಂತಾದ ಗ್ರಾಮಳಿಗೆ ತೆರಳಿ ಬೆಂಬಲಿಗರನ್ನು ತಮ್ಮತ್ತ ಸೆಳೆಯಲಾರಂಭಿಸಿದ್ದಾರೆ.


ಸದ್ಯದಲ್ಲೇ ತಾಲ್ಲೂಕಿನಲ್ಲಿರುವ ಬೆಂಬಲಿಗರ ಸಭೆ ಕರೆದು ಅಲ್ಲಿ ಈ ಕುರಿತು ಘೋಷಣೆ ಮಾಡುವುದಾಗಿ ಹೇಳಿರುವ ಕಳಲೆ ಈ ಬಗ್ಗೆ ಚರ್ಚಿಸಲು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪರನ್ನು ಭೇಟಿ ಮಾಡುವುದಾಗಿ ಹೊಸ ಬಾಂಬ್ ಸಿಡಿಸಿದ್ದರು. ಅದರಂತೆ ಸುಮಾರು 15 ಮಂದಿ ಬೆಂಬಲಿಗರೊಂದಿಗೆ ಮಹದೇವಪ್ಪ ಅವರ ನಿವಾಸಕ್ಕೆ ತೆರಳಿ ಮತನಾಡಲು ಯತ್ನಿಸಿದಾಗ "ನೀವು ಇನ್ನೂ ಪಕ್ಷಕ್ಕೇ ಸೇರಿಲ್ಲ,


ಸುನೀಲ್ ಬೋಸ್


ಕಳಲೆ ಕೇಶವಮೂರ್ತಿ

ಹೀಗಾಗಿ ನಿಮ್ಮ ಜೊತೆ ನಾನೇನು ಮಾತನಾಡಲಿ. ಈ ಹಿಂದೆ ಒಮ್ಮೆ ಬದನವಾಳುವಿನಲ್ಲಿ ಭೇಟಿಯಾದ ಸಂದರ್ಭ ನೀವು ನನ್ನೊಡನೆ ಮಾತನಾಡುತ್ತಾ ಶ್ರೀನಿವಾಸಪ್ರಸಾದ್ ನಮಗೆ ನಾಯಕರು ಎಂದು ಹೇಳಿದ್ದು ನೆನಪಿದೆಯೇ? ಹಾಗಾಗಿ ನನ್ನೊಡನೆ ಮಾತನಾಡುವುದೇನಿದೆ?" ಎಂದು ಮಹದೇವಪ್ಪ ಖಾರವಾದ ಪ್ರತಿಕ್ರಿಯೆ ಕೊಟ್ಟು ಕಳಲೆಯನ್ನು ಹೊರಗಟ್ಟಿದ್ದರು. ಅಲ್ಲದೆ ಮೈಸೂರಿನ ವಿಜಯನಗರದ ತಮ್ಮ ನಿವಾಸದಲ್ಲಿ ಸಭೆ ನಡೆಯುವಂತೆ ನೋಡಿಕೊಂಡ ಮಹದೇವಪ್ಪ ಕಳಲೆ ಕಾಂಗ್ರೆಸ್ ಅಭ್ಯರ್ಥಿಯಾಗುವುದಕ್ಕೆ ವಿರೋಧಿ ನಡೆ ಹುಟ್ಟು ಹಾಕುತ್ತಿದ್ದಾರೆ.

ಚುನಾವಣೆಗೆ ತಾವು ಇಲ್ಲವೇ ತಮ್ಮ ಮಗ ಬೋಸ್ ನಿಲ್ಲುವಂತೆ ತಮ್ಮ ಮನೆಗೇ ಬಂದು ಒತ್ತಾಯಿಸುವಂತೆ ಒಂದಷ್ಟು ಕಾಂಗ್ರೆಸ್ ಕಾರ್ಯಕರ್ತರ ದಂಡಿನ ಕೃತಕ ಸನ್ನಿವೇಶವನ್ನು ಸೃಷ್ಟಿಸಿ ಅವರಿಗೆ ಸಮಾಧಾನ ಮಾಡುವ ಧಾಟಿಯಲ್ಲಿ "ಪಕ್ಷದ ಅಭ್ಯರ್ಥಿ ಯಾರೆಂಬುದು ಇನ್ನೂ ಅಂತಿಮವಾಗಿಲ್ಲ, ನಾನು ಮುಂದಿನ ಒಂದೆರಡು ದಿನದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗಮನಕ್ಕೆ ತರುತ್ತೇನೆ. ಸಾಧ್ಯವಾದರೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಿಮ್ಮೆಲ್ಲರ ಅಭಿಪ್ರಾಯ ಪಡೆಯುವ



ವಿಶ್ವನಾಥ್

ಕೆಲಸ ಮಾಡುತ್ತೇನೆ. ಕಾರ್ಯಕರ್ತರು ಪಕ್ಷಕ್ಕೆ ಶಕ್ತಿಯಿದ್ದಂತೆ. ಅವರನ್ನು ಕೇಳದೆ, ಅವರ ಅಭಿಪ್ರಾಯ ಪಡೆಯದೆ ಯಾವುದೇ ತೀರ್ಮಾನಕ್ಕೆ ಬರುವುದಿಲ್ಲ" ಎಂಬ ಪೂರ್ವನಿರ್ಧರಿತ ಆಶ್ವಾಸನೆ ಕೊಟ್ಟು ಕಳಿಸಿದ್ದಾರೆ. ಒಟ್ಟಿನಲ್ಲಿ ತಮ್ಮ ಸುಪುತ್ರ ಸುನೀಲ್ ಬೋಸ್‌ಗೆ ರಾಜಕೀಯ ಭವಿಷ್ಯ ಕಲ್ಪಿಸುವ ಸಲುವಾಗಿ ತೊಟ್ಟಿಲನ್ನೂ ತೂಗುವ, ಮಗುವನ್ನೂ ಚಿವುಟುವ ಡಬಲ್‌ಗೇಮ್‌ಗೆ ಮಹದೇವಪ್ಪ ಕೈಹಾಕಿದಂತಿದೆ.

ಈ ನಡುವೆ ಫೆಬ್ರವರಿ 7ರಂದು ನಂಜನಗೂಡಿನಲ್ಲಿ ಬೆಂಬಲಿಗರ ಸಭೆ ನಡೆಸಿದ ತಾಲ್ಲೂಕು ಜಾ.ದಳ ಅಧ್ಯಕ್ಷ ಕಳಲೆ ಕೇಶವಮೂರ್ತಿ "ಕಾಂಗ್ರೆಸ್ ಪಕ್ಷ ನನಗೆ ಆಹ್ವಾನ ನೀಡಿರುವುದು ಖಚಿತ. ಹಾಗಾಗಿಯೇ ನಾನು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೆ, ಉಪ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದ್ದಾರೆ. 37 ವರ್ಷಗಳ ಕಾಲ ಒಡನಾಟ ಇರಿಸಿಕೊಂಡಿದ್ದ ಜಾ.ದಳ ನಾಯಕರಾದ ದೇವೇಗೌಡ ಹಾಗೂ ಕುಮಾರಸ್ವಾಮಿಯವರಿಗೆ ಇಲ್ಲಿನ ಪರಿಸ್ಥಿತಿ ಮನದಟ್ಟು ಮಾಡಿಕೊಟ್ಟೇ ಕಾಂಗ್ರೆಸ್ ಸೇರುವ ನಿರ್ಧಾರ ಕೈಗೊಂಡಿದ್ದೇನೆ. ಇದು ನಾನು ಭಾಗವಹಿಸುವ ಆ ಪಕ್ಷದ ಕೊನೆಯ ಸಭೆ" ಎನ್ನುತ್ತಾ ಸಿಂಪಥಿ ಕಣ್ಣೀರಿಟ್ಟಿದ್ದಾರೆ. ಅಲ್ಲಿಗೆ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾಗೋದು ಬಹುತೇಕ ಖಚಿತವಾದಂತಾಗಿದೆ. ಇನ್ನೇನಿದ್ದರೂ ಅಧಿಕೃತ ಘೋಷಣೆಯೊಂದೇ ಬಾಕಿ. ಇದು ಮಹದೇವಪ್ಪನ ರಾಜಕೀಯ ಬದುಕಿನಲ್ಲಿ ಬಹುದೊಡ್ಡ ಹಿನ್ನಡೆಯೇ ಸರಿ. ಈ ಹಿನ್ನಡೆ ಫಲಿತಾಂಶದ ಮೇಲೆ ಹೇಗೆ ಪ್ರಭಾವ ಬೀರುತ್ತೋ ಕಾದುನೋಡಬೇಕು.

■ ಶರ

ಚಿತ್ರದುರ್ಗ: ಅಂಬೇಡ್ಕರ್ ನಿಗಮಕ್ಕೆ ವಕ್ಕರಿಸಿದ ಮಹಾವಂಚಕಿ




ಚಿತ್ರದುರ್ಗದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವನ್ನು ಭ್ರಷ್ಟ ಅಧಿಕಾರಿ ಗಣ ಮತ್ತು ದುಷ್ಟ ಪೊಲಿಟಿಕಲ್ ಬಣ ಹರಿದು ಮುಕ್ಕುತ್ತಿವೆ. ಮೇಲ್ವರ್ಗ ಲಿಂಗಾಯತ ಸಮುದಾಯಕ್ಕೆ ಸೇರಿದ ಚಂದ್ರಮ್ಮ ಎಂಬ ಹಡಬೆ ಹೆಂಗಸು ಖೊಟ್ಟಿ ಜಾತಿ ಪ್ರಮಾಣಪತ್ರ ಮಾಡಿಸಿಕೊಂಡು ಮಾದಿಗ ಜಾತಿಯ ಅಮಾಯಕ ಹೆಣ್ಮಕ್ಕಳ ಹೆಸರಲ್ಲಿ ಬರೋಬ್ಬರಿ ಐವತ್ತು ಲಕ್ಷ ರೂಪಾಯಿ ಲೂಟಿ ಹೊಡೆದಿರುವ ಪ್ರಕರಣವೊಂದೇ ಸಾಕು ಅಂಬೇಡ್ಕರ್ ಅಭಿವೃದ್ಧಿ ನಿಗಮದ ದುರ್ಗತಿಯನ್ನು ತಿಳಿದಿಡಲಿಕ್ಕೆ ಚಿತ್ರದುರ್ಗದ ಮಾನಂಗಿ ಎಂಬ ಗ್ರಾಮದ ಚಂದ್ರಮ್ಮ ಮೂಲತಃ ಲಿಂಗಾಯತ ಜಾತಿಗೆ ಸೇರಿದವಳು. 13.05.1965ರಂದು ಆಕೆ ಹುಟ್ಟಿದ್ದಕ್ಕೆ, ಆಕೆಯ ತಂದೆ ಗೌಡರ ಬಸಪ್ಪ ತಾಯಿ ಬಸಮ್ಮ ಲಿಂಗಾಯತ ಜಾತಿಯವರೆಂಬುದಕ್ಕೆ ಸಾಕಷ್ಟು ಸ್ಪಷ್ಟ ಪುರಾವೆಗಳಿವೆ.

ಈಕೆಯ ಗಂಡ ಅನ್ನಿಸಿಕೊಂಡ ಮಲ್ಲಿಕಾರ್ಜುನ ನಾಮಧೇಯಸ್ಥ ಪಕ್ಕಾ ಅಮ್ಮಾವ್ರ ಗಂಡ. ಚಂದ್ರಮ್ಮನ ದರ್ಬಾರ್ ಮುಂದೆ ಹೊಟ್ಟೆಪಾಡಿಗೆ ಡ್ರೈವರ್ ಕಸುಬು ಮಾಡಿಕೊಂಡಿರುವ ಈ ಪ್ರಾಣಿಯದು ಏನೂ ನಡೆಯದು. ಇನ್ನು ಚಂದ್ರಮ್ಮಳ ಅಣ್ಣತಮ್ಮಂದಿರೆಲ್ಲ ರಾಜಕಾರಣದ ಪಡಸಾಲೆಯಲ್ಲಿ ಪಲ್ಲಂಗ ಹಾಕಿಕುಳಿತವರೆ. ಒಂದು ಆ್ಯಂಗಲ್‌ನಿಂದ ನಟೋರಿಯಸ್ ರೌಡಿಣಿ ಮಾರಿಮುತ್ತಮ್ಮನ ಜೆರಾಕ್ಸ್ ಕಾಪಿಯಂತೆ ಕಾಣುವ ಚಂದ್ರಮ್ಮ ಕೂಡಾ ಹೆಚ್ಚೂಕಮ್ಮಿ ಗೂಂಡಾಗಿರಿಯ ಜಬರ್‌ದಸ್ತ್ ಹೆಂಗಸು.

ರಾಜಕಾರಣದ ಸೆರಗಲ್ಲಿ ತೇಲಾಡುತ್ತಿದ್ದ ಆಕೆಯ ಕಣ್ಣಿಗೆ ಗುಪ್ತನಿಧಿಯಂತೆ ಕಂಗೊಳಿಸಿದ್ದು ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ನಿಧಿ. ಆದಕ್ಕೆಂದೇ ಲಿಂಗಾಯತ ಜಾತಿಯವಳಾದರೂ ತಾನು ಚಿತ್ರದುರ್ಗದ ಕುರುಬರಹಳ್ಳಿ ವಾಸಿ ಕೊರಮ (ಆದಿ ಕರ್ನಾಟಕ) ಜಾತಿಯವಳೆಂದು ಬೋಗಸ್ ಜಾತಿ ಪ್ರಮಾಣಪತ್ರ ಸೃಷ್ಟಿಸಿಕೊಂಡು 2012ರಿಂದ ಇಲ್ಲಿಯವರೆಗೂ ನಿಗಮದ ನಿಧಿಯನ್ನು ಬಗೆದು ತಿನ್ನುತ್ತಿದ್ದಾಳೆ.

ನಕಲಿ ಜಾತಿ ಸರ್ಟಿಫಿಕೇಟ್ ಪಡೆದ ಚಂದ್ರಮ್ಮ ದಲಿತ ಮಹಿಳಾ ಸಂಘಗಳ ಪ್ರತಿನಿಧಿಯಾಗಿ ಸೇರಿಕೊಂಡು ಆ ಸಂಘದ ಮೂಲಕ ಅಂಬೇಡ್ಕರ್ ನಿಗಮದ ಸೌಲಭ್ಯವನ್ನು ಕಬಳಿಸುತ್ತಾ ಬಂದಿದ್ದಾಳೆ. ದಾಖಲೆ ಲಭ್ಯವಿರುವ ಪ್ರಕಾರ ಈಕೆ ಇದುವರೆಗೆ ಎಂಟು ಮಹಿಳಾ ಸಂಘಗಳನ್ನು ವಂಚಿಸಿದ್ದು ಖಾತರಿಯಾಗಿದೆಯಾದರು ಇವಳ ಇಂತಹ ಅದೆಷ್ಟೋ ಪ್ರಕರಣಗಳಿರುವ ಅನುಮಾನವಿದೆ. ಸದ್ಯಕ್ಕೆ ಲೆಕ್ಕವಿರುವ ಈ ಎಂಟು ದಲಿತ ಮಹಿಳಾ ಸಂಘಗಳಿಂದ ಆಕೆ ದೋಚಿರುವ ಮೊತ್ತವೇ ಬರೋಬ್ಬರಿ 50 ಲಕ್ಷ ರೂಪಾಯಿ!

ಕಳ್ಳೀಹಟ್ಟಿ ಎಂಬ ಗ್ರಾಮ ಒಂದರಲ್ಲೇ ಈ ಮಹಾಮಹಿಮೆ ಚಂದ್ರಮ್ಮ ಏಳು ಸಂಘದ ಜುಟ್ಟು ಹಿಡಿದಿದ್ದಾಳೆ. ಶ್ರೀ ಮಂಜುನಾಥ ಸ್ವಸಹಾಯ ಸಂಘದಿಂದ 2.40 ಲಕ್ಷ, ಶ್ರೀ ಮಂಜುನಾಥ ಮಹಿಳಾ ಸಂಘದಿಂದ 3 ಲಕ್ಷ ಶ್ರೀ ಮಂಜುನಾಥ ಸ್ವಸಹಾಯ ಸಂಘದಿಂದ 3 ಲಕ್ಷ ಶ್ರೀ ಬಸವೇಶ್ವರ ಮಹಿಳಾ ಸಂಘದಿಂದ 3 ಲಕ್ಷ ಶ್ರೀ ಚೌಡೇಶ್ವರಿ ಮಹಿಳಾ ಸ್ವಸಹಾಯ ಸಂಘದಿಂದ 2.70 ಲಕ್ಷ, ಮಾನಂಗಿಯ ಶ್ರೀ ಕರಿಯಮ್ಮ ಮಹಿಳಾ ಸ್ವಸಹಾಯ ಸಂಘದಿಂದ 5 ಲಕ್ಷ ಮತ್ತು ಶ್ರೀ ಚೌಡೇಶ್ವರಿ ಮಹಿಳಾ ಸ್ವಸಹಾಯ ಸಂಘದಿಂದ 2.55 ಲಕ್ಷ ಎತ್ತಿಕೊಂಡಿದ್ದಾಳೆ. ನ್ಯಾಯವಾಗಿ ಇವೆಲ್ಲ ಪರಿಶಿಷ್ಟ ವರ್ಗದ ಅಸಹಾಯಕ ಮಹಿಳೆಯರಿಗೆ ಸಲ್ಲಬೇಕಿದ್ದ ನೆರವು.



ದೇವೇಂದ್ರಪ್ಪ


ಚಂದ್ರಮ್ಮ ಅದೆಷ್ಟು ಖತರ್‌ನಾಕ್ ಹೆಂಗಸು ಎಂದರೆ ಈ ಎಂಟೂ ಸಂಘಗಳಲ್ಲಿನ ನೂರಾರು ಮಹಿಳೆಯರ ಹೆಸರಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 22 ಲಕ್ಷ ಚಿಲ್ಲರೆಯಷ್ಟು ಭಾರೀ ಮೊತ್ತದ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯಲ್ಲಿ ಎತ್ತಾಕಿದ್ದಲ್ಲದೇ, ಅದೇ ಕಳ್ಳೀಹಟ್ಟಿ ಮಂಜುನಾಥ ಮಹಿಳಾ ಸಂಘದ ಸದಸ್ಯರಿಗೆ ತಲಾ ಒಂದು ಸಾವಿರ ನೀಡಿ ಕೈತೊಳೆದುಕೊಂಡಿದ್ದಾಳೆ. ಉಳಿದ ಸಂಘದ ಸದಸ್ಯರಿಗೆ ಹಾಗೆ ಬಿಡಿಗಾಸು ಬಿಸಾಕುವುದಿರಲಿ ಅವರ ಹೆಸರಲ್ಲಿ ಸಾಲ ದೋಚಿದ ವಾಸನೆಯನ್ನೂ ಈಕೆ ಬಿಟ್ಟುಕೊಟ್ಟಿಲ್ಲ.

ಈ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಯಿಂದ ಸಂಘದ ಪ್ರತಿ ಮಹಿಳೆಗೆ ಹದಿನೈದು ಸಾವಿರ ಸಾಲ ಸಿಗುತ್ತದೆ. ಈ ಹದಿನೈದು ಸಾವಿರದಲ್ಲಿ ಹತ್ತು ಸಾವಿರ ಸಹಾಯಧನ. ಅಂದರೆ ಅದನ್ನು ಮರುಪಾವತಿ ಮಾಡಬೇಕಿಲ್ಲ, ಉಳಿದ ಐದು ಸಾವಿರ ರೂಪಾಯಿಯನ್ನು ಮಾತ್ರ ಬ್ಯಾಂಕುಗಳಿಗೆ ಮರುಪಾವತಿಸಬೇಕು. ಚಂದ್ರಮ್ಮ ಗುರಿ ಇಟ್ಟಿದ್ದೇ ಈ ಸಹಾಯಧನದ ಅಮೌಂಟಿಗೆ.


ಚಂದ್ರಮ್ಮನ ಅವಾಂತರ ಇಂದು ನಿನ್ನೆಯದಲ್ಲ, ದಾಖಲೆ ಪ್ರಕಾರ 2013ರಿಂದಲೂ ಈಕೆ ದಲಿತ ಅಸಹಾಯಕ ಮಹಿಳೆಯರ ಹೆಸರಲ್ಲಿ ಕೋಟ್ಯಾಂತರ ರೂಪಾಯಿ ದೋಚುತ್ತಲೇ ಬಂದಿದ್ದಾಳೆ. ನಕಲಿ ಸರ್ಟಿಫಿಕೇಟ್ ಪಡೆಯುವಾಗಿನಿಂದ ಹಿ... ಇಲ್ಲಿಯವರೆಗೂ ಸಂಬಂಧಪಟ್ಟ ಇಲಾಖೆಯ ಅಧಿಕಾ... ಜೇಬು ತುಂಬಿಸುತ್ತಲೇ ತನ್ನ ಕಸುಬು ಸರಾಗ ಮಾಡಿಕೊ... ಈಕೆಯ ಕಣ್ಣಾಮುಚ್ಚಾಲೆ ಬಯಲಾದದ್ದು ಕುರುಬರಹಳ್ಳಿ ಗ್ರಾ... ಆದಿ ಕರ್ನಾಟಕ ಜಾತಿಗೆ ಸೇರಿದ ಮಹಿಳೆಯ... 2012-13ರಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ... ಮಂಡಳಿಗೆ ಕಿರುಸಾಲ ಯೋಜನೆ ಅಡಿಯಲ್ಲಿ ಸಾಲ ... 11 ಮಹಿಳೆಯರು ಅರ್ಜಿ ಸಲ್ಲಿಸಿದ್ದರು. ಆದರೆ ಅರ್ಜಿ ಸ... ಮಹಿಳೆಯರಿಗೆ ಎರಡು ವರ್ಷಗಳಿಂದ ಇಲಾಖೆಯಿಂದ ... ಪ್ರತಿಕ್ರಿಯೆಯೂ ಬರಲಿಲ್ಲ. ಆದರೆ ಅದೊಂದು ದಿನ ಇದ್ದ... ಮಂಡಳಿಯಿಂದ ಆಘಾತಕರ ನೋಟಿಸೊಂದು ... ಕೈತಲುಪಿತ್ತು, ಅರ್ಜಿ ಸಲ್ಲಿಸಿದ ತಾವುಗಳು ಈಗಾ... ಮಂಡಳಿಯಿಂದ ಸಾಲ ಪಡೆದಿದ್ದೀರಿ, ಪಡೆದ ಸಾಲ... ಇದುವರೆಗೂ ತೀರಿಸಿಲ್ಲ, ಈಗ ಸಾಲ ಮತ್ತು ಬಡ್ಡಿ... ಎಂಬುದು ಆ ನೋಟಿಸಿನ ಸಾರವಾಗಿತ್ತು.

ಆಗ ಅಕ್ಷರಶಃ ಕಂಗಾಲಾದ ದಲಿತ ಮಹಿಳೆ... ಸ್ವಾಭಿಮಾನಿ ದಲಿತ ಶಕ್ತಿ ಸಂಘಟನೆಯ ಜಿಲ್ಲಾಧ್ಯಕ್ಷ ದೇವೇಂದ್ರ... ಸುದ್ದಿ ಮುಟ್ಟಿಸಿದ್ದರು. ಅವರು ಕೂಡಲೇ ಅಂಬೇಡ್ಕರ್ ಅಭಿ... ನಿಗಮದ ಅಧಿಕಾರಿ ರಮೇಶ್‌ನನ್ನು ಭೇಟಿಯಾಗಿ ಈ... ವಿಚಾರಿಸಿದ್ದರು. ಈ ಕಳ್ಳ ವ್ಯವಹಾರದಲ್ಲಿ ಆ... ಪಾಲುದಾರನಾಗಿದ್ದರಿಂದ ದೇವೇಂದ್ರಪ್ಪ ಕೇಳಿದ ಪ್ರಶ್ನೆ... ತಡಬಡಿಸಿ ಹೋಗಿದ್ದ. ಯಾವಾಗ ದೇವೇಂದ್ರಪ್ಪ ಮ... ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದರೋ ಆಗ ಚಂದ್ರ... ವಂಚಕ ಜಾತಕ ಬಟಾಬಯಲಾಗಿತ್ತು. ಸ್ವತಃ ತಾನೇ ಬೋ... ಜಾತಿಪತ್ರ ಪಡೆದಿರೋದಲ್ಲದೆ ದಲಿತ ಮಹಿಳಾ ಸಂ... ಹೆಸರಲ್ಲಿ ನಕಲಿ ಸದಸ್ಯರನ್ನು ಹುಟ್ಟಾಕಿ ಗೆಬರಿದ್ದಾಳೆ. ... ಈ ಯಾವ ಸಂಘದಲ್ಲೂ ಅಸಲಿ ದಲಿತ ಮಹಿಳೆ... ಹೆಸರು ಮತ್ತು ಫೋಟೋಗಳಿರುವುದಿಲ್ಲ, ಎಲ್ಲವೂ ನಕಲಿ...


ನಿಜ ಹೇಳಬೇಕೆಂದರೆ ಚಂದ್ರಮ್ಮ ಸಂಘ... ನೋಂದಾವಣಾಧಿಕಾರಿ ಕಚೇರಿಗೆ ನೀ... ಫೋಟೋದಲ್ಲಿರುವವರು ಕುರುಬರಹಳ್ಳಿಗೆ ಸೇರಿದವರೇ




2012ರಲ್ಲಿ ಚಂದ್ರಮ್ಮನ ನಕಲಿ ಜಾತಿ ಪತ್ರಕ್ಕೆ ಸಹಿ ಹಾಕಿರುವ ತಹಸೀಲ್ದಾರ್



ಚಿತ್ರದುರ್ಗ ಜಿಲ್ಲಾ ವ್ಯವಸ್ಥಾಪಕ ರಮೇಶ್




... ತಹಸೀಲ್ದಾರ್



ಚಂದ್ರಮ್ಮನ ನಕಲಿ ಜಾತಿ ಪತ್ರ


ಜಮಖಂಡಿ: ದಲಿತ ಬಾಲಕನ ಪ್ರಾಣಕ್ಕೇ ಎರವಾಯ್ತು ದೇವರ ಪ್ರಸಾದ



ವಿಠ್ಠಲ ನಾಗಪ್ಪ ಬಂಡಿವಡ್ಡರ

ಜಾತಿಯ ಕ್ರೌರ್ಯಕ್ಕೆ ಮತ್ತೊಂದು ಜೀವ ಬಲಿಯಾಗಿದೆ. ಅನ್ಯ ಜಾತಿಯ ಹುಡುಗಿಯನ್ನು ಪ್ರೀತಿಸಿದನೆಂಬ ಕಾರಣಕ್ಕೆ ಗುಬ್ಬಿಯ ದಲಿತ ಯುವಕ ಅಭಿಷೇಕ್‌ನನ್ನು ಅಮಾನವೀಯ ವಾಗಿ ಥಳಿಸಿದ ವಿಕೃತ ಗಾಯವಿನ್ನು ಹಸಿಹಸಿಯಾಗಿರು ವಾಗಲೇ ಜಮಖಂಡಿ ಕ್ಷೇತ್ರದ ಕುಂಬಾರಹಳ್ಳ ಹಳ್ಳಿಯಲ್ಲಿ ಅಯ್ಯಪ್ಪಸ್ವಾಮಿ ಪೂಜೆಯಲ್ಲಿ ಪ್ರಸಾದ ಊಟ ಮಾಡಿದನೆಂಬ ಕಾರಣಕ್ಕೆ 16 ವರ್ಷದ ವಿಠ್ಠಲ ನಾಗಪ್ಪ ಬಂಡಿವಡ್ಡರ ಎಂಬ ದಲಿತ ಬಾಲಕನನ್ನು ಹೊಡೆದು ಸಾಯಿಸಿ ಸುಟ್ಟು ಹಾಕಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಇಲ್ಲಿನ ಡಿಎಸ್‌ಎಸ್ ನಾಯಕರ ತೀವ್ರ ಪ್ರಯತ್ನದಿಂದಾಗಿ ಘಟನೆ ನಡೆದ 20 ದಿನಗಳ ತರುವಾಯ ಈ ಘಟನೆ ಬೆಳಕಿಗೆ ಬಂದಿದೆ. ನಂತರ ಸ್ಥಳೀಯ ಶಾಸಕ ಸಿದ್ದುನ್ಯಾಮಗೌಡರ ಸ್ವಜಾತಿ ಗಾಣಿಗ ಲಿಂಗಾಯತ ಬೆಂಬಲಿಗರು ಜೈಲು ಸೇರಿದ್ದಾರೆ. ಜಮಖಂಡಿ ನಗರದಿಂದ ವಿಜಯಪುರ ರಸ್ತೆಯಲ್ಲಿ 5 ಕಿ.ಮೀ. ದೂರದಲ್ಲಿರುವ ಕುಂಬಾರಹಳ್ಳದಲ್ಲಿ ಗಾಣಿಗ ಸಮುದಾಯವೇ ಪ್ರಬಲವಾದುದು. ನಂತರದ ಸ್ಥಾನ ಕುರುಬರದ್ದು. 35 ಮನೆಗಳಿರುವ ವಡ್ಡರ ಜನಸಂಖ್ಯೆ 300 ಮಾತ್ರ. ಬಹುತೇಕ ಕಲ್ಲು ಒಡೆಯುವ ಕಾಯಕದಲ್ಲಿ ತೊಡಗಿರುವ ಇವರಲ್ಲಿ ಕೆಲವರಿಗೆ ಕೂಲಿ ಕೆಲಸವೇ ದಿಕ್ಕು.

ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವ ಈ ದಲಿತ ಸಮುದಾಯದ ನಾಗಪ್ಪ ಬಂಡಿವಡ್ಡರ ಎಂಬಾತನ ಆವಳಿ ಗಂಡುಮಕ್ಕಳಲ್ಲಿ ಒಬ್ಬನಾದ ವಿಠ್ಠಲ ಬಂಡಿವಡ್ಡರನೇ ಜಾತಿಯ ಕ್ರೌರ್ಯಕ್ಕೆ ಬಲಿಯಾದ ಅಮಾಯಕ. ಈಗಿನ್ನು ಸರಕಾರಿ ಹೈಸ್ಕೂಲ್‌ನಲ್ಲಿ 10ನೇ ತರಗತಿ ಓದುತ್ತಿದ್ದ ಎಳೆಹುಡುಗ ದಲಿತನಾಗಿ ಹುಟ್ಟಿದ ಏಕೈಕ ಕಾರಣಕ್ಕೆ ದಾರುಣವಾಗಿ ಕೊಲೆಯಾಗಬೇಕಾಗಿ ಬಂದಿರೋದು ನಿಜಕ್ಕೂ ಈ ದೇಶದ ನೈತಿಕ ಅಧಃಪತನಕ್ಕೆ ಹಿಡಿದ ಕನ್ನಡಿಯಂತಿದೆ.



ಪರಶುರಾಮ್

ಡಿಸೆಂಬರ್ 31ರಂದು ಊರಿನ ಚಂದ್ರಗಿರಿ ಮಠದ ಹತ್ತಿರ ಅಯ್ಯಪ್ಪ ಸ್ವಾಮಿಯ ಮಹಾಪೂಜೆಯ ಅಂಗವಾಗಿ ಕಿಚ್ಚು ಹಾಯುವ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು, ವಡ್ಡರ ಸಮುದಾಯದ ಪ್ರಕಾಶ ಬಂಡಿವಡ್ಡರ ಹಾಗೂ ಸುರೇಶ ಬಂಡಿವಡ್ಡರ ಎಂಬುವವರೂ ಅಯ್ಯಪ್ಪ ಸ್ವಾಮಿ ಮಾಲೆ ಹಾಕಿಕೊಂಡಿದ್ದರು. ಕಾರ್ಯಕ್ರಮ ನೋಡಿ ಬರುತ್ತೇನೆಂದು ಮನೆಯಲ್ಲಿ ಹೇಳಿ ಅವರ ಜೊತೆಗೆ ಹೋಗಿದ್ದ ವಿಠ್ಠಲ ಅಲ್ಲಿ ಕಸ ತೆಗೆಯುವುದು, ನೆಲಕ್ಕೆ ನೀರು ಹಾಕುವಂತಹ ಕೈಲಾದ ಕೆಲಸ ಮಾಡುತ್ತ ರಾತ್ರಿವರೆಗೂ ಅಲ್ಲಿಯೇ ಕಳೆದಿದ್ದ. ರಾತ್ರಿ 11 ಗಂಟೆಯಾದರೂ ಅಲ್ಲಿನ ಪೂಜೆ ಮುಗಿದಿರಲಿಲ್ಲ, ಅಷ್ಟುಹೊತ್ತಿಗಾಗಲೇ ವಿಠ್ಠಲನಿಗೆ ವಿಪರೀತ ಹೊಟ್ಟೆ ಹಸಿವಾಗಿತ್ತು, ಆಕಸ್ಮಾತ್ತಾಗಿ ಅಲ್ಲಿಯೇ ಹಿಂದೆ ಅಡುಗೆ ಮಾಡುತ್ತಿದ್ದ ಸ್ಥಳಕ್ಕೆ ಹೋದ ವಿಠಲನಿಗೆ ಅಲ್ಲಿ ದಾಸೋಹಕ್ಕೆಂದು ಹುಗ್ಗಿ ಮತ್ತು ಅನ್ನ-ಸಾರು ಮಾಡಿ ಇಟ್ಟಿರುವುದು ಕಣ್ಣಿಗೆ ಬಿದ್ದಿದೆ.

ಪಾಪ ಆ ಹುಡುಗ ಅದೆಷ್ಟು ಹಸಿದಿದ್ದನೋ ಏನೋ? ಅಲ್ಲೇ ಇಟ್ಟಿದ್ದ ಪೇಪರ್ ಪ್ಲೇಟೊಂದರಲ್ಲಿ ಸ್ವಲ್ಪ ಹುಗ್ಗಿ ಹಾಕಿಕೊಂಡು ತಿನ್ನುತ್ತಾ ನಿಂತಿದ್ದ.

ಇದನ್ನು ಗಮನಿಸಿದ ಗಾಣಿಗ ಸಮುದಾಯದ ಸದಾಶಿವ ಕಲ್ಲಪ್ಪ ಸೊನ್ನದ ಎಂಬ ನೀಚನೊಬ್ಬ ಏನೋ ಅನಾಹುತ ವಾಯಿತೆಂಬಂತೆ ಚೀರಾಡುತ್ತ ಓಡಿ ಬಂದಿದ್ದ, ಚೀರಾಟ ಕೇಳಿಸಿಕೊಂಡ ಅದೇ ಜಾತಿಯ ಶಿವಲಿಂಗ ಮಟ್ಟಿ ಮತ್ತು ಕುರುಬರ ಹನುಮಂತ ತೇರದಾಳ ಎಂಬುವವರೂ ಧಾವಿಸಿ ಬಂದು ದಲಿತ ಹುಡುಗ ಅಡುಗೆ ಮುಟ್ಟಿ ಮೈಲಿಗೆ ಮಾಡಿದ್ದಾನೆಂಬ ಕ್ಷುಲ್ಲಕ ಕಾರಣಕ್ಕೆ, ವಿಠ್ಠಲನನ್ನು ಎಳೆದಾಡಿ ಹೊಡೆಯಲಾರಂಭಿಸಿದ್ದರು. ಸದಾಶಿವ ಎಂಬ ದುರುಳನಂತೂ ಸಾಂಬಾರು ಬಿಡುವ ಕಬ್ಬಿಣದ ಸೌಟು ಎತ್ತಿಕೊಂಡು ಬಲವಾಗಿ ವಿಠ್ಠಲನ ಕಣ್ಣಿಗೆ ಬಾರಿಸಿದ್ದೇ ತಡ ಬಾಲಕ ವಿಠ್ಠಲ ನೆಲಕ್ಕುರುಳಿದ್ದಾನೆ. ಆ ಮೂವರ ದಾಳಿಗೆ ತುತ್ತಾಗಿ ಹಸಿದ ಹೊಟ್ಟೆಯ ಆ ಅಮಾಯಕ ಬಾಲಕ ಕ್ಷಣಮಾತ್ರದಲ್ಲಿ ಹೆಣವಾಗಿ ಹೋಗಿದ್ದ.

ಗಾಬರಿಗೊಂಡ ದುರುಳರು ಉಸಿರಾಟ ಚೆಕ್ ಮಾಡಿದಾಗ ವಿಠಲ್‌ನ ಉಸಿರಾಟ ಸ್ತಬ್ಧಗೊಂಡಿತ್ತು, ಕೂಡಲೇ ಹನುಮಂತ ಸೊನ್ನದ ಮತ್ತು ಧರೆಪ್ಪ ಮರನೂರ ಎಂಬ ಮತ್ತಿಬ್ಬರಿಗೆ ಫೋನಾಯಿಸಿ ಮೋಟಾರ್ ಬೈಕ್ ತರಿಸಿಕೊಂಡು ಅದರ ಮಧ್ಯೆ ಹೆಣವನ್ನು ಕೂರಿಸಿಕೊಂಡು ಅದೇ ಊರಿನಲ್ಲಿದ್ದ ರಂಗನಾಥ ಬೊಂಬಲೇಕರ ಎನ್ನುವ ಆರ್‌ಎಮ್‌ಪಿ ಡಾಕ್ಟರ್ ಹತ್ತಿರ ಕರೆದೊಯ್ದಿದ್ದರು. ರಾತ್ರಿ 11.30ರ ಸುಮಾರಿಗೆ ವಿಠ್ಠಲನ ದೇಹ ಪರೀಕ್ಷಿಸಿದ ವೈದ್ಯ ಆತ ಸತ್ತು ಹೋಗಿರೋದನ್ನು ಖಾತ್ರಿಪಡಿಸಿದ್ದ.




ವಿಠ್ಠಲ ನಾಗಪ್ಪ ಬಂಡಿವಡ್ಡರ ತಂದೆತಾಯಿ


ಅಲ್ಲಿಂದ ದೇಹವನ್ನು ಮರಳಿ ತಂದ ಕೊಲೆಗಡುಕರು ಅ... ಖಾಲಿ ಮನೆಯೊಂದರಲ್ಲಿ ಮುಚ್ಚಿಟ್ಟು ಏನೂ ಆ... ಇಲ್ಲವೆನ್ನುವಂತೆ ಮತ್ತೆ ಪೂಜಾ ಸ್ಥಳಕ್ಕೆ ಬಂದಿದ್ದರು. ಅಷ್ಟುಹೊ... ಪೂಜಾ ಕಾರ್ಯಗಳೆಲ್ಲ ಮುಗಿದು ಜನ ಊಟ ಮಾಡುತ್ತಿ... ಹಾಗಾಗಿ ಜನರೆಲ್ಲ ಮನೆಗಳಿಗೆ ಹೋಗುವವರೆಗೂ ... ರಾತ್ರಿ 2 ಗಂಟೆಗೆ ಊರಿನ ಎಲ್ಲ ಕಡೆಯ ಕರೆಂಟ್ ತೆಗೆದಿ... ಆ ಕತ್ತಲೆಯಲ್ಲಿ ವಿಠ್ಠಲನ ಹೆಣವನ್ನು ಬೈಕ್ ಮೇಲೆ ಹೇ... ಊರ ಪಕ್ಕದಲ್ಲಿರುವ ಕೆರೆಯಲ್ಲಿ ಒಗೆಯಬೇಕೆಂದು ಹೋಗಿದ್ದ... ಆದರೆ ಅದು ಹೊಸ ವರ್ಷದ ದಿನವಾದ್ದರಿಂದ ಕೆಲ ಹುಡುಗ... ರಸ್ತೆಯ ಮೇಲೆ ಹೊಸವರ್ಷದ ಶುಭಾಶಯ ಬರೆಯುತ್ತಿರೋ... ಕಂಡು ಹೆಣವನ್ನು ಯಮನಪ್ಪ ಎಂಟೆತ್ತ ಎಂಬುವವರ ಹೊ... ಸಾಗಿಸಿದ್ದರು. ಹೊಲದಲ್ಲಿದ್ದ ಹೊಂಡದಲ್ಲಿ ಹೆಣ ಹಾ... ಕೊಲೆಗಡುಕರು ನೀಟಾಗಿ ಮನೆ ಸೇರಿಕೊಂಡಿದ್ದರು.

ಇತ್ತ ರಾತ್ರಿ ಬಹಳ ಹೊತ್ತಾದರೂ ಮಗ ಮನೆ... ಬರದಿದ್ದರಿಂದ ವಿಠ್ಠಲನ ಮನೆಯಲ್ಲಿ ತಂದೆ ತಾಯಿ ಅವರಿವ... ವಿಚಾರಿಸಿ, ಊಟ ಮಾಡಿ ಅಲ್ಲಿಯೇ ಮಲಗಿರಬೇಕೆಂ... ಸುಮ್ಮನಾಗಿದ್ದರು. ಆದರೆ ಮರುದಿನ ಅಂದರೆ ಜನವರಿ 1 ತಾರೀಖು ಬೆಳಕಾದರೂ ಮಗ ಮನೆಗೆ ಬರದಿದ್ದನ್ನು ಕ... ಗಾಬರಿಗೊಂಡ ಅವರು ಊರ ತುಂಬಾ ಹುಡುಕಿದ್ದಾರೆ. ಮಧ್ಯಾ... 1 ಗಂಟೆ ಸುಮಾರಿಗೆ ಎಂಟೆತ್ತಿನವರ ಜಮೀನಿನ ಹೊಂಡ... ಹುಡುಗನ ಶವ ಬಿದ್ದಿರುವ ಸುದ್ದಿ ಮನೆಯವರಿಗೆ ತಿ... ಅವರು ಕಂಗಾಲಾಗಿ ಹೋಗಿದ್ದರು.


ಅಷ್ಟೊತ್ತಿಗಾಗಲೇ ಆರೋಪಿಗಳನ್ನು ರಕ್ಷಿಸುವ ಯೋ... ಸಿದ್ಧಪಡಿಸಿಕೊಂಡಿದ್ದ ಊರಿನ ಮೇಲ್ಜಾತಿ ಸಮುದಾಯ... ಮುಖಂಡರು "ಕೊಲೆ ಮಾಡಿದವರು ಯಾರೆಂದು ನಿಖರವಾ...



ಸದಾಶಿವ



ಶಿವನಪ್ಪ



ಹನುಮಂತ ಕಾಳಪ್ಪ



ಹನುಮಂತ

ನಕಲಿ ಹೆಸರು ಮತ್ತು ಫೋಟೋಗಳು. ಆದರೆ ಈ ಲ್ಲಿರುವವರೆಲ್ಲ ಕುರುಬರಹಳ್ಳಿಯವರೇ ಎಂದು ದೃಢೀಕರಣ ೀಡಿದವನು ಮಾತ್ರ ಹುಲ್ಲೂರು ಗ್ರಾಮ ಪಂಚಾಯ್ತಿ ! ಈತನೂ ಚಂದ್ರಮ್ಮನ ಕುಟುಂಬದ ಪಾಲುದಾರನೆ. ಟ್ಟಿಯಲ್ಲಿರುವ ಸದಸ್ಯರ ಹೆಸರಿನ ಮುಂದೆ ಬಿಪಿಎಲ್ ಮತ್ತದರ ಸಂಖ್ಯೆಯನ್ನೂ ನಮೂದಿಸಲಾಗಿದೆ. ಂದರೆ ಚಂದ್ರಮ್ಮ ಮತ್ತು ನೀಲಮ್ಮ ಎಂಬಿಬ್ಬರ ಕಾರ್ಡ್ 112 ಒಂದೇಆಗಿದೆ. ಹಾಗೆ 26 ಸಾವಿರ ರೂ. ಖಾತೆಗೆ ಜಮೆಯಾಗಿದೆ. ತಮಾಷೆಯ ಸಂಗತಿಯೆಂದರೆ ಹಕಾಧಿಕಾರಿಗಳ ಕಚೇರಿಯಲ್ಲಿ ಸಂಘ ನೋಂದಣಿಯಾಗುವ ೇ ಸಿಂಡಿಕೇಟ್ ಬ್ಯಾಂಕಲ್ಲಿ ಸದಸ್ಯರ ಹೆಸರಲ್ಲಿ ಖಾತೆ ದಾಗಿದೆ. ಸಂಘ ಹುಟ್ಟುವುದಕ್ಕೆ ಮೊದಲೇ ಸಂಘದ ಆನ್ನೋ ಹೆಸರಲ್ಲಿ ಸಾಮೂಹಿಕ ಖಾತೆ ತೆರೆಯುತ್ತಾರೆಂದರೆ ಾಲ ಅದಿನ್ನೆಂತ ಬಲವಾದ್ದಿರಬೇಡ. ನಿಗಮ ಮಂಡಳಿಯ ರಿಗಳು, ಬ್ಯಾಂಕ್ ಅಧಿಕಾರಿ, ತಹಶೀಲ್ದಾರ್, ಗಳಂತಾ ಆಯಕಟ್ಟಿನ ಅಧಿಕಾರಿಗಳು ಸೇರಿಯೇ ಈ ್ಮನ ಮೂಲಕ ವ್ಯವಸ್ಥಿತವಾದ ದರೋಡೆಗಿಳಿದಿರುವುದರಲ್ಲಿ ಾನವಿಲ್ಲ.

ಂದ್ರಮ್ಮನ ಪುರಾಣವನ್ನು ನಕಲಿ ಜಾತಿಪತ್ರ ಸಮೇತ ಗಿಟ್ಟು ಏನು ಸ್ವಾಮಿ ಇದೆಲ್ಲಾ ಅಂತಾ ಅಂಬೇಡ್ಕರ್ ವ ಜಿಲ್ಲಾ ವ್ಯವಸ್ಥಾಪಕ ರಮೇಶ್‌ನನ್ನು ಪ್ರಶ್ನಿಸಿದರೆ ಹುಸಿನಗೆ ಏನೋ ವ್ಯತ್ಯಾಸವಾಗಿದೆ, ತಹಸೀಲ್ದಾರರಿಗೆ ಈಕೆಯ ಬಗ್ಗೆ ತನಿಖೆ ನಡೆಸಿ ಅಂತಾ ಮನವಿ ಸಲ್ಲಿಸಲಾಗಿದೆ ಪ್ಪೆ ಸಾರಿಸುತ್ತಾನೆಯೇ ಹೊರತು ಇದುವರೆಗೆ ಸಣ್ಣದೊಂದು ್ಕ ಮುಂದಾಗಿಲ್ಲ.

ಾಗೆ ನೋಡಿದರೆ ಹೊಳಲ್ಕೆರೆ ಶಾಸಕ ಕಂ ಜಿಲ್ಲಾ ಉಸ್ತುವಾರಿ ಸಮಾಜ ಕಲ್ಯಾಣ ಸಚಿವ ಆಂಜನೇಯರ ಕಾಲಬುಡದಲ್ಲೇ ಾಗೆ ಈ ಪರಿ ವಂಚನೆಯಾಗುತ್ತಿದ್ದರೂ ಸಚಿವರು ಟಿಕ್ ಎಂದಿಲ್ಲ. ಇದಕ್ಕೆ ಕಾರಣ ದಗಲ್ಬಾಜಿ ಚಂದ್ರಮ್ಮ, ್ಕರ್ ನಿಗಮದ ವ್ಯವಸ್ಥಾಪಕ ರಮೇಶ್ ಇವರೆಲ್ಲಾ ಮಂತ್ರಿ ೀಯ ದರ್ಬಾರಿನ ಖಾಸಾ ಆಪ್ತೇಷ್ಟರು ಅನ್ನೋ ಮಾತು ವಲ್ಲಿ ದಟ್ಟವಾಗಿಯೇ ಕೇಳಿಬರುತ್ತಿದೆ. ಈಕೆಗೆ 22.12 ರಲ್ಲಿ ಬೋಗಸ್ ನಕಲಿ ಪ್ರಮಾಣಪತ್ರ ಕೊಟ್ಟದ್ದು ಆಗ ರ್ಗದ ತಹಸೀಲ್ದಾರ್ ಆಗಿದ್ದ ಕುಮಾರಸ್ವಾಮಿ. ಇನ್ನು ರುಬರಹಳ್ಳಿಯವಳು, ಕೊರಮ ಜಾತಿಗೆ ಸೇರಿದವಳು ಹಳ್ಳಿ ನಿವಾಸಿ ದೃಢೀಕರಣ ನೀಡಿದ್ದು ಉಲ್ಲೂರು ಪಂಚಾಯ್ತಿ ಪಿ.ಡಿ.ಓ ಬಸವರಾಜ್ ಎಂಬ ಆಸಾಮಿ. ಬಟಾಬಯಲಾಗಿ ಆಕೆಯ ಬೋಗಸ್ ಜಾತಿಪತ್ರದ ನಡೆಸುವಂತೆ ಆದೇಶವಿದ್ದರೂ ಹಾಲಿ ತಹಸೀಲ್ದಾರ್ ರ್ಜುನ ಸಾಹೇಬರು ಅದನ್ನು ತಮ್ಮ ಕುರ್ಚಿಯಡಿ ಂಡು ಹೊಸಕಾಡುತ್ತಿದ್ದಾರೆಯೇ ಹೊರತು ತನಿಖೆಗೆ ಾಗಿಲ್ಲ. ಇದೆಲ್ಲಾ ಗಮನಿಸಿದರೆ ಚಂದ್ರಮ್ಮನಿಗೆ ಭರ್ಜರಿ ಟಿಕಲ್ ಸಪೋರ್ಟ್ ಇರುವುದು ನಿಸ್ಸಂಶಯವಾಗಿ ಾಗುತ್ತೆ. ಆಂಜನೇಯರು ಇತ್ತ ಗಮನಹರಿಸಬೇಕಿದೆ.

■ ಟಿ.ಎನ್. ಷಣ್ಮುಖ

ರೆ ಮಾತ್ರ ಪೊಲೀಸರಿಗೆ ದೂರು ನೀಡಬೇಕು. ಸುಮ್ಮನೇ ನೀಡಿದರೆ ಪೊಲೀಸರು ಮೇಲ್ಜಾತಿಯ ಅಮಾಯಕರಿಗೆಲ್ಲ ೆ ನೀಡುತ್ತಾರೆ. ಹಾಗೇನಾದರೂ ಆದರೆ ದಲಿತ ಯವನ್ನು ಸುಮ್ಮನೆ ಬಿಡೋದಿಲ್ಲ" ಅಂತ ಬೆದರಿಕೆ ು. ಊರ ಮುಖಂಡರ ಧಮಕಿಗೆ ಬೆದರಿದ ವಿಠ್ಠಲನ ದೆತಾಯಿ ಹಿರಿಯರ ಮಾತನ್ನು ಮೀರದೆ ಅಂತ್ಯಸಂಸ್ಕಾರಕ್ಕೆ ಾ. ಅವರನ್ನು ಸಮಾಧಾನಪಡಿಸುವ ಸಲುವಾಗಿ ಅದೇ ಡರು ಹಣ ಸಿಕ್ಕ ಜಮೀನಿನ ಮಾಲೀಕ ಅಮಾಯಕ ್ನ ಎಂಟೆತ್ತುಗೆ ಕೊಲೆ ಆರೋಪ ನಿನ್ನ ಮ್ಯೆಮೇಲೆ ೆ ಅಂತ ಬೆದರಿಸಿ ಅಂತ್ಯಸಂಸ್ಕಾರಕ್ಕೆಂದು 15000 ಮಿ ವಿಠ್ಠಲನ ಹೆತ್ತವರಿಗೆ ಕೊಡಿಸಿದ್ದರು. ಸಂಜೆ 6 ್ಲ ವಿಠ್ಠಲನ ಶವ ಸುಟ್ಟು ಹಾಕಿದ ಮೇಲ್ಜಾತಿ ಮಂದಿ ು ಬಿಟ್ಟಿದ್ದರು. ಆಮೇಲಿ ಅದ್ಯಾವನೋ ತಲೆಕೆಟ್ಟವನೊಬ್ಬ ತ್ತ ಘಳಿಗೆ ಸರಿ ಇಲ್ಲವೆಂದು ಹೆದರಿಸಿದ್ದಕ್ಕೆ ಪಾಪ ್ಲ ಕಳೆದುಕೊಂಡು ದುಃಖಿತರಾಗಿದ್ದ ವಿಠ್ಠಲನ ಹೆತ್ತವರು ೊರೆದು ಸಂಬಂಧಿಕರ ಊರಾದ ಸೋಮದೇವರ ಹೋಗಿ ನೆಲೆಸಿದ್ದರು.

ೇಲ್ಜಾತಿಯವರೇ ಈ ಕೊಲೆಯಲ್ಲಿ ಶಾಮೀಲಾಗಿರೊ ಸುಮಾನವಿದ್ದರೂ ಅವರ ವಿರುದ್ಧ ಬಾಯಿಬಿಡಲಾಗದ ಮುದಾಯದ ಕೆಲವರು ಜಮಖಂಡಿಯ ಡಿಎಸ್ಎಸ್ ಡ ಪರಶುರಾಮ ಕಾಂಬಳೆಗೆ ಅನಾಮಧೇಯ ಪತ್ರ ಸುದ್ದಿ ಮುಟ್ಟಿಸಿದ್ದರು.


ಪತ್ರದ ಬೆನ್ನುಬಿದ್ದ ಕಾಂಬಳೆ, ವಿಠ್ಠಲನ ಕುಟುಂಬದವರನ್ನು ಾಗಿ, ಧೈರ್ಯ ತುಂಬಿ ದೂರು ನೀಡಲು ಪೊಲೀಸ್ ಕರೆತಂದಿದ್ದರು. ವಿಷಯ ಕೇಳಿ ಗೊಂದಲಕ್ಕೊಳಗಾದ ರು ದೂರು ದಾಖಲಿಸಿಕೊಳ್ಳದೇ ನಾಲ್ಕು ದಿನ ಿದ್ದರು. ನಂತರ ಡಿಎಸ್ಎಸ್ ಒತ್ತಡ ಹೆಚ್ಚಾದಾಗ ದಾಖಲಿಸಿಕೊಂಡು ತನಿಖೆ ಆರಂಭಿಸಿದಾಗ ಹತ್ಯೆಗೈದ ೋಚರು ಜೈಲು ಪಾಲಾಗುವಂತಾಗಿದೆ.

ಂತಹ ಜೀವಕ್ಕಂತೂ ಬೆಲೆಯಿಲ್ಲ, ಕಡೇ ಪಕ್ಷ ಸಾವಿಗೂ ್ಲದ ದೇಶದ ವಾಸ್ತವವನ್ನು ಬಚ್ಚಿಟ್ಟು 'ವಿಶ್ವಗುರು'ವಾಗಿಸುವ ನ ಭಂಡರಿಗೆ ವಿಠ್ಠಲನಂತ ಇನ್ನೆಷ್ಟು ಅಮಾಯಕ ು ಬಲಿಯಾಗಬೇಕೋ ಆ ಭಾರತ ಮಾತೆಯೇ ು....

■ ವರದಿಗಾರ

ಬಳ್ಳಾರಿ: ಜನದ್ರೋಹಿ ಡಿಸಿ ದರ್ಬಾರ್‌ನಲ್ಲಿ

ಬಡವರು ಬರ್ಬಾದ್



ಗಣಿ ಲೂಟಿಕೋರರ ದಾಳಿ, ದೌರ್ಜನ್ಯದಿಂದ ನಲುಗಿದ್ದ ಬಳ್ಳಾರಿ ಜಿಲ್ಲೆಯ ಜನರಿಗೆ ಅದ್ಯಾಕೋ ನೆಮ್ಮದಿ ಅನ್ನೋದು ದೂರವೇ ಉಳಿದಂತೆ ಕಾಣುತ್ತೆ. ಯಾಕೆಂದರೆ ಗಣಿಕಳ್ಳರ ಸದ್ದಡಗಿದರೂ ಜಿಲ್ಲೆಯಲ್ಲಿ ತಲೆಯೆತ್ತಿರುವ ಹತ್ತಾರು ದೊಡ್ಡ ಕಾರ್ಖಾನೆಗಳ ಕಾನೂನುಬಾಹಿರ ಕ್ರಮಗಳಿಂದಾಗಿ ಇಲ್ಲಿನ ಜನ ಅನುಭವಿಸುತ್ತಿರುವ ಸಾವುನೋವುಗಳು ಅಷ್ಟಿಷ್ಟಲ್ಲ. ನಿಸರ್ಗಗಳ್ಳರಿಂದ ನಡೆಯುತ್ತಿರೊ ಸಂಪನ್ಮೂಲಗಳ ಹಗಲುದರೋಡೆ ನಿಲ್ಲಿಸಲು ಪ್ರಜ್ಞಾವಂತ ಜನ ಹೋರಾಟಕ್ಕೆ ಮುಂದಾದರೆ, ಅಸಲಿಗೆ ಆ ಕೆಲಸವನ್ನು ಮಾಡಲೋಸುಗ ಲಕ್ಷಲಕ್ಷ ಸಂಬಳ ಎಣಿಸಿಕೊಳ್ಳುವ ಜಿಲ್ಲಾಧಿಕಾರಿ ಕಂಪನಿಗಳ ಪರವಹಿಸಿ ಹೋರಾಟಗಾರರ ಮೇಲೆ ಗೂಂಡಾ ಕೇಸ್ ಹಾಕಿಸುತ್ತಿದ್ದಾನೆ.

ಬಳ್ಳಾರಿಯಲ್ಲಿ ನಡೆಯುತ್ತಿರುವುದೇನು?

ಗಣಿ ಖದೀಮರು ಸಿಕ್ಕಿಬಿದ್ದು ಜೈಲು ಸೇರಿದ ತದನಂತರ ಇಲ್ಲಿನ ಕೈಗಾರಿಕೆಗಳು ಸ್ಥಳೀಯ ಜನರಿಗೆ ಉದ್ಯೋಗದ ಆಸೆ ತೋರಿಸಿ ಬೇಕಾಬಿಟ್ಟ ಭೂಮಿ ನುಂಗಿದ್ದು, ಉದ್ಯೋಗ ಕೊಡದೇ ವಂಚಿಸಿದ್ದು, ಅಲ್ಲಿನ ಕಾರ್ಮಿಕರಿಗೆ ಹಕ್ಕುಗಳನ್ನು ನಿರಾಕರಿಸಿ ಕಿರುಕುಳ ಕೊಟ್ಟಿದ್ದು, ಸುರಕ್ಷಿತ ಕಾನೂನುಗಳನ್ನು ಉಲ್ಲಂಘಿಸಿ ಪರಿಸರವನ್ನು ವಿನಾಶ ಮಾಡಿದ್ದು, ಅಕ್ರಮವಾಗಿ ತುಂಗಭದ್ರ ನದಿಯ ನೀರನ್ನು ನುಂಗಿಹಾಕಿದ್ದು, ಅದಿರು ತೆಗೆಯಲು ಗಣಿಯೊಳಗಿಳಿದು ಸಾವಿರಾರು ಜನ ಅನಾರೋಗ್ಯದಿಂದ ಸತ್ತಿದ್ದು... ಇಂತಹ ನೂರಾರು ಅನಾಚಾರಗಳ ಬಗ್ಗೆ 'ಪತ್ರಿಕೆ' ವಿಸ್ತೃತ ವರದಿ ಮಾಡುತ್ತಲೇ ಬಂದಿದೆ.

ಅದಿರು ಲಾರಿಗಳು ಉಗುಳುವ ಹೊಗೆ, ಧೂಳು ಜನರ ಆರೋಗ್ಯವನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಅಲ್ಲದೇ ಸಂಚಾರದಟ್ಟಣೆಯಿಂದಾಗಿ ಅಪಘಾತಗಳು ಹೆಚ್ಚಾಗುತ್ತಿವೆ. ಕಳೆದ ತಿಂಗಳು ಜನವರಿಯಲ್ಲಿ ಗಣಿಬಾಧಿತ ಸಂಡೂರು ತಾಲ್ಲೂಕು ಒಂದರಲ್ಲೇ ಐದಕ್ಕಿಂತಲೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿವೆ. ನಾಲ್ವರು ಪ್ರಾಣ ಕಳೆದುಕೊಂಡಿದ್ದಾರೆ. ಇಂತಹ ರಸ್ತೆಗಳಲ್ಲಿ ಹೋದರೆ ವಾಪಸ್ಸು ಮನೆ ತಲುಪುವುದೇ ಅನುಮಾನ ಅಂತ ಸ್ವತಃ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್‌ರವರೆ ಮಾಧ್ಯಮದ ಎದುರು ಹೇಳಿದ್ದರು. ಇದರಿಂದ ಆತಂಕಗೊಂಡ ಹಲವು ಸಂಘಟನೆಗಳು ಜನಸಂಗ್ರಾಮ ಪರಿಷತ್‌ನ ನೇತೃತ್ವದಲ್ಲಿ ಅದಿರು ಸಾಗಿಸುವಾಗ ಸಂಭವಿಸುವ ಅವಘಡಗಳನ್ನು ತಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಬಳ್ಳಾರಿ ಜಿಲ್ಲಾಡಳಿತಕ್ಕೆ ಹಲವಾರು ಬಾರಿ ಮನವಿ ಸಲ್ಲಿಸಿವೆ. ಸಾಧ್ಯವಾದಷ್ಟು ರೈಲುಗಳ ಮೂಲಕ ಅದಿರು ಸಾಗಿಸಬೇಕು, ಅದಿರು ಲಾರಿಗಳು ರಾತ್ರಿ ವೇಳೆ ಸಂಚರಿಸಿದರೆ ಸಮಸ್ಯೆ ಕಡಿಮೆಯಾಗುತ್ತದೆ ಎಂಬಂತಹ ಪ್ರಾಕ್ಟಿಕಲ್ ಪರಿಹಾರಗಳನ್ನು ಸಹ ಹೋರಾಟಗಾರರು ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮುಟ್ಟಿಸಿದ್ದಾರೆ.

ಆದರೆ ಇಲ್ಲಿನ ಅತಿದೊಡ್ಡ ಖದೀಮ ಕಾರ್ಖಾನೆ ಜಿಂದಾಲ್‌ನ ಋಣದಲ್ಲಿರುವ ಜಿಲ್ಲಾಡಳಿತವಾಗಲಿ, ಎಸ್ಪಿಯವರಾಗಲಿ ಅದಿರು ಲಾರಿಗಳನ್ನು ಮುಟ್ಟುವ ಗೋಜಿಗೇ ಹೋಗಲಿಲ್ಲ. ಜನವರಿ 24ರಂದು ಸಂಡೂರು ಸಮೀಪ ಜೀಪ್‌ವೊಂದಕ್ಕೆ ಅದಿರು ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ಜನರ ತಾಳ್ಮೆಯನ್ನು ಹಾಳುಗೆಡವಿತ್ತು, ಹಾಗಾಗಿ ಜನಸಂಗ್ರಾಮ ಪರಿಷತ್‌ನ ಕಾರ್ಯಕರ್ತರು ಜಿಲ್ಲಾಡಳಿತ ಈ ಅನ್ಯಾಯ ಸರಿ ಮಾಡುವವರೆಗೂ ವಾಣಿಜ್ಯ ಅದಿರು ಲಾರಿಗಳನ್ನು ಮಾತ್ರ ತಡೆಹಿಡಿಯುವುದಾಗಿ ಸಂಡೂರು ಪೊಲೀಸ್ ಇಲಾಖೆಯ ಮೂಲಕ ಪ್ರತಿಭಟನೆಗೆ ಅನುಮತಿ ಪಡೆದು ಜನವರಿ 31ರಂದು ಅದಿರು ಲಾರಿ ತಡೆಯುವ ಪ್ರತಿಭಟನೆ ಹಮ್ಮಿಕೊಂಡಿತ್ತು.

ಆದರೆ ಪ್ರತಿಭಟನೆಯ ಸ್ಥಳಕ್ಕಾಗಮಿಸಿದ ಸಂಡೂರು ತಹಸೀಲ್ದಾರ್ ಫೆಬ್ರವರಿ 2ರಂದು ಇದೇ ವಿಚಾರಕ್ಕೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ಕರೆದು, ಚರ್ಚಿಸಿ ಸಮಸ್ಯೆಗೆ ಪರಿಹಾರ ರೂಪಿಸೋಣ ಎಂದು ಮನವಿ ಮಾಡಿದ್ದಕ್ಕೆ ತಾತ್ಕಾಲಿಕವಾಗಿ ಪ್ರತಿಭಟನೆ ಕೈಬಿಡಲಾಗಿತ್ತು.

ಸಭೆಯಲ್ಲಿ ಅಹಂಕಾರ ಮೆರೆದ ಡಿಸಿ

ಜನರ ಸಮಸ್ಯೆಗೆ ಪರಿಹಾರ ಸಿಗುವ ಭರವಸೆಯಲ್ಲಿ ಆ ಸಭೆಗೆ ಬಂದಿದ್ದ ಜನಸಂಗ್ರಾಮ ಪರಿಷತ್ ಕಾರ್ಯಕರ್ತರ ಮೇಲೆ ಡಿಸಿ ಅಹಂಕಾರದಿಂದ ವರ್ತಿಸಿದ್ದಾನೆ. ಸಾರ್ವಜನಿಕರ ಸೇವಕನಾದ ಡಿಸಿ ವಿ.ರಾಮ್ ಪ್ರಸಾತ್ ಮನೋಹರ್ ಏಕಪಕ್ಷೀಯವಾಗಿ ಅದಿರು ಲಾರಿ ತಡೆಯಲು ನಿಮಗ್ಯಾರು ಅಧಿಕಾರವನ್ನು ನೀಡಿದ್ದು? ಸಾರ್ವಜನಿಕರು ಅಪಘಾತಗಳಲ್ಲಿ ಸತ್ತರೆ ಅದನ್ನು ಸಂಬಂಧಿಸಿದ ಇಲಾಖೆ ನೋಡಿಕೊಳ್ಳುತ್ತದೆ, ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಲು ನಿಮಗ್ಯಾರು ಅಧಿಕಾರವನ್ನು ನೀಡಿದ್ದು? ನೀವೇನು ಜನಪ್ರತಿನಿಧಿಗಳೆ? ನಿಮ್ಮ ಸಂಘಟನೆ ನೊಂದಣಿಯಾಗಿದೆಯೇ? ನೀವು ಜನರನ್ನು, ರೈತರನ್ನು ದುರ್ಬಳಕೆ ಮಾಡಿಕೊಳ್ಳುತ್ತೀರೆಂದು ಅವಮಾನಿಸಿದ ಆತ ನೀವು ಹಣಕ್ಕಾಗಿಯೆ ಹೋರಾಟಗಳನ್ನು ಮಾಡುತ್ತಿದ್ದೀರೆಂದು ಆಧಾರರಹಿತ ಆರೋಪ ಮಾಡಿದ್ದಾನೆ. ಅಲ್ಲದೆ ನೀವು ಕಾನೂನು ಉಲ್ಲಂಘಿಸಿದ್ದರಿಂದ ನಿಮ್ಮ ಮೇಲೆ ಶಾಂತಿಭಂಗ ಕೇಸು ಹಾಕುತ್ತೇನೆಂದು ಬೆದರಿಕೆಯನ್ನೂ ಹಾಕಿದ್ದಾನೆ. ಜೊತೆಗೆ ಇದೇರೀತಿ ಸಾರ್ವಜನಿಕ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿದರೆ ನಿಮ್ಮನ್ನು ಗೂಂಡಾ ಕಾಯ್ದೆಯಡಿ ಬಂಧಿಸುವುದಾಗಿ ಬೆದರಿಯನ್ನೊಡ್ಡಿದ ಡಿಸಿ ಸಾಹೇಬ ನಾನು ಹಲವಾರು ರಕ್ತಪಾತ ನೋಡಿದ್ದೇನೆ, ನಾನು ಯಾವುದಕ್ಕೂ ಹೆದರುವುದಿಲ್ಲ, ಹೋರಾಟ ಮಾಡಿದರೆ ಪೊಲೀಸರ ಕೆಲಸವನ್ನು ನಾನೇ ಮಾಡಬೇಕಾಗುತ್ತೆ, ನಾನು ಗೂಂಡಾ ಆಗಬೇಕೆಂದು ಮನಸ್ಸು ಮಾಡಿದರೆ 1 ನಿಮಿಷ ಸಾಕು ಎಂದು ಕುಳಿತ ಚೇರನ್ನು ಹಿಂದಕ್ಕೆಳೆದು ಆತ ಅಧಿಕಾರ ದರ್ಪ ಪ್ರದರ್ಶಿಸುತ್ತಿದ್ದರೆ ಮುಂದೆ ಕುಳಿತವರಿಗೆ ಇವನೇನೂ ಜಿಲ್ಲಾಧಿಕಾರಿಯೋ ಅಥವಾ ಥರ್ಡ್‌ಕ್ಲಾಸ್ ರೌಡಿಯೋ ಅನ್ನೋ ಅನುಮಾನಕಾಡುತ್ತಿತ್ತು.

ಸಭೆ ಮುಗಿಯುವ ವೇಳೆಗಾಗಲೇ ಪೊಲೀಸರು ಶಿವಕುಮಾರ್ ಮಾಳಗಿ, ಶ್ರೀಶೈಲ ಆಲದಹಳ್ಳಿ ಮುಂತಾದ ಜನಸಂಗ್ರಾಮ ಪರಿಷತ್‌ನ ಮುಖಂಡರ ಮೇಲೆ ಸಿಆರ್‌ಪಿಸಿ ಸೆಕ್ಷನ್ 107ರ ಅನ್ವಯ ಶಾಂತಿಭಂಗದ ಕೇಸ್ ಹಾಕಿದ್ದಾರೆ. ದುರಹಂಕಾರಿ ಡಿಸಿ ಸಾಹೇಬನ ಆರ್ಭಟಕ್ಕೆ ಕಾರಣ ಏನಿರಬಹುದು ಅಂತ ಕೆದಕೋದೆ ಬೇಡ, ಜನ ಸಂಗ್ರಾಮ ಪರಿಷತ್‌ನ ಹೋರಾಟದಿಂದ ಕಂಗಾಲಾಗಿದ್ದ ಜಿಂದಾಲ್ ಕಂಪನಿಯ ಉಪ್ಪಿನ ಋಣವೇ ಆತನನ್ನು ಆ ಪರಿ ಅರಚಾಡಿಸಿರೋದು ನಿಸ್ಸಂಶಯವಾಗಿ ಸಾಬೀತುಪಡಿಸುತ್ತೆ.

ಡಿಸಿ ವಿರುದ್ಧ ತಿರುಗಿಬಿದ್ದ ಜನ

ಗಣಿ ಮಾಲೀಕರ ಏಜೆಂಟ್‌ನಂತೆ ವರ್ತಿಸುತ್ತಿರೊ ಜಿಲ್ಲಾಧಿಕಾರಿ ವಿರುದ್ಧ ಜನ ತಿರುಗಿಬಿದ್ದಿದ್ದಾರೆ. ಜಿಲ್ಲೆಯ ಮುಖಂಡರಾದ ಆರ್.ಎಚ್.ಬಸವರಾಜು 'ಈ ಕೂಡಲೇ ಹೋರಾಟಗಾರರ ಮೇಲೆ ಹಾಕಿರುವ ಸುಳ್ಳು ಕೇಸ್ ವಾಪಸ್ ಪಡೆದು ಜಿಲ್ಲಾಧಿಕಾರಿ ಹೋರಾಟಗಾರರ ಬಳಿ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದ್ದಾರೆ. ಜಿಲ್ಲಾಧಿಕಾರಿಯಾಗಿ ಜನರ ಕೆಲಸ ಮಾಡದೆ ಜಿಂದಾಲ್ ಕಂಪನಿಯ ವಕ್ತಾರಿಕೆ ನಡೆಸುತ್ತಿರುವ ಡಿಸಿಯ ವಿರುದ್ಧ ವ್ಯಾಪಕ ಟೀಕೆ ಕೇಳಿಬಂದಿದೆ. ಈತನ ವರ್ತನೆಯನ್ನು ಕಂಡ ಹಲವು ಪ್ರಗತಿಪರ ಕಾರ್ಯಕರ್ತರು ರೈತ ಮುಖಂಡ ನಂಜುಂಡಸ್ವಾಮಿಯವರು ಹೇಳಿದ್ದ "ಜಿಲ್ಲಾಧಿಕಾರಿ ಜಿಲ್ಲೆಯ ಮೊದಲ ಕೂಲಿ, ತಹಸೀಲ್ದಾರ್ ಓಡಾಡುತ್ತಿರುವ ಜೀಪು ನಮ್ಮ ಕಂದಾಯದಿಂದ ಬಂದಿದ್ದು, ಪೊಲೀಸ್ ಅಧಿಕಾರಿ ತೊಟ್ಟಿರುವ ಬಟ್ಟೆ ನಾವು ಕೊಟ್ಟಿದ್ದು, ಜನಪ್ರತಿನಿಧಿ ನಮ್ಮ ಮತಗಳಿಂದ ಗೆದ್ದುಹೋದ ನೀನು ನಮ್ಮ ಸೇವಕ, ಅದನ್ನು ಮರೆತು ನೀವು ನಮ್ಮ ವಿರುದ್ಧವೇ ಮಾತಾಡ್ತೀರಾ, ನೀವು ಪ್ರಜಾಪ್ರಭುತ್ವವಾದಿಗಳೋ ಅಥವಾ ಸರ್ವಾಧಿಕಾರಿಗಳೋ"



ಎಂಬಂತಹ ಮಾತುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದಾರೆ. ಜೊತೆಗೆ ಬೇರೆ ತಾಲ್ಲೂಕಿನವರು ಇನ್ನೊಂದು ತಾಲ್ಲೂಕಿನಲ್ಲಿ ಹೋರಾಟ ಮಾಡಬಾರದು ಎಂದು ಫರ್ಮಾನು ಹೊರಡಿಸುವ ಡಿಸಿಯು ಊರು ಕರ್ನಾಟಕದಲ್ಲಿದೆಯಾ ಅಥವಾ ತಮಿಳುನಾಡಿನಲ್ಲಿದೆಯಾ ಮರೆತುಬಿಟ್ಟಿದ್ದಾನಾ? ಅಂತೆಲ್ಲ ಆಕ್ರೋಶ ಕದಲಾಡುತ್ತಿವೆ.

ಈಗಾಗಲೇ ಜನಸಂಗ್ರಾಮ ಪರಿಷತ್‌ನ ವತಿಯಿಂದ ಸಂಡೂರು, ಹೊಸಪೇಟೆಯಲ್ಲಿ ಡಿಸಿಯ ಸರ್ವಾಧಿಕಾರಿತನದ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಎಸ್.ಆರ್.ಹಿರೇಮಠ್ ಮತ್ತು ರಾಘವೇಂದ್ರ ಕುಷ್ಟಗಿಯವರು ಜಿಲ್ಲಾಧಿಕಾರಿಯ ವರ್ತನೆಯನ್ನು ಖಂಡಿಸಿ ಕಂದಾಯ ಸಚಿವರಿಗೆ ಮತ್ತು ಸರ್ಕಾರಕ್ಕೆ ಪತ್ರ ಬರೆದು ಜನವಿರೋಧಿ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಲು ಒತ್ತಾಯಿಸುವುದರ ಜೊತೆಗೆ ಬಳ್ಳಾರಿಯಲ್ಲಿ ಜನಸ್ನೇಹಿ ಆಡಳಿತ ಹೇಗಿರಬೇಕೆಂಬುದರ ಕುರಿತು ಸಂವಾದ ಕಾರ್ಯಕ್ರಮ ಆಯೋಜಿಸಲೂ ಮುಂದಾಗಿದ್ದಾರೆ.

ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ?

ಜಿಲ್ಲೆಯಲ್ಲಿ ಇಷ್ಟೆಲ್ಲಾ ಅವಘಡ ನಡೆಯುತ್ತಿದ್ದರೂ ಸಹ ಉಸ್ತುವಾರಿ ಮಂತ್ರಿಯಾದ ಸಂತೋಷ್ ಲಾಡ್ ಆಗಲಿ, ಸಂಡೂರು ಸಚಿವರಾದ ಇ.ತುಕಾರಾಂ ಆಗಲಿ ಬಾಯಿ ಬಿಚ್ಚಿಲ್ಲ. ಈ ಖದೀಮ ಕಂಪನಿಗಳಿಗೂ ಇವರುಗಳಿಗೂ ಇರುವ ಸಂಬಂಧವೇ ಅಂತಹ ಅನ್ಯೋನ್ಯವಾದುದು. ಈ ಜನದ್ರೋಹಿ ಕಂಪನಿಗಳು ಸಿಎಂ ಕಚೇರಿಯನ್ನೇ ಬಳಸಿಕೊಳ್ಳುತ್ತಾರೆ ಎಂದ ಮೇಲೆ ಜಿಲ್ಲೆಯ ಜನಪ್ರತಿನಿಧಿಗಳು ಯಾವ ಲೆಕ್ಕ ಅಲ್ವಾ? ಇನ್ನು ಇವನ್ನೆಲ್ಲಾ ನಿಭಾಯಿಸಬೇಕಾಗಿದ್ದ ಆರ್‌ಟಿಓ ಇಲಾಖೆಯಂತು ಬಳ್ಳಾರಿಯಲ್ಲಿ ಹೋಲ್‌ಸೇಲಾಗಿ ಜಿಂದಾಲ್ ಕಂಪನಿಗೆ ಬಿಕರಿಯಾಗಿದೆ.

ಒಟ್ಟಾರೆ ಬಳ್ಳಾರಿಯಲ್ಲಿದ್ದ ಪ್ರಜಾಪ್ರಭುತ್ವ ಮಾರಕ ಪರಿಸ್ಥಿತಿ ಸುಧಾರಿಸಿಲ್ಲ. ಬದಲಿಗೆ ಮತ್ತಷ್ಟೂ ಹದಗೆಟ್ಟಿರೋದನ್ನು ಡಿಸಿಯ ದುರ್ವರ್ತನೆ ಸಾಬೀತು ಮಾಡಿದೆ. ಒಂದು ಕಡೆ ಜಿಂದಾಲ್ ಕಂಪನಿ ನೂರಾರು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದ್ದು, ಅವರೆಲ್ಲ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ 300 ದಿನಗಳಿಂದ ನಿರಂತರ ಹೋರಾಟ ಮಾಡುತ್ತಿದ್ದಾರೆ. ಈ ಕಂಪನಿಗಳಿಗಾಗಿ, ರೈಲ್ವೆ ಹಳಿಗಾಗಿ ಜಮೀನು ಕೊಟ್ಟವರಿಗೆ ಇಂದಿಗೂ ಉದ್ಯೋಗ ಸಿಗದೆ ಪರಿತಪಿಸುತ್ತಿದ್ದಾರೆ. ಇದೇ ಜಿಂದಾಲ್‌ನ ಇಸಿಪಿಎಲ್ ಡಾಂಬರು ಕಾರ್ಖಾನೆಯು ಮಾಡಲಿರುವ ಪರಿಸರ ವಿಪತ್ತುಗಳನ್ನು ಗ್ರಹಿಸಿ ಕುಡಿತಿನಿ, ತೋರಣಗಲ್ಲು ಸುತ್ತಲಿನ ಜನ ನಿತ್ಯ ಪ್ರತಿಭಟನೆ ನಡೆಸುತ್ತಿದ್ದಾರೆ. ಮತ್ತೊಂದು ಕಡೆ ತುಂಗಭದ್ರ ನೀರನ್ನು ಕಾನೂನುಬಾಹಿರವಾಗಿ ಇದೇ ಕಂಪನಿಗಳು ಸೂರೆ ಹೊಡೆಯುತ್ತಿವೆ ಮತ್ತು ಇದನ್ನು ಯಾರಾದರೂ ಪ್ರಶ್ನಿಸಿದರೆ ಅವರ ಮೇಲೆ ಕ್ರಿಮಿನಲ್ ಕೇಸುಗಳು ದಾಖಲಾಗುತ್ತವೆ. ಇಲ್ಲಿನ ಬಂಡವಾಳಶಾಹಿ ಮತ್ತು ಅಧಿಕಾರಿವರ್ಗದ ಅಕ್ರಮ ಕೂಟ ಇಡೀ ಬಳ್ಳಾರಿಯನ್ನು ನಿಯಂತ್ರಿಸುತ್ತಾ ಸರ್ವಾಧಿಕಾರಿತನ ಮೆರೆಯುತ್ತಿದೆ.

■ ಮುತ್ತುರಾಜು



ಶೂಟೌಟ್

ಹಿಂದೆ ಬಿಜೆಪಿ ರಕ್ತದಾಹ








ಮೊದಲು ಬುಲೆಟ್ ರವಿ ನಂತರ ಬಿಜೆಪಿ ಕಾರ್ಯಕರ್ತ ವಜ್ರೇಶ ಈಗ ಕಡಬಗೆರೆ ಶ್ರೀನಿವಾಸನ ಸರದಿ.

ಯಲಹಂಕವೆಂಬ ರೌಡಿ ರಾಜ್ಯದಲ್ಲಿ ನಡೆದ ಎರಡು ಅನಾಹುತಕಾರಿ ಹತ್ಯೆಗಳು ಮತ್ತು ಈಗ ನಡೆದ ಶೂಟೌಟ್‌ನ ಹಿಂದಿರುವ ಕಾಣದ ಕೈ ಬೇರೆ ಯಾರೂ ಅಲ್ಲ- ಖುದ್ದು ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ ರೆಡ್ಡಿಯೇ ಎಂಬುದು ಪ್ರತಿಯೊಬ್ಬರಿಗೂ ಗೊತ್ತು. ಪೊಲೀಸರಿಗೂ ಚೆನ್ನಾಗಿ ಗೊತ್ತು, ಸರ್ಕಾರಕ್ಕೂ ಯಾವುದೇ ಅನುಮಾನಗಳಿಲ್ಲ. ಆದರೆ ಬಿಜೆಪಿ ರೌಡಿ ಶಾಸಕನೊಬ್ಬನನ್ನು ಮುಟ್ಟುವ ದಿಟ್ಟತನ ಮಾತ್ರ ಕಾನೂನಿಗಾಗಲಿ ಸರ್ಕಾರಕ್ಕಾಗಲಿ ಇದ್ದಂತಿಲ್ಲ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಭಾಗ್ಯವಂತರ ನಗರಿ ಬೆಂಗಳೂರಿಗೂ ನಟ್ಟನಡುವಿನ ಯಲಹಂಕ ವಿಧಾನಸಭಾ ಕ್ಷೇತ್ರವನ್ನು ಕಳೆದ ಮೂರು ಅವಧಿಯಿಂದ ಆಳುತ್ತಿರುವವನು ವಿಶ್ವನಾಥ್ ರೆಡ್ಡಿ. ತುಮಕೂರು ರಸ್ತೆಯ ನೆಲಮಂಗಲದ ಗಡಿಯಿಂದ ಇತ್ತ ದೇವನಹಳ್ಳಿ ಏರ್‌ಪೋರ್ಟ್ ಮಗ್ಗುಲಿನಿಂದ ಶುರುವಾಗಿ ಬೆಂಗಳೂರಿನ ಹೆಬ್ಬಾಳದ ತನಕ ಅತ್ತ ದೊಡ್ಡಬಳ್ಳಾಪುರದ ರಾಜಾನುಕುಂಟೆಯವರೆಗೂ ಎತ್ತಿಂದೆತ್ತ ಲೆಕ್ಕ ಹಾಕಿದರೂ ಲ್ಯಾಂಡ್ ಮಾಫಿಯಾದ ಅಡ್ಡೆಗಳೇ ಕೇಕೆ ಹಾಕುತ್ತಿವೆ. ಒಂದೆಡೆ ಆಂಧ್ರದ ರಕ್ತಪಿಪಾಸು ರೆಡ್ಡಿಗಳು, ಮತ್ತೊಂದೆಡೆ ಬೆಂಗಳೂರಿನ ತರಹೇವಾರಿ ರೌಡಿ ಪಡೆಗಳು, ಮಗದೊಂದೆಡೆ ಲೋಕಲ್ ಪುಢಾರಿಗಳು, ಇನ್ನೊಂದೆಡೆ ಮುಂಬಯಿಯ ಮಾರ್ವಾಡಿಗಳು; ಹೀಗೆ ದೇಶ-ವಿದೇಶಗಳ ಕಂಪೆನಿ, ಕುಬೇರರು, ತೆಲುಗಿನ ಸಿನಿಮಾನಟರೆಲ್ಲ ಯಲಹಂಕದ ನೆಲಕ್ಕೆ ಕೈಹಾಕಿರುವುದರ ನಡುವೆಯೇ ಒಂದಾದಮೇಲೊಂದರಂತೆ ನಡೆದ ರಾಜಕೀಯ ಹತ್ಯಾಕಾಂಡಗಳು!




2008 ರ ಜುಲೈ 27 ರಂದು ಯಲಹಂಕದ ಕೋಗಿಲು ರಸ್ತೆಯ ಜಿಮ್ಮೊಂದರಲ್ಲಿ ಕಾಂಗ್ರೆಸ್ ನಾಯಕ ಬುಲೆಟ್ ರವಿಯ ಹತ್ಯೆಯಾದಾಗ ಆತನ ಅಣ್ಣ ರಾಜಣ್ಣ ತನ್ನ ತಮ್ಮನನ್ನು ಯಲಹಂಕ ಶಾಸಕ ವಿಶ್ವನಾಥ್‌ನೇ ಸುಪಾರಿ ಕೊಟ್ಟು ಕೊಲ್ಲಿಸಿದ್ದಾನೆಂದು ಪೊಲೀಸರಿಗೆ ಲಿಖಿತ ದೂರು ನೀಡಿದ್ದ. ಶಾಸಕನ ಮೇಲೆ ಎಫ್‌ಐಆರ್ ದಾಖಲಿಸುವ ಧೈರ್ಯ ಪೊಲೀಸರಿಗೆ ಬರಲೇ ಇಲ್ಲ. ಆಗ ಬಿಜೆಪಿ ಸರ್ಕಾರವಿತ್ತು, ಯಲಹಂಕ ಶಾಸಕ ವಿಶ್ವನಾಥ್ ಮುಖ್ಯಮಂತ್ರಿ ಯಡ್ಡಿಯ ಪರಮಾಪ್ತ ಬಂಟ. ಅಂದಮೇಲೆ ಯಾವ ಸರ್ಕಾರ, ಯಾವ ಪೊಲೀಸ್ ಅಧಿಕಾರಿ ತಾನೇ ಅಧಿಕಾರಸ್ಥ ಬಿಜೆಪಿ ಪ್ರಭಾವಿ ಶಾಸಕನೊಬ್ಬನನ್ನು ಕೊಲೆ ಕೇಸಿನಲ್ಲಿ ಬಂಧಿಸಲು ಸಾಧ್ಯ?

ಹುತ್ತವಾದ ಯಲಹಂಕ

ಬುಲೆಟ್ ರವಿಯ ಅಣ್ಣ ಸಿಕ್ಕಸಿಕ್ಕವರಿಗೆಲ್ಲಾ ಮನವಿ ಕೊಟ್ಟ. ಕೋರ್ಟ್ ಮೆಟ್ಟಿಲನ್ನೂ ಏರಿದ. ಶಾಸಕ ವಿಶ್ವನಾಥ್ ಅಟ್ಟಹಾಸದ ಮುಂದೆ ಆತನ ಕೂಗು ಅರಣ್ಯರೋದನವಾಯಿತು. ಇದಾಗಿ ಎರಡು ವರ್ಷಕ್ಕೆ ಸರಿಯಾಗಿ ಯಲಹಂಕದ ಬಿಜೆಪಿ ಕಾರ್ಯಕರ್ತ ವಜ್ರೇಶನ ಕೊಲೆಯಾಯಿತು. ಶಾಸಕ ವಿಶ್ವನಾಥ್ ಅಕ್ರಮಗಳನ್ನು ಒಂದೊಂದಾಗಿ ಕೆದಕುತ್ತಿದ್ದ ವಜ್ರೇಶನ ಹತ್ಯೆಗೆ ಶಾಸಕ ವಿಶ್ವನಾಥ್ ವಿರೋಧದ ಹೊರತಾಗಿ ಬೇರೆ ಯಾವುದೇ ಕಾರಣವಿರಲಿಲ್ಲ. ಆಗಲೂ ವಜ್ರೇಶನ ತಾಯಿ ಮತ್ತು ಅಕ್ಕ ಸೇರಿಕೊಂಡು ಶಾಸಕ ವಿಶ್ವನಾಥನೇ ವಜ್ರೇಶ್ ಹತ್ಯೆಯ ಸೂತ್ರಧಾರ ಎಂದು ಕಂಡಕಂಡವರಿಗ ದೂರಿತ್ತರು. ಆಗಲೂ ಬಿಜೆಪಿ ಸರ್ಕಾರವಿತ್ತು, ಕೆಲಸಕ್ಕೆ ಬಾರದ ಅಬ್ಬೇಪಾರಿಗಳನ್ನು ವಜ್ರೇಶನ ಕೊಲೆ ಕೇಸಿಗೆ ಸಿಲುಕಿಸಿ ಹತ್ಯೆಯ ಅಸಲೀ ಸೂತ್ರಧಾರನಾಗಿದ್ದ ಶಾಸಕ ವಿಶ್ವನಾಥ್ ಬಲಗೈ ಬಂಟ ಬುಲೆಟ್ ಸತೀಶ್ ರೆಡ್ಡಿಯನ್ನು ಬಚಾವು ಮಾಡಲಾಯ್ತು. ಈಗ ಕಾಂಗ್ರೆಸ್ ಸರ್ಕಾರ. ಗುಂಡಿಗೆ ತುತ್ತಾದ ಕಡಬಗೆರೆ ಶ್ರೀನಿವಾಸ್ ಯಲಹಂಕ ಕ್ಷೇತ್ರದ ತಾಕತ್ತುದಾರ ಕಾಂಗ್ರೆಸ್ ಮುಖಂಡ. ಸಾಲದ್ದಕ್ಕೆ ಹಾಲಿ ವ್ಯವಸಾಯೋತ್ಪನ್ನ ಮಾರುಕಟ್ಟೆಯ ಅಧ್ಯಕ್ಷ. ಇಲ್ಲಿಗೆ ಆರು ತಿಂಗಳ ಹಿಂದೆ ತನಗೆ ಶಾಸಕ ವಿಶ್ವನಾಥ್ ಆತನ ಬಲಗೈ ಬಂಟ ಬುಲೆಟ್ ಸತೀಶನಿಂದ ಪ್ರಾಣಾಪಾಯವಿದೆಯೆಂದೂ ಶಾಸಕ ವಿಶ್ವನಾಥ್ ಮತ್ತಾತನ ರೌಡಿ ಪಡೆಯಿಂದ ತನಗೆ ರಕ್ಷಣೆ ನೀಡಬೇಕೆಂದು ಖುದ್ದು ಪೊಲೀಸ್ ಮಹಾ ನಿರ್ದೇಶಕರನ್ನು ಕಂಡು ದೂರು ನೀಡಿದ್ದ.

ಆತನ ಭೀತಿ ಏನಿತ್ತೋ ಅದೇ ಫೆಬ್ರವರಿ ಮೂರರ ಅಪರಾಹ್ನ ಸಂಭವಿಸಿಬಿಟ್ಟಿತ್ತು. ಅಪರಾಹ್ನ ಹನ್ನೆರೂಡುವರೆಯ ಹೊತ್ತಿಗೆ ಯಲಹಂಕದ ಕೋಗಿಲು ಕ್ರಾಸ್‌ನಲ್ಲಿ ಟ್ರಾಫಿಕ್ ಸಂದಣಿಯಲ್ಲಿ ದೇವನಹಳ್ಳಿ ಏರ್‌ಪೋರ್ಟ್ ದಿಕ್ಕಿಗೆ ನಿಧಾನವಾಗಿ ಚಲಿಸುತ್ತಿದ್ದ ಹೊಂಡಾ ಸಿಟಿ ಕಾರು KA-04-M605 ಇನ್ನೇನು ಸಿಗ್ನಲ್‌ನಲ್ಲಿ ನಿಲ್ಲಬೇಕೆನ್ನುವಷ್ಟರಲ್ಲಿ ಅವಘಡ ನಡೆದುಹೋಗಿತ್ತು. ಹಿಂಬಾಲಿಸಿ ಬಂದ ಮೂರು ಬೈಕುಗಳ ಪೈಕಿ ಮುನ್ನುಗ್ಗಿ ಬಂದ ಒಂದು ಪಲ್ಸರ್‌ನ ಹಿಂಬದಿಯ ಸವಾರ ರಾಡ್ ಒಂದನ್ನು ತೆಗೆದದ್ದೇ ಡ್ರೈವರ್ ಸೀಟ್ ಪಕ್ಕದ ಗಾಜನ್ನು ಛಿದ್ರಗೊಳಿಸಿದ. ಮುಂಭಾಗದಲ್ಲಿ ಕೂತಿದ್ದ ಶ್ರೀನಿವಾಸ್‌ಗೆ ಅಪಾಯದ ವಾಸನೆ ಹತ್ತಿದೆ. ಆ ಹೊತ್ತಿಗಾಗಲೇ ಬೈಕ್‌ನ ಹಿಂಬದಿ ಮತ್ತು ಮುಂದೆ ಓಡಿಸುತ್ತಿದ್ದವರಿಬ್ಬರೂ ರಿವಾಲ್ವರ್ ತೆಗೆದದ್ದೇ ಕಾರಿನತ್ತ ಫೈರ್ ಮಾಡಲಾರಂಭಿಸಿದ್ದಾರೆ. ಶ್ರೀನಿವಾಸ್ ಕಾರಿನ ಬಾಗಿಲು ತೆಗೆದದ್ದೇ ರಸ್ತೆಗೆ ಓಡಿದ್ದಾರೆ. ಹಂತಕ ಬೈಕಿನ ಆ ಇಬ್ಬರೂ ಶ್ರೀನಿವಾಸ್‌ರನ್ನು ಹಿಂಬಾಲಿಸುತ್ತಲೇ ಗುಂಡು ಹಾರಿಸಿದ್ದಾರೆ.







ಕಡಬಗೆರೆಯ ಬಂಟ

ಹಾರಿಸಿದ ಗುಂಡುಗಳ ಪೈಕಿ ಒಂದು ಶ್ರೀನಿವಾಸ್‌ರ ಹೊಟ್ಟೆ ಸೀಳಿದರೆ ಮತ್ತೊಂದು ಎಡಭುಜವನ್ನು ಹೊಕ್ಕಿದೆ. ಮಗದೊಂದು ಗುಂಡು ತಲೆಗೆ ಇಟ್ಟ ಗುರಿ ತಪ್ಪಿ ಕೆನ್ನೆ ಸೀಳಿದೆ. ಬಂದಿದ್ದ ಮೂರು ಬೈಕುಗಳ ಹಂತಕ ಪಡೆ ದೇವನಹಳ್ಳಿಯತ್ತ ಪರಾರಿಯಾದರೆ ಶ್ರೀನಿವಾಸ್ ರಕ್ತ ಸುರಿಸುತ್ತಲೇ ತಮ್ಮ ಡ್ರೈವರ್ ಸಮೇತ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ಬಂದು ಬಿದ್ದಿದ್ದಾರೆ. ಪ್ರಜ್ಞೆಯಿನ್ನೂ ಬಂದಿಲ್ಲ, ಬರೋಬ್ಬರಿ ಐದು ಗಂಟೆಗಳ ಕಾಲ ಆಪರೇಷನ್ ಮಾಡಿದ ಕೊಲಂಬಿಯಾದ ವೈದ್ಯರುಗಳು ಮೂರೂ ಗುಂಡುಗಳನ್ನು ಹೊರತೆಗೆದಿದ್ದಾರೆ. ಆದರೆ ಶ್ರೀನಿವಾಸ್ ಕೋಮಾದಿಂದ ಹೊರಬಂದಿಲ್ಲ. ಯಾವ ಗಳಿಗೆಯಲ್ಲಿ ಪ್ರಾಣಪಕ್ಷಿ ಹಾರುತ್ತೋ ಗೊತ್ತಿಲ್ಲ.

ಕೋಗಿಲು ಕ್ರಾಸ್ ಶೂಟೌಟ್‌ನ ಭೀಕರತೆ, ದೇವನಹಳ್ಳಿ ಶೂಟೌಟುಗಳಲ್ಲಿದು ಅತ್ಯಂತ ಭಯಾನಕ ಮತ್ತು ನಿರ್ಭೀತ ಶೂಟೌಟು. ಗುಂಡೇಟು ತಿಂದು ಸಾವುಬದುಕಿನ ನಡುವೆ ಸೆಣಸಾಡುತ್ತಿರುವ ಕಡಬಗೆರೆ ಶ್ರೀನಿವಾಸ್ ಯಶವಂತಪುರದ ಎಪಿಎಂಸಿ ಅಂದರೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷ. ಯಲಹಂಕದ ಜನಪ್ರಿಯ ಕಾಂಗ್ರೆಸ್ ಮುಖಂಡ ಮತ್ತು ಕುಖ್ಯಾತ ಭೂಗತ ಪಾತಕಿ ಕಡಬಗೆರೆ ರಾಮನ ಖಾಸಾ ಅಣ್ಣ. 2013 ರ ಚುನಾವಣೆಯ ತನಕ ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಮತ್ತು ಕಡಬಗೆರೆ ಶ್ರೀನಿವಾಸ್ ಒಂದೇ ಜೀವ ಎರಡು ದೇಹದಂತಿದ್ದವರು. ವಿಶ್ವನಾಥ್ ಬೆಂಬಲದಿಂದಲೇ ಶ್ರೀನಿವಾಸ್ ದಾಸನಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದರು. ತದನಂತರ ಎಪಿಎಂಸಿಗೂ ಅಧ್ಯಕ್ಷರಾದರು. ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಶ್ರೀನಿವಾಸ್ ಮತ್ತು ವಿಶ್ವನಾಥ್ ಸಂಬಂಧ ಹಳಸಿತು. ಏಕೆಂದರೆ ಆಗ ಕಾಂಗ್ರೆಸ್ ಅಲೆಯಿತ್ತು, ಕೆಜೆಪಿ, ಬಿಜೆಪಿ, ಬಿಎಸ್ಸಾರ್ ಕಾಂಗ್ರೆಸ್ ಹೀಗೆ ಮೂರು ಭಾಗವಾಗಿ ಹೋಳಾಗಿದ್ದ ಬಿಜೆಪಿ ಅಧಿಕಾರಕ್ಕೆ ಬರುವುದು ಸಾಧ್ಯವೇ ಇಲ್ಲವೆಂದು ಲೆಕ್ಕ ಹಾಕಿದ ಶ್ರೀನಿವಾಸ್ ಒಳಗಿಂದೊಳಗೇ ಕಾಂಗ್ರೆಸ್ ಅಭ್ಯರ್ಥಿ ಗೋಪಾಲಕೃಷ್ಣನ ಜೊತೆ ಕೈಜೋಡಿಸಿಬಿಟ್ಟರು.

ಇದು ವಿಶ್ವನಾಥ್‌ಗೆ ಗೊತ್ತಾಗಲು ಹೆಚ್ಚು ಹೊತ್ತಾಗಲಿಲ್ಲ. ಏಕೆಂದರೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಗೋಪಾಲಕೃಷ್ಣನೇ ಶಾಸಕ ವಿಶ್ವನಾಥ್‌ನ ಏಜೆಂಟ್ ಮತ್ತು ಬಿಜೆಪಿ ಪರವಾಗಿ ಕಣಕ್ಕಿಳಿದಿದ್ದ ಡಮ್ಮಿ. ಯಾವ ಕಾಂಗ್ರೆಸ್ ಅಭ್ಯರ್ಥಿಯನ್ನು ನಂಬಿ ಶ್ರೀನಿವಾಸ್ ಕಾಂಗ್ರೆಸ್ ಜೊತೆ ಕೈಜೋಡಿಸಿದ್ದರೋ ಅದೇ ಆತನ ಪಾಲಿಗೆ ಮುಳುವಾಗಿಹೋಯಿತು. ಗೆದ್ದ ವಿಶ್ವನಾಥ್ ಕಡಬಗೆರೆ ಪಾಳೇಪಟ್ಟಿನ ಮೇಲೆ ಅದ್ಯಾವ ಪರಿ ಧ್ವಂಸಕ್ಕಿಳಿದನೆಂದರೆ ಕಡಬಗೆರೆ ರಾಮನನ್ನು ಕಂಡಲ್ಲಿ ಗುಂಡು ಹಾರಿಸುತ್ತೇನೆಂದು ನೆಲಮಂಗಲದ ಡಿವೈಎಸ್‌ಪಿ ಮಲ್ಲೇಶ್ ಬೇಟೆಗೆ ನಿಂತರು. ಅಣ್ಣ ಶ್ರೀನಿವಾಸ್‌ನನ್ನು ಎಳೆದೊಯ್ದು ಬಟ್ಟೆ ಬಿಚ್ಚಿಸಿ ಫೋಟೋ ತೆಗೆಯಲಾಯ್ತು. ಸಿಕ್ಕಸಿಕ್ಕವರಿಂದ ದೂರು ಪಡೆದು ಅಣ್ಣ ತಮ್ಮಂದಿರಿಬ್ಬರನ್ನೂ ಜೈಲಿಗೆ ದಬ್ಬಲಾಯ್ತು.

ರೆಡ್ಡಿ ಗ್ಯಾಂಗ್


ಇದು ಶಾಸಕ ವಿಶ್ವನಾಥ್ ಜಿದ್ದಾಜಿದ್ದಿಯ ಒಂದು ವರಸೆಯಷ್ಟೆ. ಮೊದಲು ಪೊಲೀಸರನ್ನು ಛೂಬಿಟ್ಟು ಜೈಲು-ಲಾಕಪ್ಪಿನ ಹಿಂಸೆ, ಅದಕ್ಕೂ ಬಗ್ಗದೆ ಹೋದರೆ ಚೇಲಾಗಳನ್ನು ಬಿಟ್ಟು ಹೊಡೆಸುವುದು. ಹಾಗೂ ಬಗ್ಗಲಿಲ್ಲ ಎಂದರೆ ಡೈರೆಕ್ಟ್ ಮೇಲಕ್ಕೆ. ಇದನ್ನು ಚೆನ್ನಾಗಿಯೇ ಅರಿತಿದ್ದ ಶ್ರೀನಿವಾಸ್ ಸಂಸದ ಮೊಯ್ಲಿಯವರ ಪಾಳಯದಲ್ಲಿ ಓಡಾಡಿಕೊಂಡಿದ್ದ. ಹೇಗೋ ಕಷ್ಟಪಟ್ಟು ಮೂರನೇ ಬಾರಿಗೂ ಎಪಿಎಂಸಿ ಅಧ್ಯಕ್ಷನಾದ. ಮುಂಬರುವ ಚುನಾವಣೆಯಲ್ಲಿ ಶತಗತಾಯ ವಿಶ್ವನಾಥ್‌ನನ್ನು ಮಣ್ಣು ಮುಕ್ಕಿಸಲು ಏನೇನು ಬೇಕೋ ಅದೆಲ್ಲವನ್ನೂ ಮಾಡತೊಡಗಿದ.

ಹೀಗೆ ವಿಶ್ವನಾಥ್ ವಿರುದ್ಧ ತೊಡೆ ತಟ್ಟಿದ ಕಡಬಗೆರೆ ಶ್ರೀನಿವಾಸ್ ಹಾಕಿದ ಸೂಕ್ಷ್ಮ ಮತ್ತು ಮಹತ್ವದ ಪಟ್ಟೆಂದರೆ ಹೇರೋಹಳ್ಳಿಯ ಮಾಜಿ ಕೌನ್ಸಿಲರ್ ಹನುಮಂತೇಗೌಡರನ್ನು ಯಲಹಂಕಕ್ಕೆ ಕರೆತಂದಿದ್ದು. ವಿಶ್ವನಾಥ್ ಆಂಧ್ರಾ ಮೂಲದ ರೆಡ್ಡಿ. ಇಡೀ ಯಲಹಂಕ ಕ್ಷೇತ್ರದಲ್ಲಿ ಹೆಚ್ಚೆಂದರೆ ಐದು ಸಾವಿರ ರೆಡ್ಡಿ ಓಟುಗಳಿರಬಹುದು. ಆದರೆ ಒಕ್ಕಲಿಗ ಮತದಾರರ ಸಂಖ್ಯೆ ಒಂದೂವರೆ ಲಕ್ಷದಷ್ಟು. ರೆಡ್ಡಿ ವಿಶ್ವನಾಥ್ ವಿರುದ್ಧ ಒಕ್ಕಲಿಗರೆಲ್ಲ ಒಟ್ಟಾದರೆಂದರೆ ಬಿಜೆಪಿ ನೆಲಕಚ್ಚಿದಂತೆಯೇ. ಕಡಬಗೆರೆ ಶ್ರೀನಿವಾಸನ ಈ ಲೆಕ್ಕಾಚಾರಕ್ಕೆ ಖುದ್ದು ವಿಶ್ವನಾಥನೇ ಕಂಗಾಲಾದ. ಏಕೆಂದರೆ ವಿಶ್ವನಾಥ್ ಎಂಎಲ್‌ಎಯಾದಾಗಿನಿಂದಲೂ ಯಲಹಂಕದ ಒಕ್ಕಲಿಗರ





ಶೂಟೌಟ್ ನಡೆದ ಕೋಗಿಲು ಕ್ರಾಸ್



ಬುಲೆಟ್ ಸತೀಶ ಜೊತೆ ವಿಶ್ವನಾಥ್

ಂಧ್ರಾ ಮೂಲದ ರೆಡ್ಡಿಗಳ ದೌರ್ಜನ್ಯ ದಬ್ಬಾಳಿಕೆ ಮೀರಿತ್ತು. ವಿಶ್ವನಾಥ್ ಭಾಮೈದ ಮುನಿರೆಡ್ಡಿ, ಮಗ ಸೋಮಶಖರ ರೆಡ್ಡಿ, ನಾಗಶೆಟ್ಟಿ ಹಳ್ಳಿ ರೆಡ್ಡಿ, ವಿಶ್ವನಾಥಪುರದ ಮಂಜುನಾಥ ರೆಡ್ಡಿ ಉರ್ಫ್ ಮಂಜ, ಸಿಂಗನಾಯಕನಹಳ್ಳಿಯ ಕಿರಾತಕರಾದ ...ತ್ತಿ ಮೆಂಬರ್ ಚಂದ್ರಶೇಖರ್ ರೆಡ್ಡಿ ಮತ್ತಾತನ ...ವಾನಂದ ರೆಡ್ಡಿ, ಆಂಧ್ರದ ಪೆನುಕೊಂಡದಿಂದ ದಂಧೆಗೆಂದೇ ವಲಸೆ ಬಂದ ಪೆರಿಟಾಲ ರವಿ ...ಮುದ್ದಲ ಚೆರವು ಸೂರ್ಯ ನಾರಾಯಣ ರೆಡ್ಡಿ ...ಸೂರಿಯ ಭಾಮೈದ ಗೂನ್ ಬಾಬು ಉರ್ಫ್ ...ಪ್ರಸಾದ್ ರೆಡ್ಡಿ. ಹೀಗೆ ವಿಶ್ವನಾಥ್ ಕೃಪಾಪೋಷಿತ ...ಟಾಲಮ್ಮನ ಹಾವಳಿ ವಿರುದ್ಧ ಯಲಹಂಕದ ...ರಲ್ಲಿ ಸಿಟ್ಟು, ಆಕ್ರೋಶ ಹೆಪ್ಪುಗಟ್ಟಿತ್ತು. ಇದನ್ನು ಅಕ್ಷರಶಃ ರಾಜಕೀಯ ತಂತ್ರವನ್ನಾಗಿ ರೂಪಿಸುವಲ್ಲಿ ಶ್ರೀನಿವಾಸ್ ದಿನೇದಿನೇ ಮುನ್ನುಗ್ಗುತ್ತಲೇ ಇದ್ದ.

...ಆಗಿದ್ದರೆ ವಿಶ್ವನಾಥ್‌ಗೆ ಶ್ರೀನಿವಾಸ್ ವಿರುದ್ಧ ...ಹಗೆ ಭುಗಿಲೇಳುತ್ತಿರಲಿಲ್ಲ. ಏಕೆಂದರೆ ಕಡಬಗೆರೆ ...ಕಡು ವಿರೋಧಿ ಮತ್ತು ಜೆಡಿಎಸ್‌ನ ಎಮ್ಮೆಲ್ಸಿ ...ರನಹಳ್ಳಿ ಕೃಷ್ಣಪ್ಪನ ಜೊತೆ ವಿಶ್ವನಾಥ್ ರಾಜಿ ...ಕೊಂಡಿದ್ದ. ಶುರುವಿನಲ್ಲಿ ಅರ್ಕಾವತಿ ಪುನಶ್ಚೇತನದ ...ಅಡಕಮಾರನಹಳ್ಳಿ ಸುತ್ತಮುತ್ತಲ ಏರಿಯಾಗಳಲ್ಲಿ ... ಮಾಡಿದ್ದವರನ್ನೆಲ್ಲ ತೆರವುಗೊಳಿಸುತ್ತೇನೆಂದು



...ಜರ್ ನುಗ್ಗಿಸಿದ್ದ ವಿಶ್ವನಾಥ್. ಕಾಲಕ್ರಮೇಣ ... ಜೊತೆಗೇ ಕೈಜೋಡಿಸಿಬಿಟ್ಟ. ಅದಕ್ಕೆ ಕಾರಣ ... ಮಳೆ ಕೃಷ್ಣಪ್ಪ ಮತ್ತು ವಿಶ್ವನಾಥ್ ಮಧ್ಯೆ ...ಜಿ!

ಸತೀಶನ ಸೆರೆ

...ಕಮಾರನಹಳ್ಳಿ ಕೃಷ್ಣಪ್ಪನ ಪಟಾಲಂ ಹೇಗಿದ್ದರೂ ... ದಾಸನಪುರ ಹೋಬಳಿಯ ಒಕ್ಕಲಿಗರ ಮತ ...ಡುವುದರಿಂದ ತನ್ನ ಒಕ್ಕಲಿಗ ವಿರೋಧಿ ಹಾವಳಿ ...ಹೋಗುತ್ತದೆಯೆಂಬುದು ವಿಶ್ವನಾಥ್ ...ರವಾಗಿತ್ತು, ಆದರೆ ಶ್ರೀನಿವಾಸ್ ವಿಶ್ವನಾಥ್ ... ಪೆಟ್ಟು ನೀಡುವ ಮತ್ತೊಂದು ಸೂಕ್ಷ್ಮಕ್ಕೆ ...ದ್ದ, ಅದು 900 ಕೋಟಿ ರೂಪಾಯಿಗಳ ... ಪುನಶ್ಚೇತನ ಯೋಜನೆಯ ಕರ್ಮಕಾಂಡ. ...ೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ...ಯಾಗಿದ್ದ ಅರ್ಕಾವತಿ ಪುನಶ್ಚೇತನದ ಅಷ್ಟೂ ...ವಿಶ್ವನಾಥ್ ನುಂಗಿಹಾಕಿದ್ದ. ಇದಕ್ಕೆ ಸಂಬಂಧಪಟ್ಟ ...ದೇ ದಾಖಲೆಗಳು ಶ್ರೀನಿವಾಸ್ ಕೈ ಸೇರುತ್ತಿದ್ದಂತೆ ... ಬಂದಿದ್ದು ಬಿಸಿಮುಟ್ಟಿದೆ. ಮೊದಲೇ ಮಾರಪ್ಪನಹಳ್ಳಿ ...ಕೆಯಲ್ಲಿ ವಿಶ್ವನಾಥ್ ಸೆಂಟ್ರಿ ಮೇಲೆ ಜೈಲಿನ ಕತ್ತಿ ...ವಾಗ ಈಗ ಅರ್ಕಾವತಿ ಪುನಶ್ಚೇತನ ಹಗರಣವೂ ...ದರೆ ಅನಾಹುತ ಖಚಿತವೆಂಬ ನಿರ್ಧಾರಕ್ಕೆ ... ಬಂದಿದ್ದಾನೆ. ಅದು ಕೋಗಿಲು ಕ್ರಾಸ್

ಶೂಟೌಟ್‌ಗೆ ಮೂಲವಾಗಿದೆ.

6 ತಿಂಗಳ ಹಿಂದೆಯೇ ಶ್ರೀನಿವಾಸ್ ಶಾಸಕ ವಿಶ್ವನಾಥ್ ಮತ್ತಾತನ ಬಲಗೈ ಬಂಟ ಬುಲೆಟ್ ಸತೀಶನಿಂದ ತನಗೆ ಬೆದರಿಕೆಯಿದೆ ಎಂಬುದು ಫೆಬ್ರವರಿ ಅಪರಾಹ್ನದ ಹೊತ್ತಿಗೆ ಸಾಬೀತಾಗಿಹೋಗಿತ್ತು. ಮೊದಮೊದಲು ಇದು ಪಾಯ್ಸನ್ ರಾಮನಿಂದ ಕೊಲೆಯಾಗಿದ್ದ ಹೋರಾಟಗಾರ ಎ.ಟಿ. ಬಾಬು ಬೆಂಬಲಿಗರಿರಬೇಕೆಂದು ಪೊಲೀಸರು ಲೆಕ್ಕ ಹಾಕಿದ್ದರು. ಇನ್ನೂ ಕೆಲವರು ಹೆಬ್ಬೆಟ್ಟು ಮಂಜನ ಕೃತ್ಯವಿರಬೇಕೆಂದೇ ಭಾವಿಸಿದ್ದರು. ಆದರೆ ಮೂರನೇ ದಿನಕ್ಕೆ ವಿಶ್ವನಾಥ್ ಬಂಟ ಬುಲೆಟ್ ಸತೀಶನದ್ದೇ ಕೃತ್ಯವಿದೆಂಬುದು ಪುರಾವೆಸಹಿತ ಸಾಬೀತಾಗಿತ್ತು. ಯಲಹಂಕದ ಟಾಟಾ ರಮೇಶ್ ಎಂಬ ವಿಶ್ವನಾಥ್ ವಿರೋಧಿಗೆ ಸತೀಶ ಮತ್ತು ಸುನೀಲನ ಬಂಟ ಒಂಟೆ ಫೋನ್ ಮಾಡಿದ್ದೇ 'ನಿನಗೂ ಟೈಂ ಕೂಡಿ ಬಂದೈತೆ. ಸೀನನಿಗಾದ ಗತಿ ಇಷ್ಟರಲ್ಲೇ ನಿನಗೂ ಕಾದಿದೆ' ಎಂದು ಧಮಕಿಯಿಟ್ಟಿದ್ದರು. ಆದರೆ ಟಾಟಾ ರಮೇಶ ತಡಮಾಡಲಿಲ್ಲ, ನೇರವಾಗಿ ಯಲಹಂಕ ಪೊಲೀಸ್ ಠಾಣೆಗೆ ಹೋಗಿ ಎಮ್ಮೆಲ್ಲೇ ಬಂಟ ಸತೀಶ್ ರೆಡ್ಡಿಯ ವಿರುದ್ಧ ದೂರು ದಾಖಲಿಸಿಬಿಟ್ಟ.

ಪೊಲೀಸರಿಗೂ ಇಷ್ಟೇ ಸಾಕಿತ್ತೇನೋ. ಎಮ್ಮೆಲ್ಲೇ ರೈಟ್‌ಹ್ಯಾಂಡ್ ಸತೀಶನನ್ನು ಎತ್ತಾಕಿಕೊಂಡು ಬಂದ ಬಾಯಿಬಿಡಿಸಿದರೆ ಆತ ಹೇಳಿದ್ದು ಸೈಲೆಂಟ್ ಸುನೀಲ ಮತ್ತು ಒಂಟೆಯ ಹೆಸರನ್ನು. ಒಂಟೆ-ಸುನೀಲರ ಬೆನ್ನತ್ತಿದ ಪೊಲೀಸರಿಗೆ ಶ್ರೀಧರ್-ಬಚ್ಚನ್ ಮೇಲೆ ಕೈಯಿಡದೇ ಬೇರೆ ವಿಧಿಯೇ ಇರಲಿಲ್ಲ. ಎಲ್ಲೋ ನಡೆದ ಶೂಟೌಟು ಯಾವ್ಯಾವುದೋ ತಿರುವಿಗೆ ಹೊರಳುತ್ತಿದೆ.

ಜಿದ್ದಾಜಿದ್ದಿಯಿದ್ದದ್ದು ಶ್ರೀನಿವಾಸ್ ಮತ್ತು ಶಾಸಕ ವಿಶ್ವನಾಥ್ ವಿರುದ್ಧವೇ ಹೊರತು ವಿಶ್ವನಾಥ್ ಬಂಟರ ನಡುವೆಯಲ್ಲ, ಕಡಬಗೆರೆ ಶ್ರೀನಿವಾಸ್ ಮತ್ತು ಬುಲೆಟ್ ಸತೀಶನಿಗಾಗಲಿ, ಒಂಟೆ-ಸುನೀಲರ ನಡುವೆಯಾಗಲಿ ಯಾವುದೇ ವೈಮನಸ್ಯ, ವ್ಯವಹಾರ, ವಿವಾದವಿರಲಿಲ್ಲ. ದುಷ್ಮನಿಯಂತೂ ಇಲ್ಲವೇ ಇಲ್ಲ. ಎಮ್ಮೆಲ್ಲೇ ಪರವಾಗಿ ಬಂಟ ಸತೀಶ ತನ್ನ ಹಂತಕ ಪಡೆ ಇಟ್ಟು ಹರಿಸಿದ ರಕ್ತ ಇದೇ ಮೊದಲೇನಲ್ಲ. ಶಾಸಕ ವಿಶ್ವನಾಥ್ ಮರ್ಜಿಯ ಮೇರೆಗೇ ಆತನ ಕೃಪಾಪೋಷಿತ ಹಂತಕ ಪಡೆ ಯಲಹಂಕದಲ್ಲಿ ವಿರೋಧಿಗಳನ್ನು ಬೇಟೆಯಾಡುತ್ತಲೇ ಬಂದದ್ದು ಗುಟ್ಟೇನಲ್ಲ. ಹಾಗಿದ್ದೂ ಸರ್ಕಾರ ಕಿರಾತಕ ಬಿಜೆಪಿ ಶಾಸಕನೊಬ್ಬನ ಮೇಲೆ ಅದೇಕೆ ಎಫ್‌ಐಆರ್ ದಾಖಲಿಸಲು ಹಿಂಜರಿಯುತ್ತಿದೆಯೋ ಅರ್ಥವಾಗುತ್ತಿಲ್ಲ.

ವಿಶ್ವನಾಥ್ ಸುಪಾರಿ ಪಡೆದು ಆತನ ಹಂತಕ ಪಡೆ ಮೊದಲು ಬುಲೆಟ್ ರವಿಯನ್ನು ಮಲಗಿಸಿತು. ನಂತರ ಬಿಜೆಪಿ ಕಾರ್ಯಕರ್ತ ವಜ್ರೇಶನನ್ನು ಕೊಚ್ಚಿ ಹಾಕಿತು. ಈಗ ಕಡಬಗೆರೆ ಶ್ರೀನಿವಾಸನ ಬೇಟೆಗೆ ನಿಂತಿದೆ. ಶ್ರೀನಿವಾಸ್ ಈ ಹಿಂದೆಯೇ ಶಾಸಕ ವಿಶ್ವನಾಥ್ ವಿರುದ್ಧ ದೂರು



ನೀಡಿದ್ದರೂ ಈಗ ಆಸ್ಪತ್ರೆಯಿಂದಲೇ ಶಾಸಕ ವಿಶ್ವನಾಥ್ ಮೇಲೆ ದೂರು ಕೊಟ್ಟರೂ ಪೊಲೀಸರೇಕೆ ಶಾಸಕ ವಿಶ್ವನಾಥ್‌ನನ್ನು ಮುಟ್ಟುತ್ತಿಲ್ಲ?

ಹಂತಕ ಬಿಜೆಪಿ ಶಾಸಕನೊಬ್ಬನನ್ನು ಮುಟ್ಟುವ ಧೈರ್ಯ ಕಾಂಗ್ರೆಸ್ ಸರ್ಕಾರಕ್ಕಿಲ್ಲವೇ? ತನ್ನದೇ ಪಕ್ಷದ ನಾಯಕನೊಬ್ಬನಿಗೆ ಕಾಂಗ್ರೆಸ್ ಸರ್ಕಾರಕ್ಕೆ ನ್ಯಾಯ ಕೊಡುವ ಧೈರ್ಯವಿಲ್ಲವೆಂದರೆ ಯಲಹಂಕದ ಇನ್ನಾವ ಕಾಂಗ್ರೆಸ್ ಕಾರ್ಯಕರ್ತ ತಲೆ ಎತ್ತಿ ನಡೆಯಲು ಸಾಧ್ಯ? ಕಾಂಗ್ರೆಸ್ ಪರವಾಗಿ ಯಲಹಂಕದ ಯಾವ ಕಾಂಗ್ರೆಸ್ ಕಾರ್ಯಕರ್ತ ತಾನೇ ಧೈರ್ಯದಿಂದ ಓಟು ಕೇಳಲು ಸಾಧ್ಯ? ದೇಶದ ಯಾವುದೇ ಕಾನೂನು, ಕೋರ್ಟು, ಪೊಲೀಸು ಯಲಹಂಕದ ಕಟುಕ ಶಾಸಕನಿಗೆ ಅನ್ವಯಿಸುವುದಿಲ್ಲವೆ?

■ ರಾ. ಸೋಮನಾಥ್

ನಾಯಕನ ಮನಸ್ಥಿತಿಗೆ ತಕ್ಕಂತೆ ಆತನ ಬಂಟರ ಪಡೆಯಿರುತ್ತದೆ. ಇಡೀ ಯಲಹಂಕಕ್ಕೆ ಗೊತ್ತಿರುವಂತೆ ಶಾಸಕ ವಿಶ್ವನಾಥ್‌ನ ಎಡಗೈ ಮತ್ತು ಬಲಗೈಯಂತಿರುವುದು ಇಬ್ಬರು ನಟೋರಿಯಸ್‌ಗಳು. ಈ ಪೈಕಿ ಒಬ್ಬ ನಾಗಶೆಟ್ಟಿಹಳ್ಳಿ ಸತೀಶ ಅಲಿಯಾಸ್ ಬುಲೆಟ್ ಸತೀಶನಾದರೆ ಮತ್ತೊಬ್ಬ ಬಾಬು ರಾಜೇಂದ್ರ ಪ್ರಸಾದ್ ಉರ್ಫ್ ಗೂನುಬಾಬು. ಇವರಿಬ್ಬರೇ ಯಲಹಂಕದಲ್ಲಿ ನಡೆದ ಸಾಲುಸಾಲು ಹತ್ಯಾ ಯತ್ನಗಳು, ಲ್ಯಾಂಡ್ ಗ್ರ್ಯಾಬಿಂಗ್, ಕಾಂಗ್ರೆಸ್ ಕಾರ್ಯಕರ್ತರ ಮೇಲಿನ ಗೂಂಡಾಗಿರಿ ಮತ್ತು ವಿಶ್ವನಾಥ್ ವಿರೋಧಿಗಳ ಮೇಲೆ ನಡೆದ ಮಾರಕ ಹಲ್ಲೆಗಳಿಗೆಲ್ಲ ಕಾರಣಕರ್ತರು!

ಬುಲೆಟ್ ಸತೀಶ ಶಾಸಕ ವಿಶ್ವನಾಥ್‌ನ ಚೆಡ್ಡಿದೋಸ್ತ್ ಮತ್ತು ಬೇನಾಮಿ. ಒಂದಾನೊಂದು ಕಾಲಕ್ಕೆ ಒಪ್ಪತ್ತು ಊಟಕ್ಕೂ ಗತಿಯಿಲ್ಲದ ಬುಲೆಟ್ ಸತೀಶ ಇವತ್ತು ಕಮ್ಮಿಯೆಂದರೂ ಐನೂರು ಕೋಟಿಗೆ ತೂಗುತ್ತಾನೆ. ಯಲಹಂಕ ಸುತ್ತಮುತ್ತ ಯಾವುದೇ ಲಿಟಿಗೇಷನ್ ಪ್ರಾಪರ್ಟಿಯಿದ್ದರೂ ಸತೀಶ ಅದಕ್ಕೆ ಕೈ ಹಾಕುತ್ತಾನೆ. ವಿಶ್ವನಾಥ್ ಮೊದಲ ಬಾರಿಗೆ ಶಾಸಕನಾದ ಶುರುವಿನಲ್ಲೇ ಅಳ್ಳಾಳಸಂದ್ರದ ಸೈಟುದಾರನೊಬ್ಬನನ್ನು ಕೊಂದು ಜೈಲುಪಾಲಾದ. ದುಡ್ಡು ಸೇರುತ್ತಿದ್ದಂತೆ ಸುಪಾರಿ ಕೊಟ್ಟು ಕೊಲ್ಲಿಸುವುದು ಈತನ ಚಾಳಿಯಾಯಿತು. ತನ್ನ ರಕ್ತದಾಹಕ್ಕೆ ಪೂರಕವಾಗೇ ಸೈಲೆಂಟ್ ಸುನೀಲನ ಘಾತಕ ಗುರು ಗೆಡ್ಡಾ ನಾಗನನ್ನು ಶ್ರೀರಾಂಪುರದಿಂದ ಯಲಹಂಕಕ್ಕೆ ಕರೆದೊಯ್ದು ಮನೆ ಮಾಡಿಟ್ಟ.



ಇದೇ ಹೊತ್ತಿಗೆ ಸತೀಶನ ಅವಳಿ ರೂಪದಂತೆ ತಲೆ ಎತ್ತಿದವನು ಗೂನುಬಾಬು. ಈತ ಮೂಲತಃ ಆಂಧ್ರದ ಪೆನುಕೊಂಡದವನು. ತೆಲುಗು ದೇಶಂ ಶಾಸಕ ಪೆರಿಟಾಲ ರವಿಯನ್ನೂ ಕೊಲ್ಲಿಸಿದ ಮುದ್ದುಲ ಚೆರವು ಸೂರನಾರಾಯಣ ರೆಡ್ಡಿ ಉರ್ಫ್ ಮುದ್ದುಲಚೆರವು ಸೂರಿಗೆ ಈತ ಬಾಮೈದ. ಪೆರಿಟಾಲ ರವಿಯನ್ನು ಕೊಂದು ಭೂಗತನಾಗಿದ್ದ ಸೂರಿಯನ್ನು ಯಲಹಂಕ ಶಾಸಕ ವಿಶ್ವನಾಥನೇ ಬೆಂಗಳೂರಿಗೆ ಕರೆತಂದು ಅಡಗಿಸಿಟ್ಟಿದ್ದ ಎಂಬುದು ಕೆಲವರ ಆರೋಪ. ಅದಕ್ಕೆ ಮೂಲ ಕಾರಣ ಶಾಸಕ ವಿಶ್ವನಾಥ್‌ನ ಆಂಧ್ರದ ನೆಂಟಸ್ತನ. ಆಂಧ್ರವನ್ನೇ ನಡುಗಿಸಿದ್ದ ಭಯಾನಕ ಹಂತಕ ಸೂರಿಯ ಪತ್ನಿ ಭಾನುಮತಿ ಮತ್ತು ವಿಶ್ವನಾಥ್ ಪತ್ನಿ ವಾಣಿಶ್ರೀ ಇಬ್ಬರೂ ಖಾಸಾ ಅಕ್ಕತಂಗಿಯರು. ತನ್ನ ನಾದಿನಿಯ ಗಂಡ ಮುದ್ದುಲ ಚೆರವು ಸೂರಿಯ ಮೂಲಕವೇ ಯಲಹಂಕಕ್ಕೆ ವಕ್ಕರಿಸಿದವನು ಬಾಬು ರಾಜೇಂದ್ರ ಪ್ರಸಾದ್ ಉರ್ಫ್ ಗೂನುಬಾಬು.

ಗೂನುಬಾಬು ಮತ್ತು ವಿಶ್ವನಾಥ್ ಸೇರಿಕೊಂಡು ಯಲಹಂಕ ಸಮೀಪದ ಜಡ್ಜಸ್ ಕಾಲೋನಿಯಲ್ಲೊಂದು ಬಂಗಲೆ ಬಾಡಿಗೆ ಹಿಡಿದು ಅದರಲ್ಲಿ ಸೂರಿ ಮತ್ತು ಪತ್ನಿ ಭಾನುಮತಿಯನ್ನು ನೆಲೆಗೊಳಿಸುತ್ತಾರೆ. ಗೂನುಬಾಬು ಯಲಹಂಕ ನ್ಯೂಟೌನಿನಲ್ಲೊಂದು ಬಂಗಲೆ ಖರೀದಿಸುವುದಕ್ಕೂ ಶಾಸಕ ವಿಶ್ವನಾಥ್ ಕೈ ಜೋಡಿಸುತ್ತಾನೆ. ಇದೆಲ್ಲದರ ಅನುಕೂಲ ಪಡೆದ ಗೂನುಬಾಬು ಮತ್ತೊಂದು ಅನಾಹುತಕಾರಿ ಕೆಲಸಕ್ಕೆ ಕೈಯಿಡುತ್ತಾನೆ. ಅದು ಸೂರಿಯ ಬಲಗೈ ಬಂಟ ಭಾನು ಅಲಿಯಾಸ್ ಭಾನುಪ್ರಕಾಶನನ್ನು ಹೈದ್ರಾಬಾದಿನಿಂದ ಕರೆತಂದು ಯಲಹಂಕ ಸಮೀಪದ ಅಮೃತಹಳ್ಳಿಯ ಅಪಾರ್ಟ್‌ಮೆಂಟ್ ಒಂದರಲ್ಲಿ ಬಚ್ಚಿಡುವುದು!





ಆದರೆ ಸೂರಿಯ ಬಲಗೈ ಬಂಟ ಭಾನುಪ್ರಕಾಶ್ ತನ್ನ ಧಣಿ ಮದ್ದುಲಚೆರವು ಸೂರಿಯನ್ನೇ ಜೊತೆಗಿದ್ದು ಮುಗಿಸಿಬಿಟ್ಟ. ಪರಿಟಾಲ ರವಿಯ ಹತ್ಯೆಯ ಪಾಪ ಸೂರಿಯನ್ನು ಆತನ ಬಲಗೈ ಬಂಟನ ಮೂಲಕವೇ ತಿಂದು ಮುಗಿಸಿತ್ತು. ಸೂರಿಯ ಹತ್ಯಾ ನಂತರ ಶಾಸಕ ವಿಶ್ವನಾಥ್ ತನ್ನ ವಿಧವಾ ನಾದಿನಿಯ ಪರ ನಿಂತು ಆಕೆಯ ಗಂಡನ ಹತ್ಯೆಯ ರೀವೆಂಜೆಗೆ ಸಾಥ್ ಕೊಟ್ಟ. ಇದಕ್ಕೆ ಕೈ ಜೋಡಿಸಿದ್ದು ಗೂನುಬಾಬು!

ಮದ್ದುಲಚೆರವು ಸೂರಿಯನ್ನು ಕೊಂದು ಭಾನುವನ್ನು ಆಂಧ್ರದ ಕರ್ನೂಲಿನ ಹಳೇ ಪಾತಕಿ ಮುದ್ದುಸೀನಿಯನ್ನು ಛೂಬಿಟ್ಟು ಬರ್ಬರವಾಗಿ ಕೊಲ್ಲಿಸಲಾಯಿತು. ಇನ್ನು ಆಂಧ್ರದಲ್ಲಿದ್ದರೆ ತನಗೆ ಉಳಿಗಾಲವಿಲ್ಲ ಎಂಬುದು ಗೂನುಬಾಬುವಿಗೆ ಖಾತರಿಯಾಗಿತ್ತು. ಹೇಗೂ ಸೂರಿ ಪತ್ನಿಯ ಭಾವನೇ ಯಲಹಂಕದ ಬಿಜೆಪಿ ಶಾಸಕ. ಸೂರಿ ಬದುಕಿದ್ದಾಗಲೇ ಆಂಧ್ರದ ಒಂದು ಹಿಂಡು ರೆಡ್ಡಿಗಳೆಲ್ಲ ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ರಿಯಲ್ ಎಸ್ಟೇಟ್ ದಂಧೆಗೆ ಕೈಯಿಟ್ಟಾಗಿತ್ತು. ಹೀಗೆ ಆಂಧ್ರದಿಂದ ಹರಿದುಬಂದ ರಿಯಲ್ ಎಸ್ಟೇಟ್ ರೆಡ್ಡಿಗಳ ಪೈಕಿ ಅತೀ ಹೆಚ್ಚು ಮೊತ್ತದ ಬಂಡವಾಳ ಹೂಡಿದ್ದು ಆಂಧ್ರದ ಮಾಜಿ ಮುಖ್ಯಮಂತ್ರಿ ಮಗ ಜಗನ್ ಮೋಹನ್ ರೆಡ್ಡಿ!

ಮದ್ದುಲಚೆರವು ಸೂರಿ ಬದುಕಿದ್ದಾಗ ಕೈಯಿಟ್ಟಿದ್ದ ದೇವನಹಳ್ಳಿ ಏರ್‌ಪೋರ್ಟ್ ಸುತ್ತಲ ನೂರಾರು ಎಕರೆ ಸೊತ್ತು, ಆಂಧ್ರದ ರೆಡ್ಡಿಗಳು ಖರೀದಿಸಿದ್ದ ಜಮೀನು ಎಲ್ಲವನ್ನೂ ಸ್ಥಳೀಯವಾಗಿ ನಿಭಾಯಿಸಲು ನಿಂತವನೇ ಗೂನುಬಾಬು ಉರ್ಫ್ ರಾಜೇಂದ್ರ ಪ್ರಸಾದ್ ರೆಡ್ಡಿ. ಶಾಸಕ ವಿಶ್ವನಾಥ್ ಈತನ ಕೈಗೊಂಬೆ. ಪ್ರತಿ ಚುನಾವಣೆ ಬಂತೆಂದರೆ ಗೂನುಬಾಬು ಆಂಧ್ರದ ರೆಡ್ಡಿಗಳಿಂದ ಕೋಟಿ ಕೋಟಿ ಸಂಗ್ರಹಿಸಿ ಶಾಸಕ ವಿಶ್ವನಾಥ್‌ಗೆ ಫಂಡು ಕೊಡಿಸಲಾರಂಭಿಸಿದ. ಗೂನುಬಾಬು ಭೂಕಬಳಿಕೆಗೆ ಶಾಸಕ ವಿಶ್ವನಾಥ್ ಪರವಾಗಿ ಆತನ ಬಲಗೈ ಬಂಟ ಬುಲೆಟ್ ಸತೀಶ ಸಾಥ್ ಕೊಡಲಾರಂಭಿಸಿದ. ಸತೀಶ ಮತ್ತು ಗೂನುಬಾಬು ತಮ್ಮ ಅಗಾಧ ರಿಯಲ್ ಎಸ್ಟೇಟ್ ಸಾಮ್ರಾಜ್ಯದ ರಕ್ಷಣೆಗೆಂದು ಕರೆತಂದದ್ದು ಬೆಂಗಳೂರಿನ ಲೋಕಲ್ ಹಂತಕರಾದ ಸೈಲೆಂಟ್ ಸುನೀಲ ಮತ್ತಾತನ ಬಂಟ ಒಂಟೆಯನ್ನು.

ಬೆಂಗಳೂರಿನ ಶ್ರೀರಾಂಪುರದ ಪಾತಕಿಗಳಾದ ಒಂಟೆ ಮತ್ತು ಸುನೀಲ ದೂರದ ಯಲಹಂಕದ ಐಷಾರಾಮಿ ಫ್ಲಾಟುಗಳಲ್ಲಿ ನೆಲೆಸಲಾರಂಭಿಸಿದ್ದರ ಹಿಂದಿದ್ದದ್ದು ಶಾಸಕ ವಿಶ್ವನಾಥನ ಹಂತಕ ಮನಸ್ಥಿತಿಯೇ. ಎಲ್ಲಿ ಬುಲೆಟ್ ರವಿ ರಾಜಕೀಯವಾಗಿ ಪ್ರಬಲನಾಗುತ್ತಾನೋ ಎಂದು ಸತೀಶನ ಮೂಲಕ ಸುಪಾರಿ ಕೊಟ್ಟು ಕೊಲ್ಲಿಸಿದ್ದು ಇದೇ ಶಾಸಕ ವಿಶ್ವನಾಥ್. ತದನಂತರ ತನ್ನ ಅಕ್ರಮಗಳನ್ನು ಬಯಲಿಗೆಳೆಯುತ್ತಾನೆಂದು ಬಿಜೆಪಿ ಕಾರ್ಯಕರ್ತ ವಜ್ರೇಶನನ್ನೂ ಶಾಸಕ ವಿಶ್ವನಾಥನೇ ಬಂಟ ಸತೀಶನ ಮೂಲಕ ಮುಗಿಸಿದ. ಈ ಎರಡೂ ಹತ್ಯೆಗಳಿಗೆ ಹೇಗೆ ಸತೀಶ ಸೈಲೆಂಟ್ ಸುನೀಲನ ಹಂತಕ ಪಡೆಯನ್ನು ಬಳಸಿಕೊಂಡಿದ್ದನೋ ಅದೇ ರೀತಿ ಈಗ ಕಡಬಗೆರೆ ಶ್ರೀನಿವಾಸ್‌ನನ್ನು ಮುಗಿಸುವುದಕ್ಕೂ ಒಂಟೆ, ಸುನೀಲರನ್ನೇ ಛೂಬಿಟ್ಟ. ದುರಂತವೆಂದರೆ ಈ ಎಲ್ಲಾ ಪ್ರಕರಣಗಳಲ್ಲೂ ಸತೀಶನ ಹೆಸರು ಬರದಂತೆ ವಿಶ್ವನಾಥ್ ನೋಡಿಕೊಂಡಿದ್ದ. ಈಗ ಪಾಪದ ಕೊಡ ತುಂಬಿರಬೇಕು. ಕೋಗಿಲು ಕ್ರಾಸ್ ಶೂಟೌಟಿನಲ್ಲಿ ಸೆರೆಸಿಕ್ಕ ಒಂಟೆ-ಸುನೀಲ ತಮಗೆ ಸುಪಾರಿ ಕೊಟ್ಟಿದ್ದೇ ಶಾಸಕ ವಿಶ್ವನಾಥ್ ಎಂದು ಬಾಯಿಬಿಟ್ಟಿದ್ದಾರಂತೆ. ಉಪ್ಪು ತಿಂದ ವಿಶ್ವನಾಥ್ ನೀರು ಕುಡಿಯಲೇಬೇಕು.




ಶಿವಮೊಗ್ಗ ಸಾಹಿತ್ಯ ಸಮ್ಮೇಳನ

ಡಿ.ಬಿ. ಶಂಕರಪ್ಪನವರು ಶಿವಮೊಗ್ಗ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ನಂತರ ನಡೆದ ಮೊದಲ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಒಂದು ರೀತಿ ಪೂರ್ಣ ಎಡಪಂಥೀಯ ಸಮ್ಮೇಳನವಾಗಿ ಜರುಗಿ ಒಂದು ದಾಖಲೆ ಮಾಡಿದೆ. ದಾಖಲೆ ಏಕೆಂದರೆ ಶಂಕರಪ್ಪನ ಬಲದಲ್ಲಿರುವ ಯಾರೋ ಸಮ್ಮೇಳನ ಉದ್ಘಾಟನೆಗೆ ಎಸ್.ಎಲ್. ಭೈರಪ್ಪನವರನ್ನು ಒಪ್ಪಿಸಿದ್ದರು. ಇದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ತರುಣ ಲೇಖಕರು ತಿರುಗಿಬಿದ್ದರಲ್ಲದೆ ಸಂಸ್ಕೃತಿ ಚಿಂತಕ ಡಾ. ರಾಜೇಂದ್ರ ಚೆನ್ನಿಯವರು ಭೈರಪ್ಪನವರಿಂದ ಉದ್ಘಾಟನೆಯನ್ನು ವಿರೋಧಿಸಿ ಸೂಚನೆಗಳನ್ನು ನೀಡಿ ಪ್ರತಿಭಟನೆಯ ಮುಂಚೂಣಿ ವಹಿಸುವುದಾಗಿ ಘೋಷಿಸಿದರು. ಇನ್ನು ಶಂಕರಪ್ಪನ ಗೆಲುವಿಗೆ ಶ್ರಮಿಸಿದ್ದ ಶ್ರೀಕಂಠ ಕೂಡಿಗೆ ಕೂಡ "ಭೈರಪ್ಪ ಬರುವುದಾದರೆ ನಾನು ಪ್ರತಿಭಟಿಸುತ್ತೇನೆ" ಎಂದು ಹೇಳಿದರು.

ಈ ಎಲ್ಲಾ ಕಾರಣಗಳಿಂದ ಶಿವಮೊಗ್ಗ ಸಾಹಿತ್ಯ ಸಮ್ಮೇಳನ ಕುತೂಹಲಗಳನ್ನು ಮೈಮೇಲೆ ಎಳೆದುಕೊಂಡಿತ್ತು ಎಷ್ಟರಮಟ್ಟಿಗೆ ಎಂದರೆ ಶಂಕರಪ್ಪ ನಿದ್ರೆ ಬಾರದೆ ರಾತ್ರಿಯೆಲ್ಲಾ ಅಳುತ್ತಿದ್ದರಂತೆ. ಏಕೆಂದರೆ ಲಂಬಾಣಿ ಜನಾಂಗದ ವಿದ್ವಾಂಸರಾದ ಡಾ. ಸಣ್ಣರಾಮಣ್ಣನವರನ್ನು ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೆ ಯಾರಿಂದಲೂ ಪ್ರಶಂಸೆ ಬರಲಿಲ್ಲವಂತೆ. ಆ ಜನಾಂಗವೂ ಸಾಹಿತ್ಯ ಸಮ್ಮೇಳನದ ಕಡೆ ಬರಲಿಲ್ಲವಂತೆ. ಜೊತೆಗೆ ಛದ್ಮವೇಶದವರಿಂದ ಬೆದರಿಕೆಯ ಫೋನ್ ಕರೆಗಳು ಬೇರೆ. ಅಂತೂ ಶಂಕರಪ್ಪ ಅನುಭವಿಸಿದ ಯಾತನೆಗಳು ಅವರು ಕಡೆಯ ದಿನ ಬಾಯಿಬಿಟ್ಟಾಗಲೇ ಎಲ್ಲರ ಅರಿವಿಗೆ ಬಂದಿದ್ದು.

ಆದರೆ ಸಾಹಿತ್ಯ ಪರಿಷತ್‌ನ ಸಮಾರಂಭಗಳು ಹೇಗಿರಬೇಕೆಂದು ಅವರು ತಿಳಿದುಕೊಂಡಿಲ್ಲ, ಈ ಬಗ್ಗೆ ತುಂಬಾ ನುರಿತ ಸಾಹಿತ್ಯೋಪಜೀವಿಯಾಗಿದ್ದ ಡಿ. ಮಂಜುನಾಥ್ ಬೇರೆ ಅದೇ ದಿವಸ ಒಕ್ಕಲಿಗರ ಸಂಘದ ಸಭಾಂಗಣದಲ್ಲಿ ಮಂಡ್ಯದ ಕರ್ನಾಟಕ ಸಂಘ ಕೊಡುವ ಪ್ರಶಸ್ತಿಯೊಂದಕ್ಕೆ ಭಾಜನರಾದ 'ದಿವಂಗತ' ದೇಜಗೌ ಮತ್ತು 'ಅಸಂಗತ' ಹಂಪನಾರನ್ನು ಕರೆಸಿ ಸನ್ಮಾನವಿಟ್ಟುಕೊಂಡಿದ್ದರು. ಇದೊಂದು ಕಿಡಿಗೇಡಿತನ. ಕರ್ನಾಟಕದ ಸಾಹಿತ್ಯ ಪರಿಷತ್ ಇತಿಹಾಸದಲ್ಲಿ ಇಂತಹ ಕಿಡಿಗೇಡಿ ಕೆಲಸವನ್ನು ಯಾರೂ ಮಾಡಿರಲಾರ.

ಹತ್ತು ವರ್ಷಗಳ ಕಾಲ ಶಿವಮೊಗ್ಗ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ, ರಾಜ್ಯಮಟ್ಟದ ಜಿಲ್ಲಾ ಮಟ್ಟದ ಸಮ್ಮೇಳನ ಮಾಡಿ, ನೂರಾರು ಸಾಹಿತ್ಯ ಹುಣ್ಣಿಮೆಗಳನ್ನು ಯಶಸ್ವಿಯಾಗಿ ಮಾಡಿದ ಡಿ. ಮಂಜುನಾಥ್ ಸಾಹಿತ್ಯ ಪ್ರತಿಪಾದಿಸುವ ಸನ್ನಡತೆ ರೂಢಿಸಿಕೊಳ್ಳಬೇಕಾಗಿತ್ತು. ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಸೋತವರು ಗೆದ್ದವರು ಮಾಡುವ ಕೆಲಸಗಳಿಗೆ ಬೆನ್ನೆಲುಬಾಗಿ ನಿಲ್ಲುವ ಪರಂಪರೆ ನಮ್ಮದು. ಆದರೆ ಮಂಜುನಾಥ ಪರ್ಯಾಯವಾಗಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಸ್ಥಾಪಿಸಿಕೊಂಡು ಅಧಿಕೃತ ಸಮ್ಮೇಳನಗಳಿಗೆ ಜನಬಾರದಂತೆ ತಡೆಯುವುದು ಮತ್ತು ಜನ ಸೇರಿದ್ದಾರೆಯೇ ಎಂದು ಮಾಹಿತಿ ಸಂಗ್ರಹಿಸುವುದು ಸಣ್ಣತನ.



ಇದು ಬಿಜೆಪಿ ರಾಜಕಾರಣದಂತೆ. ಅವರೂ ಕೂಡ ಯಾವುದೇ ಜಾತ್ಯತೀತ ಸಮಾರಂಭಕ್ಕೆ ಪ್ರತಿಯಾಗಿ ಸಭೆ ನಡೆಸುತ್ತಾರೆ. ಅಷ್ಟಕ್ಕೂ ಸಾಹಿತ್ಯದ ಸಭೆಗಳಲ್ಲಿ ಅವರಿಗ್ಯಾವ ಕೆಲಸಗಳೂ ಇರುವುದಿಲ್ಲ, ಅವರು ಕೇಳಿಸಿಕೊಳ್ಳುವ ಭಾಷಣಗಳೂ ಇರುವುದಿಲ್ಲ, ಆದಕ್ಕೆ ಅವರು ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಆದರೆ ಮಾಜಿ ಅಧ್ಯಕ್ಷನೊಬ್ಬ ಹಾಲಿ ಅಧ್ಯಕ್ಷನ ಸಭೆಗಳ ವಿರುದ್ಧ ಸಭೆ ಏರ್ಪಡಿಸುವುದು ಕೆಟ್ಟ ಸಂಪ್ರದಾಯವನ್ನು ಹುಟ್ಟು ಹಾಕುತ್ತದೆ.

ಮೊದಲೇ ಶಿವಮೊಗ್ಗ ಸೂಕ್ಷ್ಮ ವಿಷಯಗಳಿಗೂ ಪ್ರಕ್ಷುಬ್ಧವಾಗುವ ಹಂತದಲ್ಲಿದೆ. ವಾಸ್ತವವಾಗಿ ಹಾ.ಮಾ. ನಾಯಕರ ಶಿಷ್ಯರುಗಳು ಸಾಹಿತ್ಯ ಪರಿಷತ್ ನಡೆಸಿದ ಗೋಷ್ಠಿಗಳಲ್ಲಿದ್ದರು. ತಮ್ಮ ಗುರುಗಳ ಹೆಸರಿನಲ್ಲಿ ಕೊಡುವ ಪ್ರಶಸ್ತಿ ಸಮಾರಂಭಕ್ಕೆ ಹೋಗಲು ಅವರು ಉತ್ಸುಕರಾಗಿದ್ದರು. ಆದರೆ ಒಂದೇ ಸಮಯದಲ್ಲಿ ನಡೆಯುವ ಸಮಾರಂಭದಿಂದ ಬೇಸರಗೊಂಡಿದ್ದರು.

ಕರ್ನಾಟಕದ ರಾಜಕಾರಣ ಏನೇ ಇರಲಿ, ಆದರೆ ಎಲ್ಲರೂ ಸೇರುವ ವೇದಿಕೆ ಎಂದರೆ ಅದು ಸಾಹಿತ್ಯ ಪರಿಷತ್ತಿನ ಸಮಾರಂಭ. ಆದೊಂದು ಜಾತಿಯ ಅಥವ ಧರ್ಮದ ಸಭೆಯಲ್ಲ.

ಜೊತೆಗೆ ಸರಕಾರದ ಅನುದಾನ ಪಡೆವ ಸಂಸ್ಥೆಯಾದ್ದರಿಂದ ಅಲ್ಲಿ ಪ್ರೊಟೋಕಾಲ್ ಕೂಡ ಕ್ರಮಬದ್ಧವಾಗಿರುತ್ತದೆ. ಆದರೂ ಬಿಜೆಪಿಯ ಯಾವ ನಾಯಕರೂ ಅತ್ತ ಸುಳಿಯಲಿಲ್ಲ. ಇದೊಂದು ಕೆಟ್ಟ ಸಂಪ್ರದಾಯ. ಇದು ಹೀಗೇ ಮುಂದುವರಿದರೆ, ಸರಕಾರದ ಹಂಗಿನಿಂದ ಬಿಡಿಸಿಕೊಂಡು ಸಾಹಿತಿಗಳೇ ತಮ್ಮ ಅಭಿವ್ಯಕ್ತಿ ಸ್ವಾತಂತ್ರ ಕಾಪಾಡಿಕೊಳ್ಳುವ ಸಂಸ್ಥೆಯೊಂದನ್ನು ಸ್ಥಾಪಿಸಿ, ಅಲ್ಲಿಗೆ ಈ ಸಣ್ಣಬುದ್ಧಿಯ ರಾಜಕಾರಣಿಗಳು ಬರದಂತೆ ನೋಡಿಕೊಳ್ಳಬೇಕಾಗುತ್ತದೆ. ಸಣ್ಣಬುದ್ಧಿ ಏಕೆಂದರೆ ನಾವು ನೋಡಿದ ಯಾವುದೇ ಸಾಹಿತ್ಯ ಸಭೆಗಳಲ್ಲಿ ಹಾಜರಾದ ರಾಜಕಾರಣಿಗಳು ಏನೋ ತುರ್ತು ಕೆಲಸವಿದೆ ಎಂದು ಪರಾರಿಯಾಗುತ್ತಾರೆ. ಹಿಂಬಾಲಿಸಿ ಹೋಗಿ ನೋಡಿದರೆ, ಯಾವ ಘನ ಕಾರ್ಯವೂ ಇರುವುದಿಲ್ಲ.

ಲಂಕೇಶರ ನಾಯಕತ್ವದಲ್ಲೊಂದು ಜಾಗೃತ ಸಾಹಿತ್ಯ ಸಮಾವೇಶ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ನಡೆದಿತ್ತು. ಅದನ್ನು ನೆನೆಸಿಕೊಂಡವರಿಗೆ ನಿಜವಾದ ಸಾಹಿತ್ಯ ಸಮ್ಮೇಳನ ಹೇಗೆ ಜರುಗಬೇಕೆಂಬುದು ಅರಿವಾಗುತ್ತದೆ. ಆದೊಂದು ಐತಿಹಾಸಿಕ ಘಟನೆ. ಅಡಿಗರ ಉದ್ಘಾಟನೆಯಿಂದ ಆರಂಭಗೊಂಡ ಸಮಾರಂಭದಲ್ಲಿ ಅಂದಿನ ಕನ್ನಡದ ಎಲ್ಲ ಚಿಂತಕರೂ ಭಾಗವಹಿಸಿದ್ದರು. ರಾಜಕಾರಣಿಗಳ ಪೈಕಿ ಕೋಣಂದೂರು ಲಿಂಗಪ್ಪ ಕೆ.ಹೆಚ್. ಶ್ರೀನಿವಾಸ್ ಭಾಗವಹಿಸಿದ್ದರು. ಅವರೂ ಕೂಡ ಶಿವಮೊಗ್ಗ ಜಿಲ್ಲೆಯವರು. ಬರಲಿರುವ ದಿನಗಳಲ್ಲಿ ಈ ಸಾಹಿತ್ಯ ಪರಿಷತ್ ಒಂದು ಜನಾಂಗದ ಅಥವಾ ಒಂದು ಪಾರ್ಟಿಯ ಜನಗಳು ಮಾತ್ರ ಭಾಗವಹಿಸುವಂತಾದರೆ ಪರ್ಯಾಯ ವ್ಯವಸ್ಥೆ ಮಾಡದೆ ಬೇರೆ ದಾರಿಯಿಲ್ಲ, ಆದರೆ ಅಂತಹ ಯಜಮಾನ್ಯ ಹೆಮ್ಮರಗಳು ನಮ್ಮ ನಡುವೆ ಇಲ್ಲದಿರುವುದೊಂದು ವಿಪರ್ಯಾಸ.

ನಮ್ಮ ಶಂಕರಪ್ಪ ನಡೆಸಿದ ಸಮ್ಮೇಳನ ಒಂದಿಷ್ಟು ಹಾಸ್ಯ ಪ್ರಧಾನವಾಗಿಯೇ ನಡೆಯಿತು. ಆರಂಭಕ್ಕೆ ಕನ್ನಡದ ಹೋರಾಟಗಾರನೊಬ್ಬ ಮೈಕ್ ಮುಂದೆ ಬಂದು ಅಬ್ಬರಿಸಿದ ಹೊಡೆತಕ್ಕೆ ಹೊರಗೋಗಿ ಸುಧಾರಿಸಿಕೊಳ್ಳಬೇಕಾಯ್ತು ಏಕೆಂದರೆ ಈಚಿನ ಸೌಂಡ್‌ಬಾಕ್ಸ್‌ಗಳು ಗರ್ಭ ತಲ್ಲಣವುಂಟುಮಾಡುತ್ತವೆ. ಸಭೆ ಸಮಾರಂಭ ಏರ್ಪಡಿಸಿದವರು, ವಹಿಸಬೇಕಾದ ಜವಾಬ್ದಾರಿ ಯಾವುದೆಂದರೆ ಯಾರಾದರೂ ಒಂದು ನಾಲ್ಕು ಮಾತನಾಡಲು ಕೇಳಿದರೆ ಕೊಡಬಾರದು. ನೀನೇ ಒಂದು ಸಭೆ ಏರ್ಪಡಿ ಬರುತ್ತೇವೆ ಎಂದು ಹೇಳಿ ಕಳಿಸಬೇಕು.


ಇನ್ನು ಸಮಾರಂಭದಲ್ಲಿ ಬಿಡುಗಡೆಯಾದ ನಾಲ್ಕು ಪುಸ್ತಕಗಳ ಪೈಕಿ ಕವನ ಸಂಕಲನದ ಲೇಖಕ ಮಾತನಾಡಲು ಬಂದು,

ಅಮ್ಮ ನೋಡೆ ಕಣ್ಬಿಟ್ಟು
ನಿನ್ನಯ ಮಗನಾ ಒಳಗುಟ್ಟು
ಅಮ್ಮಾ ಅಮ್ಮ!

ಎಂದು ಎಮ್ಮೆ ಕರುವಿನಂತೆ ಹಾಡೇಳಿ ಹೋದ. ಇನ್ನ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಈಸೂರಿನ ಡಾ. ರಿಯಾಜ್ ಬಾಷಾ ಝಗಮಗಿಸುವ ಬಣ್ಣದ ಕಾಗದದಲ್ಲಿ ಅದೇನೊ ಗಿಫ್ಟ್‌ಪ್ಯಾಕ್ ಮಾಡಿಕೊಂಡು ಬಂದಿದ್ದರು. ಬಿಚ್ಚಿನೋಡಿದರೆ ಹರಿತವಾದ ಕುಡುಗೋಲು. ಅದರ ಮೇಲೆಯೇ ಕವನ ಬರೆದುಕೊಂಡು ಬಂದಿದ್ದರು. ಓದುವ ಕವನವನ್ನು ಹಾಡಿದ್ದರಿಂದ ಇನ್ನೂ ಭೀಕರವಾಗಿತ್ತು.

ಕಡೀತೇನವ್ವ ಕಡೀತಿನಿ
ಕುಯ್ತೇನವ್ವ ಕುಯ್ತಿನಿ
ಕೊಬ್ಬಿದ ಬದುಗಳ ಸವರುತಿನಿ
ಕುಡುಗೋಲವ್ವ ನಾನು ಕುಡುಗೋಲು.

ಎಂದು ಕುಡುಗೋಲು ಮಾಡುವ ಎಲ್ಲ ಕೆಲಸಗಳ ವಿವರ ಕೊಟ್ಟು ಕಡೆಗೆ ಮನುಷ್ಯನನ್ನು ಕಡಿಯುವುದನ್ನು ಹೇಳಿದರು. ಮೊದಲೇ ಶಿವಮೊಗ್ಗ ಬುರ್ಖಾ-ಕೇಸರಿ ವಿಷಯದಲ್ಲಿ



ಕುದಿಯುತ್ತಿದೆ. ಅಲ್ಲಿಗೆ ಈ ಮನುಷ್ಯ ಕುಡುಗೋಲು ಸಮೇ[...] ಬಂದರೆ ಹೇಗೆ? ಯಾವನಾದರೂ ಮೂರ್ಖ ಪೊಲೀ[...] ಇವರ ಚೀಲ ತಡವಿದರೆ ಗತಿಯೇನು? ಸಾಬಿ ಬೇರೆ. ಇವ[...] ಪ್ರೇಕ್ಷಕರ ಸಾಲಿನಲ್ಲಿ ಚರ್ಚಿತವಾದ ನಗೆ ಸಂಗತಿಗಳು. [...] ಭಾರೀ ಜನ ಕವನಗಳನ್ನು ವಾಚಿಸಿದರು. ಒಂದು [...] ಮನಸ್ಸಿನಲ್ಲುಳಿಯಿತು.

ಕೈಗೆ ಬಳೆಗಳ ಆಸೆ.
ಹಣೆಗೆ ಕುಂಕುಮದಾಸೆ
ಕೆನ್ನೆಗೆ ಹರಿಸಿಣದಾಸೆ.
ಸರಕ್ಕೆ ಕುತ್ತಿಗೆ ಆಸೆ
ಕನ್ನಡಿಗರಿಗೆ ಪರಿಷತ್ತಿನ ಆಸೆ.

ಶಂಕರಪ್ಪನವರ ಸಂಶೋಧನೆಯಲ್ಲಿ ಇಡೀ ಜಿಲ್ಲೆಯಾದ[...] ನೂರಾರು ಕವಿಗಳು ಪತ್ತೆಯಾಗಿದ್ದಾರೆ. ಅವರ ಕವನಗ[...] ನಾವು ಸೈರಣೆಯಿಂದ ಕೇಳಿಸಿಕೊಳ್ಳಬೇಕಷ್ಟೆ.

ಇಷ್ಟಾದರೂ ಸಾಹಿತ್ಯ ಸಮ್ಮೇಳನದ ಎರಡೂ ದಿನ ಶಿವಮೊ[...] ಕುವೆಂಪು ರಂಗಮಂದಿರ ತುಂಬಿತ್ತು ಆದರೂ ಒಂದು ಅನುಮಾ[...] ನಮ್ಮ ಗೋಷ್ಠಿಗಳ ವಿದ್ವಾಂಸರ ವಾಕ್ಯಗಳು ಅವರಿಗೆ ತಲುಪಿ[...] ಎಂಬುದು. ಎದುರಿಗೆ ಕುಳಿತ ಜನರಿಗೆ ತಾನು ಓದಿಕೊಂಡ[...] ಸಂಗ್ರಹವಾಗಿ ತಲುಪಿಸಲಾರದ ವಿದ್ವಾಂಸರು. ಸಮಯ ಮುಗಿ[...] ಚೀಟಿ ಬಂದರೂ ಬಿಡುತ್ತಿರಲಿಲ್ಲ, ವಿದ್ವಾಂಸರು ಒಳಗ[...] ಬಿಟ್ಟುಕೊಂಡು ನೋಡಿಕೊಂಡಿದ್ದಾದರೆ, ನಾವು ಗ್ರಹಿಸಿದ್ದ[...] ಹತ್ತು ನಿಮಿಷದಲ್ಲೂ ಹೇಳಬಹುದು. ಅರ್ಧ ಗ[...] ಎಳೆಯಬಹುದು. ಯಾರೂ ಇರದಿದ್ದರೆ ಇಡೀ ದಿನ ಹ[...] ಮಾಡಬಹುದು. ಈ ಸಾಧನೆ ಇಂದು ಅಗತ್ಯವಾಗಿದೆ. ಜೊತ[...] ನುಡಿದರೆ ಮುತ್ತಿನಹಾರದಂತಿರಬೇಕೆಂಬ ಬಸವಣ್ಣನ ವ[...] ನಮ್ಮನ್ನು ಎಚ್ಚರಿಸುತ್ತಿರಬೇಕು.

ಜೊತೆಗೆ ಸಮಾರಂಭ ನಡೆಸುವವರು ತಮ್ಮ ನಿರೂಪ[...] ಕನ್ನಡ ಉಚ್ಚಾರಣೆ, ಸಮಯೋಚಿತವಾದ ನಡವಳಿಕೆ, ಎಚ್ಚ[...] ಇವೆಲ್ಲವೂ ಸರಿ ಇವೆಯೇ ಎಂದು ನೋಡಿಕೊಳ್ಳಬೇಕು[...] ಏಕೆಂದರೆ ನಮ್ಮ ಭಾಷೆಯನ್ನು ನಾವೇ ಸರಿಯಾಗಿ ಮಾತನಾಡದಿದ್ದ[...] ಇನ್ನಾರು ಮಾತನಾಡಬೇಕು??

■ ವರದಿಗಾ[...]

ಕಂಬಳದ ಮತ್ತು ಮೇಲುಜಾತಿಯ ಪಾಳೆಗಾರಿಕೆ ಮನೋವೃತ್ತಿ

ಈ ವಾರದ ಸಂಚಿಕೆಯಲ್ಲಿ ಇಸ್ಮಾತ್ ಪಜೀರ್ ಇವರು ಬರೆದಿರುವ 'ಕಂಬ್ಳದ ಕೋಣ' ಎಂಬ ಕಥೆ ತುಂಬಾ ಹೃದಯಸ್ಪರ್ಶಿಯಾಗಿದೆ. ನೈಜ ಘಟನೆಗಳಿಂದ ಕೂಡಿರುವ ಕಥೆ ನಮ್ಮ ತುಳುನಾಡಿನ ಮೇಲ್ಜಾತಿ ಜಮೀನುದಾರರ ಪಾಳೆಗಾರಿಕೆ ಮನೋವೃತ್ತಿಯ ಒಳಸುಳಿಗಳನ್ನು ತೆರೆದಿಡುತ್ತದೆ. ಕಂಬಳ ಕೋಣದ ಓಟ ಇದು ಹೆಸರಿಗೆ ಜಾನಪದ ಸಂಸ್ಕೃತಿ, ಆದರೆ ಇದು ನಿಜದಲ್ಲಿ ತುಳುನಾಡಿನ ಗ್ರಾಮೀಣ ಪ್ರದೇಶದಲ್ಲಿ ಫ್ಯೂಡಲ್ ವರ್ಗದವರ ಒಣಪ್ರತಿಷ್ಠೆ ದ್ವೇಷ ಮತ್ಸರ, ಜಾತಿ ಮೇಲಾಟ ಮತ್ತು ಜಿದ್ದಾಜಿದ್ದಿನ ಅಖಾಡವಾಗಿರುವುದನ್ನು ಹಾಗೂ ಕೆಳಜಾತಿಯವರ ಮತ್ತು ಮೂಕ ಸಾಕುಪ್ರಾಣಿಗಳ ಭಾವನೆಗಳಿಗೆ ಯಾವುದೇ ಬೆಲೆ ಇಲ್ಲದಿರುವುದನ್ನು ಇಸ್ಮಾತ್ ಪಜೀರರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಕಾರಣಕ್ಕಾಗಿ ಕೆಲವು ಸ್ಥಾಪಿತ ಹಿತಾಸಕ್ತಿಗಳು ಕೆಳಜಾತಿಯ ಹಿಂದೂಗಳನ್ನು ಮತ್ತು ಅಲ್ಪಸಂಖ್ಯಾತರನ್ನು ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಕೋಮುದ್ವೇಷ ಹರಡಲು ಉಪಯೋಗಿಸುತ್ತಾರೆ ಎಂಬುದನ್ನೂ ಪಜೀರರು ಚೆನ್ನಾಗಿ ಬಿಂಬಿಸಿದ್ದಾರೆ. ಹಿಂದುತ್ವದ ಲ್ಯಾಬ್ ಆಗಿರುವ ಕರಾವಳಿಯಲ್ಲಿ ಹಿಂದಿನ ನಾಲ್ಕೈದು ವರ್ಷಗಳಲ್ಲಿ ನಿಜವಾಗಿ ನಡೆದ ಘಟನೆಗಳನ್ನೇ ಬಳಸಿಕೊಂಡು ಪಜೀರರು ಹೇಳಿದ ಈ ಕಂಬ್ಳದ ಕೋಣ ಕಥೆ ತುಳುವರಿಗೆ ಇಷ್ಟವಾಗುವುದು ಖಚಿತ.

ಯಾವುದೇ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಮಾತ್ರ ಕೆಳಜಾತಿಯವರದಾದರೆ, ಈ ಜಾನಪದ ಕಲಾ ಪ್ರದರ್ಶನದ ವೇಳೆ ವೇದಿಕೆಯಲ್ಲಿ ವಿಜೃಂಭಿಸುವವರು ಮಾತ್ರ ಮೇಲ್ಜಾತಿಯವರು. ಆದಕ್ಕಾಗಿ ನನ್ನ ಹಿರಿಯ ಮಿತ್ರ ಮತ್ತು ತುಳು ಸಂಸ್ಕೃತಿಯ ಸಂಶೋಧಕ ಮೂಡಬಿದ್ರಿಯ ಭಾಸ್ಕರ್ ಬಂಗೇರಾ ಇವರು ಅದನ್ನು 'ಜಾನಪದ' ಅನ್ನುವ ಬದಲು 'ಜಾಣ-ಪದ' ಅನ್ನುತ್ತಾರೆ. ಅಂದರೆ ಕಲೆ ಸಂಸ್ಕೃತಿ ಪರಂಪರೆಯ ಹೆಸರಲ್ಲಿ ಹಿಂದುಳಿದ ಜಾತಿಯವರನ್ನು ದೇವರು-ಭೂತ-ನಾಗನ ಭಕ್ತಿಯೆಂಬ ಮಾನಸಿಕ ಪಂಜರದಲ್ಲಿ ಬಂಧಿಸಿ ಕೊನೆಗೆ ಈ ಹಿಂದುಳಿದ ಜಾತಿಯವರನ್ನು 'ಹಿಂದೆ-ಹಿಂದೆಯೇ ಉಳಿಸುವ' ತಂತ್ರ ಇದಾಗಿರುವುದರಿಂದ ಇದಕ್ಕೆ "ಜಾಣ-ಪದ" (ಮೋಸದ ಶಬ್ದ) ಎನ್ನುವ ಹೆಸರೇ ಸೂಕ್ತ ಎನ್ನುತ್ತಾರೆ ಬಂಗೇರರು.

ಕಂಬಳವು ತುಳುನಾಡಿನ ಜಾನಪದ ಕ್ರೀಡೆ ಅನ್ನುವ ಗೌರವಕ್ಕಿಂತ ಹೆಚ್ಚಾಗಿ ಅದು ಬಂಟ ಮತ್ತು ಇತರ ಪ್ರಬಲ ಜಾತಿಗಳ ಊಳಿಗಮಾನ್ಯ ಸಮಾಜದ ಒಣ ಪ್ರತಿಷ್ಠೆಯ ಪ್ರತಿಬಿಂಬ ಆಗಿದೆ. ತಮಿಳುನಾಡಿನ ಜಲ್ಲಿಕಟ್ಟುವಿನಲ್ಲಿ ಭಾಗವಹಿಸುವವರು ಹೆಚ್ಚಾಗಿ ಕೆಳಜಾತಿಯ ಯುವಕರು ಮಾತ್ರ. ಆದರೆ ನಮ್ಮ ತುಳುನಾಡಿನ ಕಂಬಳದ ಕೋಣಗಳನ್ನು ಸಾಕುವವರು ಇಂದಿಗೂ ಹೆಚ್ಚಾಗಿ ಮೇಲ್ಜಾತಿ ಬಂಟ ಗುತ್ತಿನವರು ಅಥವಾ ಜೈನರು. ಆದರೆ ಅದನ್ನು ಜೀವದ ಹಂಗು ತೊರೆದು ಕೆಸರು ಗದ್ದೆಯಲ್ಲಿ ಓಡಿಸುವವರು ಹೆಚ್ಚಾಗಿ ಹಿಂದುಳಿದ ಜಾತಿಯವರು. ಒಂದು ಕೋಣ ಗೆದ್ದಾಗ ಬಹುಮಾನ ಹೋಗುವುದು ಬಂಟ-ಜೈನ ಗುತ್ತಿನವನಿಗೇ ಹೊರತು ಓಡಿಸಿದವನಿಗೆ ಅಲ್ಲ, ಕಂಬಳ ಆಯೋಜಿಸುವ ಗುತ್ತಿನವರಿಗೆ ಊರವರಿಂದ ದೇಣಿಗೆ ರೂಪದಲ್ಲಿ ತುಂಬಾ ಆದಾಯವೂ ಬರುತ್ತದೆ, ಜತೆಗೆ ತಲೆಗೆ ದೊಡ್ಡ ಮುಂಡಾಸು ಬೇರೆ. ಇದುವೇ ಅವರ ಸುತ್ತ ಒಂದು ಕೃತಕ ಪ್ರಭಾವಳಿ ಸೃಷ್ಟಿಸಿ ಅವರಿಗೆ ಊರಿನಲ್ಲಿ ಗೌರವ ಕಲ್ಪಿಸಿ, ಕೊನೆಗೆ ಈ ಮನೋವೈಜ್ಞಾನಿಕ ಅನುಕೂಲತೆಯೇ (advantage) ಅವರ ರಾಜಕೀಯ ಬಂಡವಾಳವಾಗಿ ಪರಿವರ್ತನೆಯಾಗುತ್ತದೆ. (ಇತ್ತೀಚಿನ ಕೆಲವರ್ಷಗಳಿಂದ ಎಲ್ಲಾ ಕಂಬಳದ ಗದ್ದೆ ಮತ್ತು ಭೂತದ ಗುಡಿಗಳ ಸುತ್ತ ಕೇವಲ ಕೇಸರಿ ಬಣ್ಣದ ಬಂಟಿಂಗ್ಸ್ ಮತ್ತು ಪತಾಕೆಗಳು ಮಾತ್ರ ಕಾಣುತ್ತವೆ. ಇದಕ್ಕೆ ಧಾರ್ಮಿಕ ಕಾರಣದ ಜತೆಗೆ ಸಂಕುಚಿತ ರಾಜಕೀಯ ಉದ್ದೇಶವೂ ಇದೆ).

ಕಂಬಳದ ಓಟದ ಹಿಂದಿನ ರಾತ್ರಿ ಕೊರಗ ಬುಡಕಟ್ಟು ಜನಾಂಗದವರನ್ನು ರಾತ್ರಿ ಇಡೀ ಆ ಕೋಣದ ಓಟದ ಕೆಸರಿನ ಕೆರೆಯನ್ನು ಕಿಡಿಗೇಡಿಗಳಿಂದ ಕಾಯಲು ನೇಮಿಸಲಾಗುತ್ತದೆ. ರಾತ್ರಿ ಇಡೀ ಕೊರಗ ಗಂಡಸರು ಮತ್ತು ಹೆಂಗಸರು ಹಾಡುತ್ತಾ ಕುಣಿಯುತ್ತಾ ಕಾವಲು ಕಾಯಬೇಕು. ಇದಕ್ಕೆ ತುಳುವಿನಲ್ಲಿ "ಪನಿ-ಕುಲ್ಲುನಿ" (ಹನಿಗೆ ಕುಳಿತುಕೊಳ್ಳುವುದು) ಅನ್ನುತ್ತಾರೆ. ನಂತರ ಕಂಬಳದ ದಿನ ಮತ್ತೆ ಇದೇ ಕೊರಗ ಜನಾಂಗದವರು ಕೋಣಗಳ ಓಟ ಶುರುವಾಗುವುದಕ್ಕೆ ಮುಂಚೆ ಕಂಬಳಕೆರೆಯ ಕೆಸರಿನಲ್ಲಿ ಗುಂಪಾಗಿ ಓಡುತ್ತಾ ಹೋಗಬೇಕಾಗುತ್ತದೆ. ಇದಕ್ಕೆ ಧರ್ಮದ ಲೇಪನ ಕೊಡಲಾಗಿದ್ದರೂ ನಿಜದಲ್ಲಿ ಕೊರಗರನ್ನು ಮಂಡಿ ಆಳದ ಕೆಸರಿನಲ್ಲಿ ಗುಂಪಾಗಿ ಓಡಿಸಲು ಕಾರಣ ಹಿಂದಿನ ರಾತ್ರಿ ಯಾರಾದರೂ ಕಿಡಿಗೇಡಿಗಳು ಕಂಬಳದ ಕೆಸರಿನಲ್ಲಿ ಕಲ್ಲು-ಮುಳ್ಳು-ಗಾಜಿನ ಚೂರು ಸೇರಿಸಿಲ್ಲ ಎಂದು ಖಾತರಿ ಪಡಿಸಲೋಸುಗ ಮಾತ್ರ. ಈ ಕೊರಗರ ಪನಿ-ಕುಲ್ಲುನಿ ಮತ್ತು ಕನಿ-ಕಡ್ಪುನಿ ಪದ್ಧತಿ ಸರಕಾರ ನಿಷೇಧಿಸಿರುವ ಕೊರಗರ 'ಅಜಲು' ಪದ್ಧತಿಯಷ್ಟೇ ಹೀನ ಉದ್ದೇಶದ್ದಾಗಿರುವಂತಿದೆ.

ದೇವರಿಗೆ ಹರಕೆ ರೂಪದಲ್ಲಿಯೂ ಕೆಲವು ಗುತ್ತಿನವರು ಕಂಬಳ ಓಟ ಆಯೋಜಿಸುವುದೂ ಇದೆ. ಪ್ರತಿಯೊಂದು ವಿಷಯಕ್ಕೂ ದೇವರ ಭಕ್ತಿ-ಹರಕೆಯನ್ನು ಜೋಡಿಸಿ ಜನರನ್ನು ಮರುಳು ಮಾಡುವುದೆಂದರೆ ಕರಾವಳಿಯ ಮೇಲ್ಜಾತಿಯವರಿಗೆ ತುಂಬಾ ಇಷ್ಟ. ಮೊದಲು ಜನರ ಮನೋರಂಜನೆಗಾಗಿ ಹುಟ್ಟಿದ ಯಕ್ಷಗಾನಕ್ಕೆ ದೇವರನ್ನು ಜೋಡಿಸಿ ದೇವರ ಹರಕೆಯಾಗಿ ಲಕ್ಷಾಂತರ ಖರ್ಚು ಮಾಡಿ ಮೇಲ್ಜಾತಿಯವರು ಹರಕೆ-ಯಕ್ಷಗಾನ ಆಡಿಸತೊಡಗಿದರು. ನಂತರ ಕಂಬಳ ಕೋಣದ ಓಟಕ್ಕೆ ದೇವರ ಹರಕೆಯನ್ನು ಜೋಡಿಸಿದರು.

ಕಾಲ್ಪನಿಕ ರಾಕ್ಷಸರ ಕತೆಗಳುಳ್ಳ ಯಕ್ಷಗಾನ ಹರಕೆ ಹೇಗೆ ದೇವರಿಗೇ ಅವಮಾನವೋ ಹಾಗೆಯೇ ಕಂಬಳದ ಹರಕೆ ಕೊಡುವುದು ಸಹ ದೇವರಿಗೇ ಅವಮಾನ. ಕಾರಣ ಕೋಣ ಓಡಿಸಿದ ಮಾತ್ರಕ್ಕೆ ದೇವರಿಗೆ ಖುಷಿಯಾಗುತ್ತದೆ ಎನ್ನುವ ನಂಬಿಕೆಯೇ ತರ್ಕವಿಹೀನ. ಇದು ಗೋವಿನೊಳಗೆ 33 ಕೋಟಿ ದೇವರಿದ್ದಾರೆ ಎಂದು ನಂಬುವಷ್ಟೇ ಬಾಲಿಶ ನಂಬಿಕೆ. ದ್ರಾವಿಡ ಸಂಸ್ಕೃತಿಯಲ್ಲಿ ಗೋವಿಗೆ (ಆಕಳಿಗೆ) ಮಹತ್ವದ ಸ್ಥಾನ ಎಂದೂ ಇರಲಿಲ್ಲ, ಅದು ಕೇವಲ ವೈಷ್ಣವ ವೈದಿಕರಿಂದಾಗಿ ತುಳುವರ ಮೇಲೆ ಹೇರಲ್ಪಟ್ಟಿದೆ ಹಾಗೂ ಅದು ಈಗ ಅಲ್ಪಸಂಖ್ಯಾತರನ್ನು ಹಣಿಯಲು ರಾಜಕೀಯ ಆಯುಧ ಸಹ ಆಗಿದೆ ಎಂಬುದು ಬೇರೆ ವಿಷಯ.

ಮೂಲತಃ ಎಮ್ಮೆ ಮತ್ತು ಕೋಣ ದ್ರಾವಿಡ ಜನಾಂಗಗಳಿಗೆ ಹೆಚ್ಚು ಪೂಜನೀಯ ಆಗಿದ್ದವು ಎಂದು ಹೆಚ್ಚಿನ ದ್ರಾವಿಡ ಸಂಸ್ಕೃತಿಯ ಸಂಶೋಧಕರ ಅಭಿಪ್ರಾಯ. ಬಲೀಂದ್ರ ಚಕ್ರವರ್ತಿಯೂ ಎಮ್ಮೆ-ಕೋಣಗಳನ್ನು ಗೌರವಿಸುತ್ತಿದ್ದ ಎಂದು ಪುರಾಣದಲ್ಲಿಯೇ ಬರೆಯಲಾಗಿದೆ. ಗೋವನ್ನು ಹೀಗೆ ಹೊಡೆಯುತ್ತಾ ಭೀಕರವಾಗಿ ಓಡಿಸಿದರೆ ಗೋಸ್ವಾಮಿ ಮತ್ತು ವೈದಿಕ ಗ್ಯಾಂಗ್ ಸುಮ್ಮನಿರುತ್ತದೆಯೇ? ಹಾಗಿರುವಾ[...] ಕೋಣಗಳನ್ನು ಮನೋರಂಜನೆಗಾಗಿ ಭೀಕರವಾಗಿ ಓಡಿಸುವುದು[...] ಸಹ ದ್ರಾವಿಡ ಸಂಸ್ಕೃತಿಯ ದೃಷ್ಟಿಯಲ್ಲಿ ಧಾರ್ಮಿಕ ಅಪಚಾ[...] ಆಗುತ್ತದೆ ಎಂದು ತರ್ಕಿಸುವುದರಲ್ಲಿ ತಪ್ಪಿಲ್ಲ.

ದೇವರಾಜ ಅರಸುರವರ ಕ್ರಾಂತಿಕಾರಿ ಭೂಮಸೂದೆಯಿಂ[...] ತುಳುನಾಡಿನ ಬಂಟರ ಮತ್ತು ಜೈನರ ಭೂಮಿಗಳ[...] ಕೆಳಜಾತಿಯವರ ಪಾಲಾಯಿತು ಮತ್ತು ಅದರಿಂದ ಹೆಚ್[...] ಬಂಟ ಮನೆತನಗಳು ಆರ್ಥಿಕ ಸಂಕಷ್ಟಕ್ಕೆ ಈಡಾದವು ನಿಜ[...] ಆದರೆ ಬಂಟರ ಮತ್ತು ಜೈನರ ಗುತ್ತಿನ ಬಂಗ್ಲೆಗಳು ಮಾ[...] ಅವರ ಕೈಯಲ್ಲೇ ಉಳಿದವು. ಈ ಗುತ್ತಿನ ಬಂಗ್ಲೆಗ[...] ಆವರಣದಲ್ಲಿಯೇ ಭೂತಸ್ಥಾನಗಳು ಇದ್ದುದರಿಂದ ಅ[...] ಬಂಟ-ಜೈನರ ಕೈಯಲ್ಲಿಯೇ ಉಳಿದವು.

ನಾಗಬನಗಳು ಗುತ್ತಿನ ಮನೆಯಿಂದ ದೂರದಲ್ಲಿದ್ದರೂ[...] ನಾಗದೇವರಿಗೆ ಅಪಚಾರ ಆಗುವ ಭಯದಿಂದ ಕೆಳಜಾತಿಯವ[...] ನಾಗಬನದ ಭೂಮಿಗಳಿಗೆ ಡಿಕ್ಲರೇಷನ್ ಕೊಡಲಿಲ್ಲ, ಹಾಗಾಗಿ[...] ನಾಗಬನಗಳು ಸಹ ಬಂಟ-ಜೈನರ ಗುತ್ತಿನ ಮನೆತನಗ[...] ಅಧೀನವೇ ಉಳಿದವು. ಹೀಗೆ ಭೂಮಸೂದೆಯಲ್ಲಿ[...] ಬಂಟ-ಜೈನರು ಅಪಾರ ಕೃಷಿ ಭೂಮಿ ಕಳೆದುಕೊಂಡರೂ[...] ಭೂತಸ್ಥಾನಗಳು ಹಾಗೂ ನಾಗಬನಗಳು ಮಾತ್ರ ಅವರ[...] ಗುತ್ತಿನ ಅಧಿಕಾರದಡಿಯೇ ಮುಂದುವರಿದವು. ಜಮೀನುದಾರಿ[...] ಹೋದರೂ ಈ ಭೂತ ಹಾಗೂ ನಾಗಬನಗಳಿಂದಾಗಿ ಈಗಲೂ[...] ಬಂಟ ಮತ್ತು ಜೈನ ಗುತ್ತಿನವರಿಗೆ ಊರಿನ ಸಾಮಾಜಿಕ-ಧಾರ್ಮಿ[...] ಮುಖಂಡತ್ವ ಹಾಗೂ ಪರೋಕ್ಷವಾಗಿ ರಾಜಕೀಯ ಬಂಡವಾ[...] ಲಭಿಸುತ್ತಿರುವುದು ಸತ್ಯ.

ಇಡೀ ಭಾರತದಲ್ಲಿಯೇ ತುಳುನಾಡಿನ ಶೂದ್ರರು ಅತೀ[...] ಮೌಢ್ಯ ಹೊಂದಿದವರೆಂದು ಕುಖ್ಯಾತಿ ಇರುವುದರಿಂದ[...] ದೈವ-ಭೂತ-ನಾಗಗಳ ಕೋಪದ ಭಯ ತೋರಿಸಿ ಇಲ್ಲಿಯ[...] ಮೌಢ್ಯಭರಿತ ಕೆಳಜಾತಿಯವರನ್ನು ಹತೋಟಿಯ[...] ಇಟ್ಟುಕೊಳ್ಳುವುದು ಬಂಟ-ಜೈನರಿಗೆ ಅನುಕೂಲವಾಗಿದೆ. ಈಗ[...] ಜಲ್ಲಿಕಟ್ಟಿನಂತೆ ಕಂಬಳವನ್ನೂ ಉಳಿಸಿಕೊಳ್ಳಬೇಕೆಂಬ ಕೂಗಿನ[...] ಹಿಂದೆ ತುಳು ಸಂಸ್ಕೃತಿಯ ನೈಜ ಪ್ರೀತಿ ಇದೆಯೇ ಅಥವಾ[...] ಫ್ಯೂಡಲ್ ಪರಂಪರೆಯನ್ನು ಉಳಿಸಿಕೊಳ್ಳಬೇಕೆಂಬ[...] ಹಂಬಲವಿದೆಯೇ ಎಂದು ಪ್ರಜ್ಞಾವಂತರು ಚಿಂತನೆ ಮಾಡಬೇಕಿದೆ.

■ ಪ್ರವೀಣ ಎಸ್ ಶೆಟ್ಟಿ, ಮಂಗಳೂರು

ಧರ್ಮಾಧಿಕಾರಿಯ ಸುಳ್ಳುಗಳು ಮತ್ತು ವಾಸ್ತವ

ಜಂಟಿ ಕ್ರಿಯಾ ಸಮಿತಿಯು ಧರ್ಮ'ಕ್ಷೇತ್ರ'ದ ರ್ಮಾಧಿಕಾರಿಯು. ಅವರ ಕುಟುಂಬದ ಮತ್ತು ಸಂಸ್ಥೆಗಳ ರ್ಮಿಕ ಕೃತ್ಯಗಳ ಕುರಿತು ಈ ಹಿಂದೆ 'ಧರ್ಮಸೂಕ್ಷ್ಮ' ಪುಸ್ತಕವನ್ನು ಜನರ ಮುಂದಿಟ್ಟಿತ್ತು. ಈಗ ಅದೇ ತಿಯು 'ಅನಾವರಣ' ಎಂಬ ಕಿರು ಪುಸ್ತಕವನ್ನು ರತಂದಿದೆ. ಈ ಪುಸ್ತಕದಲ್ಲಿ ಧರ್ಮ'ಕ್ಷೇತ್ರ'ದ ಸುತ್ತ ವಿರುವ ಕಟ್ಟುಕತೆಗಳನ್ನು ಮತ್ತು ವಾಸ್ತವ ಸಂಗತಿಗಳನ್ನು ತಲಾಗಿದೆ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ಗಳ ಸಚಿವ ಎಚ್.ಆಂಜನೇಯ ಇಲ್ಲಿರುವ ಅಂಶಗಳನ್ನು ೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಂಡ ಒತ್ತಾಯಿಸುತ್ತದೆ. ಹಾಗೆ ಮಾಡಿದರೆ ಮಾತ್ರ ಕ್ಷೇತ್ರವನ್ನು ಅಪ್ರಜಾತಾಂತ್ರಿಕವಾಗಿ ಆಳುತ್ತಿರುವ ರ್ಮಾಧಿಕಾರಿಯನ್ನು ಹದ್ದುಬಸ್ತಿಗೆ ತರಬಹುದು ಮತ್ತು ಭಯದಿಂದಲೇ ಜೀವನ ಸಾಗಿಸುತ್ತಿರುವ ಸಾವಿರಾರು ರಿಗೆ ಮುಕ್ತಿಕೊಡಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಆಗುತ್ತಿರುವ ಅಕ್ರಮ, ಅನ್ಯಾಯ ಮತ್ತು ಚಾರಗಳನ್ನು ತಡೆಯಬಹುದು.

ಹುಸಿ ಪ್ರಚಾರ: 'ನೆಲ್ಯಾಡಿ ಬೀಡು ಅವಿಭಜಿತ ಹೆಗ್ಗಡೆ ಟುಂಬ' 4671 ಎಕ್ರೆ ಕೃಷಿ ಭೂಮಿ ಹೊಂದಿತ್ತು. 74ರಲ್ಲಿ ಭೂಸುಧಾರಣಾ ಕಾಯ್ದೆ ಪ್ರಕಾರ ಭೂನ್ಯಾಯ ಡಳಿಗೆ ವೀರೇಂದ್ರ ಹೆಗ್ಗಡೆ ನೀಡಿದ ಘೋಷಣಾ ಪತ್ರದ ತ ಸಂಖ್ಯೆ: L.R.Y. 72/74-75 ಪ್ರಕಾರ)


ವಾಸ್ತವ : ಈ ಭೂಮಿ 'ಶ್ರೀಕ್ಷೇತ್ರ ಧರ್ಮಸ್ಥಳದ ವಸ್ಥಾನದ ಆಸ್ತಿ' ಎಂದು. ಪುತ್ತೂರು ಎ.ಸಿಯವರಲ್ಲಿ ೇಂದ್ರ ಹೆಗ್ಗಡೆಯವರು 8.5.2015ರಂದು ನೀಡಿದ ಾಣಪತ್ರ ಒಂದರಲ್ಲಿ ಘೋಷಿಸಿರುತ್ತಾರೆ. ಅಂದರೆ ಹೆಗ್ಗಡೆ ಕುಟುಂಬದ ಆಸ್ತಿ ಅಲ್ಲ. ಇನ್‌ಕಂ ಟ್ಯಾಕ್ಸ್ ಾಖೆಗೆ ಈ ಬಗ್ಗೆ ಹೆಗ್ಗಡೆಯವರು ಲಿಖಿತವಾಗಿ ಿದ್ದಾರೆ. ದೇವಸ್ಥಾನದ ಆಸ್ತಿಯನ್ನು ಕುಟುಂಬಕ್ಕೆ ಡಿಕೊಂಡ ಈ ಕಾನೂನುಬಾಹಿರ ಕೃತ್ಯ ವಿಶ್ವಾಸದ್ರೋಹ ತ್ತು ವಂಚನೆಯ ಪ್ರಕರಣವಾಗಿದ್ದು, ಬೆಳ್ತಂಗಡಿ ಂ.ಎಫ್.ಸಿ ಕೋರ್ಟ್‌ನಲ್ಲಿ ಹೆಗ್ಗಡೆ ವಿರುದ್ಧ ಕ್ರಿಮಿನಲ್ ಗಿ ದೂರು ಸಹ ದಾಖಲಾಗಿದೆ. (P.C. 11/16. ಕಾಲಿಕ ತಡೆಯಾಜ್ಞೆ ಇದೆ.)

ಹುಸಿ ಪ್ರಚಾರ: ಭೂಸುಧಾರಣಾ ಕಾಯ್ದೆ ಯಾದಾಗ ಎಲ್ಲಾ ಒಕ್ಕಲುಗಳಿಗೆ ಆದರಲ್ಲೂ ದಲಿತರು, ೆಕುಡಿಯರಿಗೆಲ್ಲಾ ಹೆಗ್ಗಡೆಯವರು ಕರೆದು ಕರೆದು ೇಷನ್ ಹಾಕಿಸಿ, ಭೂಮಿ ಅವರಿಗೆ ಕೊಡಿಸಿದ್ದಾರೆ. ಡೆಯವರಿಗೆ ಭೂಮಿಯ ಮೇಲೆ ಆಸೆ ಇಲ್ಲ.

ವಾಸ್ತವ : 1974ರಲ್ಲಿ ಹೆಗ್ಗಡೆ ಕುಟುಂಬದಿಂದ ಸುಧಾರಣಾ ಕಾಯ್ದೆಯ ಸೆ. 66ರಡಿಯಲ್ಲಿ ನಮೂನೆ ಲ್ಲಿ ಘೋಷಣಾ ಪತ್ರ ಸಲ್ಲಿಸಲಾಗಿತ್ತು, (4671 ಎಕ್ರೆ) 2012ರಲ್ಲಿ ಬೆಳ್ತಂಗಡಿ ಭೂನ್ಯಾಯ ಮಂಡಳಿ ಹೆಗ್ಗಡೆ ಂಬಕ್ಕೆ 'ಮಿಗತೆ ಭೂಮಿ ಇಲ್ಲ' ಎಂದು 1050 ಅವರಿಗೆ ನೀಡಿದ ತೀರ್ಪು ಕಾನೂನುಬಾಹಿರವಾಗಿತ್ತು. ಪ್ರಕರಣದ ಇಡೀ ಕಡತ ಮಾಹಿತಿ ಹಕ್ಕಿನಲ್ಲಿ ಲಭಿಸಿದೆ. ವು ದಾಖಲೆಗಳು ಬೆಳ್ತಂಗಡಿ ತಾಲೂಕು ಕಚೇರಿಯಲ್ಲಿ ಯವಾಗಿದೆ! ಮಾಹಿತಿ ಹಕ್ಕು ಪ್ರಕಾರ ಇವನ್ನು ಕುವಂತೆ ಪುತ್ತೂರು ಎಸಿಯವರು 11 ಪ್ರಕರಣಗಳಲ್ಲಿ ೇಶಿಸಿದ್ದಾರೆ.) ಸಾಧ್ಯವಾದಷ್ಟೂ ಭೂಮಿ ತಾನು ಕೊಳ್ಳಲು ಮಾಡಿದ ವಿವಿಧ ಅಕ್ರಮಗಳು (ಕನ್ವರ್ಶನ್, ಟ್ ಕನ್ವರ್ಶನ್, ಪ್ಲಾಂಟೇಶನ್ ಭೂಮಿ ಎಂದು) ಈ ದಿಂದ ಗೊತ್ತಾಗುತ್ತದೆ. ಕಾನೂನುಬಾಹಿರವಾಗಿ 7ರಲ್ಲಿ 'ಪರಿಷ್ಕೃತ ಘೋಷಣೆ' ಸಲ್ಲಿಸಿದ್ದರು. 38 ವರ್ಷ ಈ ಪ್ರಕರಣದ ತೀರ್ಪು ಬಾರದಿರಲು ಕಾರಣ: ಾದದು ಮಾಡಿ ಭೂಮಿಯನ್ನೂ ಹೆಗ್ಗಡೆ ಕುಟುಂಬಕ್ಕೇ ಸಿಕೊಳ್ಳುವುದು. ನಿಯಮಬಾಹಿರವಾಗಿ ಹೆಗ್ಗಡೆ ಪರ ಶ ನೀಡಿ ಕರ್ತವ್ಯಲೋಪವೆಸಗಿದ ಅಂದಿನ ಪುತ್ತೂರು ವಿರುದ್ಧ ಲೋಕಾಯುಕ್ತ ತನಿಖೆ ಆಗುತ್ತಿದೆ. ್ಮಸ್ಥಳದಲ್ಲಿ ಅಶೋಕ ನಗರದಲ್ಲಿರುವ ನೂರಾರು ದಲಿತ ಂಬಗಳಿಗೆ ಭೂಮಂಜೂರು ಮಾಡಿಸಿ, ಮನೆ ಕೊಡಬಹುದಾಗಿತ್ತಾದರೂ ಮಾಡಿಲ್ಲ! ಇಲ್ಲಿಯ ಕುಡಿಯ ಅನೇಕ ಕುಟುಂಬಗಳೂ ಭೂವಂಚಿತರಾಗಿರು ನ್ನು ಹೇಳುತ್ತಾರೆ. ಭಯದಿಂದಾಗಿ ದೂರು ಕೊಡಲು ುತ್ತಾರೆ. ದಲಿತ ಸಂಘಟನೆಗಳ ಮುಖಂಡರು ಇಲ್ಲಿಯ ರ ದುಃಸ್ಥಿತಿಯನ್ನು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಹುಸಿ ಪ್ರಚಾರ: ಹೆಗ್ಗಡೆಯವರು ಖರೀದಿಸುವ ಇಂಚು ು ಸ್ಥಳವೂ ಶಿಕ್ಷಣ ಸಂಸ್ಥೆಗಳಿಗಾಗಿಯೇ ಹೊರತು ಕ್ಕಲ್ಲ, ಇವರ ಸಂಸ್ಥೆಗಳಿಗೆ ಸರಕಾರ ಮಂಜೂರು ಿದ ಸ್ಥಳ ಅದೇ ಉದ್ದೇಶಕ್ಕೆ ಬಳಕೆಯಾಗಿದೆ.

ವಾಸ್ತವ : ಶ್ರೀಕ್ಷೇತ್ರದ 1050 ಎಕ್ರೆ ಭೂಮಿ ಕುಟುಂಬದ ಸ್ವಾಧೀನದಲ್ಲಿದ್ದರೂ ಇದನ್ನು ಬಳಸದೆ ಶಿಕ್ಷಣ ಸಂಸ್ಥೆಗಳಿಗೆ ಮತ್ತಿತರ ಉದ್ದೇಶಗಳಿಗೆಂದು ಸುಮಾರು 200 ಎಕ್ರೆ ಸ್ಥಳ ಸರಕಾರದಿಂದ ಅನುದಾನವಾಗಿ ಪಡೆದ್ದಾರೆ. ಇದರಲ್ಲಿ 43.90 ಎಕ್ರೆ ಡಿ.ಸಿ. ಮನ್ನಾ ಭೂಮಿಯೂ ಇದೆ. ಇದಲ್ಲದೆ ಕೆಲವು ಬೇನಾಮಿ ಖರೀದಿಗಳೂ ಆಗಿವೆ. ಉದಾ: ಉಜಿರೆಯಲ್ಲಿ ಭರತ್‌ರಾಜ್



ಹೆಸರಿನಲ್ಲಿ ಖರೀದಿಸಿದ 9.74 ಎಕ್ರೆಗೆ ಎಸ್.ಡಿ.ಎಂ. ಎಜುಕೇಶನಲ್ ಸೊಸೈಟಿ ರೂ: 3.10 ಕೋಟಿ ಮತ್ತು ನೋಂದಣಿ ಖರ್ಚು ನೀಡಿ ಈ ಭೂಮಿ ತನ್ನ ಹೆಸರಿಗೆ ಮಾಡಿಕೊಡಲು ಕರಾರು ಮಾಡಿಕೊಂಡಿದೆ. ಈ ಭೂಮಿಯಲ್ಲಿ 'ಊಹಾತ್ಮಕ ಹಕ್ಕು' ಎಂದು 5/6 ಹಕ್ಕು ರಿಜಿಸ್ಟ್ರಿಯಾಗಿರುವುದು ವಿಚಿತ್ರವಾದರೂ ಸತ್ಯ! ಈ ಬಗ್ಗೆ ತನಿಖೆಗಳಾಗುತ್ತಿದೆ. ಇನ್‌ಕಂ ಟ್ಯಾಕ್ಸ್ ಇಲಾಖೆಗೂ ದೂರು ಸಲ್ಲಿಕೆಯಾಗಿದ್ದು ತನಿಖೆಯಾಗುತ್ತಿದೆ ಎಂದು ತಿಳಿದುಬಂದಿದೆ. ಇವರು ಹೊಂದಿರುವ, ಖರೀದಿಸಿರುವ ಸಾವಿರಾರು ಎಕ್ರೆ ಭೂಮಿಯಲ್ಲಿ ಬಹುಪಾಲು ಕೃಷಿ ಇದೆ.

ಲ್ಯಾಲ ಗ್ರಾಮದಲ್ಲಿ ಟಿ.ಬಿ. ಸೆನೆಟೋರಿಯಂ ಉದ್ದೇಶಕ್ಕೆ ಮಂಜೂರಾದ 12.97 ಎಕ್ರೆ ಸ್ಥಳದಲ್ಲಿ ಟಿಬಿ ಆಸ್ಪತ್ರೆ ರಚಿಸಲಾಗಿತ್ತು. ಈ ಆಸ್ಪತ್ರೆ ಮುಚ್ಚಲ್ಪಟ್ಟಿದ್ದರೂ ಇದನ್ನು ಮಂಜೂರಾತಿ ಷರತ್ತು ಪ್ರಕಾರ ಸರಕಾರಕ್ಕೆ ಹಿಂದಿರುಗಿಸಿಲ್ಲ. ನೂರಾರು ಬಡವರಿಗೆ ಮನೆನಿವೇಶನಗಳನ್ನಾಗಿ ನೀಡಬಹುದಾದ ಸ್ಥಳ ಇದಾಗಿದೆ.

ಹುಸಿ ಪ್ರಚಾರ: ಇವರ ಭೂಮಿ ಖರೀದಿಗಳೆಲ್ಲವೂ ಕ್ರಮಬದ್ಧವಾಗಿದೆ. ಯಾವುದೇ ಕಾನೂನು ಉಲ್ಲಂಘನೆಗಳಾಗಿಲ್ಲ.

ವಾಸ್ತವ : ಇವರ ಎಸ್‌ಡಿಎಂ ಎಜುಕೇಶನಲ್ ಸೊಸೈಟಿ ಕಾನೂನು ಉಲ್ಲಂಘಿಸಿ ಖರೀದಿಸಿದ 25 ಕ್ರಯಪತ್ರಗಳ ಮ್ಯುಟೇಷನ್ ಆದೇಶವನ್ನು ಪುತ್ತೂರು ಎಸಿಯವರು 22.6.15ರಂದು ರದ್ದುಗೊಳಿಸಿ 132 ಎಕ್ರೆ ಕಂದಾಯ ದಾಖಲೆಯಲ್ಲಿ 'ಸರಕಾರ' ಎಂದು ನಮೂದಿಸಲು ತಹಸೀಲ್ದಾರಿಗೆ ಆದೇಶಿಸಿದ್ದಾರೆ (ಮೇಲ್ಮನವಿ ಇದೆ). ಬೆಂಗಳೂರಿನ ಯಲಹಂಕದಲ್ಲಿ ಈ ಸಂಸ್ಥೆ ಖರೀದಿಸಿದ ನೋಟಿಫಿಕೇಷನ್ ಆಗಿದ್ದ 36.10 ಎಕ್ರೆ ಡಿನೋಟಿಫಿಕೇಷನ್ ಮಾಡಿ ಕಾನೂನು ಉಲ್ಲಂಘನೆಯಾದ ಬಗ್ಗೆ Controller Audit General (CAG) ತನ್ನ ವರದಿ ಕ್ರ.6 2014ರಲ್ಲಿ ಬೊಟ್ಟುಮಾಡಿ, ಹಿಂಪಡೆಯಲು ನಿರ್ದೇಶಿಸಿದೆ. ಮೈಸೂರಿನಲ್ಲಿ ಕಾನೂನು ಉಲ್ಲಂಘಿಸಿ, ಸುಳ್ಳು ಹೇಳಿಕೆ ನೀಡಿ ಖರೀದಿಸಿದ ಸುಮಾರು 40 ಎಕ್ರೆ ಭೂಮಿಯ ಕುರಿತು ಅಲ್ಲಿನ ಎಸಿ ನ್ಯಾಯಾಲಯದಲ್ಲಿ ತನಿಖೆಯಾಗುತ್ತಿದೆ. ಇವರ ಸಂಸ್ಥೆಗಳ ಮತ್ತು ಕುಟುಂಬದ ಇಂತಹ 50ಕ್ಕೂ ಹೆಚ್ಚು ಪ್ರಕರಣಗಳಿದ್ದು, ತನಿಖೆಯಾಗುತ್ತಿದೆ. 1974ರಲ್ಲಿ ತನ್ನ ಘೋಷಣಾ ಪತ್ರದಲ್ಲಿ ಕಾಣಿಸದ ಹಲವು ಭೂಮಿಗಳಿದ್ದು ಈ ಪ್ರಕರಣಗಳ ಕುರಿತು ಬೆಳ್ತಂಗಡಿ ತಹಸೀಲ್ದಾರರಿಗೆ ದಾಖಲೆ ಸಹಿತ ದೂರು ನೀಡಲಾಗಿದೆ. 1974ರ ನಂತರದ ಇವರ ಎಲ್ಲಾ ಭೂಮಿ ಖರೀದಿಗಳೂ ಭೂ ಸುಧಾರಣಾ ಕಾಯ್ದೆಯ ಉಲ್ಲಂಘನೆಯಾಗಿದ್ದು ಕಾನೂನುಬಾಹಿರವಾಗಿದೆ.

ಹುಸಿ ಪ್ರಚಾರ: ವೀರೇಂದ್ರ ಹೆಗ್ಗಡೆಯವರ ತಮ್ಮ ಹರ್ಷೇಂದ್ರ ಕುಮಾರ್ ಹೆಸರಿನಲ್ಲಿ 1972ರಲ್ಲಿ ಭೂಮಿ ಇರಲಿಲ್ಲ, ಇವರು ಭೂರಹಿತರು, ಇವರ ವಾರ್ಷಿಕ ಆದಾಯ ರೂ:1200/-ಕ್ಕಿಂತ ಕಡಿಮೆ. ಇವರಿಗೆ 7.59 ಎಕ್ರೆ ದರ್ಖಾಸ್ತು ಮಂಜೂರು ಮಾಡಿದ್ದರಲ್ಲಿ ಕಾನೂನು ಉಲ್ಲಂಘನೆಯಾಗಿಲ್ಲ.

ವಾಸ್ತವ : 1972ರಲ್ಲಿ ಹೆಗ್ಗಡೆ ಅವಿಭಕ್ತ ಕುಟುಂಬದ ಹೆಸರಿನಲ್ಲಿ 4671 ಎಕ್ರೆ ಭೂಮಿ ಇದ್ದ ದಾಖಲೆ ಇದೆ. ಈ ದಾಖಲೆಗಳ ಪ್ರಕಾರ ಇದರಲ್ಲಿ 1/4 ಅಂಶ ಹಕ್ಕು ಹರ್ಷೇಂದ್ರರದ್ದು, ಇವರ ಕೃಷಿ ಆದಾಯ ಲಕ್ಷಗಟ್ಟಲೆ. ಇವರು ಭೂರಹಿತ, ಬಡವ ಎಂದು, ಸ್ವಾರ್ಜಿತ ಆಸ್ತಿ ಇಲ್ಲ ಎಂದು ಸುಳ್ಳು ಅರ್ಜಿಯನ್ನೂ ಮತ್ತು ಇದರೊಂದಿಗೆ ಸುಳ್ಳು ಪ್ರಮಾಣಪತ್ರವನ್ನೂ ಸಲ್ಲಿಸಿದ್ದಾರೆ. ಹರ್ಷೇಂದ್ರರಿಗೆ ದರ್ಖಾಸ್ತು ಮಂಜೂರಾತಿಗೆ ತನ್ನ ಆಕ್ಷೇಪವಿಲ್ಲವೆಂದೂ ಮಾತ್ರವಲ್ಲ ಒಪ್ಪಿಗೆ ಇದೆ ಎಂದೂ ಸ್ವತಃ ವೀರೇಂದ್ರ ಹೆಗ್ಗಡೆಯವರು ಕಂದಾಯ ಇಲಾಖೆಯ ಧರ್ಮಸ್ಥಳ ಶ್ಯಾನುಭೋಗರಿಗೆ 17-3-1972ರಂದು ಲಿಖಿತ ಹೇಳಿಕೆ ನೀಡಿದ್ದಾರೆ. ಉಜಿರೆ ಧರ್ಮಸ್ಥಳ ಮುಖ್ಯ ರಸ್ತೆ ಬದಿ ಇರುವ ಈ ದರ್ಖಾಸ್ತು ಮಂಜೂರಾತಿ ಕಾನೂನು ಬಾಹಿರವಾಗಿದ್ದು ಶಿಕ್ಷಾರ್ಹ ಅಪರಾಧವೂ ಆಗಿದೆ. ತನಿಖೆ ನಡೆಯುತ್ತಿದೆ.

ಹುಸಿ ಪ್ರಚಾರ: 14.65 ಎಕ್ರೆ ಸ್ಥಳವನ್ನು ಹೆಗ್ಗಡೆ ಅಧ್ಯಕ್ಷರಾಗಿರುವ ಶಾಂತಿವನ ಟ್ರಸ್ಟ್‌ಗೆ ಧರ್ಮಸ್ಥಳದಲ್ಲಿ ಪ್ರಕೃತಿ ಚಿಕಿತ್ಸಾಲಯಕ್ಕೆಂದು 1991ರಲ್ಲಿ ಸರಕಾರ ಮಂಜೂರು ಮಾಡಿತ್ತು.

ವಾಸ್ತವ : ಈ ಸ್ಥಳ ಮಂಜೂರಾದ ಉದ್ದೇಶ: ಧರ್ಮಸ್ಥಳ ದೇವಸ್ಥಾನಕ್ಕೆ ಬರುವ ಭಕ್ತರು ದೇವರ ದರ್ಶನದ ಬಳಿಕ ವಿಹರಿಸಲು 'ಶಾಂತಿವನ, ಹೂದೋಟ ಮತ್ತು ಮೃಗಾಲಯ ನಿರ್ಮಾಣ'ಕ್ಕಾಗಿ. ಆದರೆ, ಇದನ್ನು 'ಪ್ರಕೃತಿ ಚಿಕಿತ್ಸಾಲಯ ಮತ್ತು ನಿವೃತ್ತ ಅಧಿಕಾರಿಗಳ ವಿಶ್ರಾಂತಿ ಗೃಹ'ಕ್ಕೆಂದು ಮಂಜೂರಾತಿ ಪತ್ರ ತಿದ್ದಿ, ಅಲ್ಲಿ ಪ್ರಕೃತಿ ಚಿಕಿತ್ಸಾಲಯ ನಿರ್ಮಿಸಿ ಸರಕಾರಕ್ಕೆ ಮೋಸ ಮಾಡಲಾಗಿದೆ. ಪ್ರಕೃತಿ ಚಿಕಿತ್ಸಾಲಯಕ್ಕೆ ಸ್ಥಳ ನೀಡಲು ಸರಕಾರಕ್ಕೆ ಅರ್ಜಿಯೇ ಸಲ್ಲಿಸಿಲ್ಲ! ಇಲ್ಲಿರುವ ಪ್ರಕೃತಿ ಚಿಕಿತ್ಸಾಲಯ ಶ್ರೀಮಂತರ ಚಿಕಿತ್ಸೆ-ವಿಶ್ರಾಂತಿಗೆ ಇರುವ ಲಾಭದಾಯಕ ಯೋಜನೆ. ಕ್ಷೇತ್ರದ ಭಕ್ತರಿಗೆ ಜನಸಾಮಾನ್ಯರಿಗೆ ಇಲ್ಲಿ ಪ್ರವೇಶ ಇಲ್ಲ. ಮುಖ್ಯ ಮಂತ್ರಿಗಳು 22.11.14ರಂದು ಈ ಕುರಿತು ತನಿಖೆಗೆ ಆದೇಶಿಸಿದ್ದು, ತನಿಖೆ ಆಗುತ್ತಿದೆ.

ಹುಸಿ ಪ್ರಚಾರ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕ ಆದಾಯ ರೂಪಾಯಿ 127.25 ಕೋಟಿ. (ಆದಾಯಕರ ಇಲಾಖೆಗೆ 2014ರಲ್ಲಿ ವೀರೇಂದ್ರ ಹೆಗ್ಗಡೆಯವರು The Institutions at Dharmasthala' ಈ ಹೆಸರಿನಲ್ಲಿ ಸಲ್ಲಿಸಿದ ರಿಟರ್ನ್ಸ್ ಪ್ರಕಾರ)

ವಾಸ್ತವ : ಇಲ್ಲಿಯ ವಾರ್ಷಿಕ ಆದಾಯ ಪತ್ರಿಕಾ ವರದಿಗಳು ಮತ್ತು ದೇವಸ್ಥಾನದ ನೌಕರರ ಪ್ರಕಾರ ರೂ: 300 ಕೋಟಿಯ ಆಸುಪಾಸಿನಲ್ಲಿದೆ. (ಮನಿಯಾರ್ಡರ್‌ನಿಂದ ವರ್ಷಕ್ಕೆ 9-10 ಕೋಟಿ, ಆನ್‌ಲೈನ್ ಸೇವೆಯಿಂದ ಹಲವು ಕೋಟಿ, ಹರಕೆಮಂಡೆ ಏಲಂನಿಂದ 6-7 ಕೋಟಿ, ತುಲಾಭಾರ - ಕಾಣಿಕೆ - ಸೇವೆಗಳಿಂದ ನೂರಾರು ಕೋಟಿ, ಸುಮಾರು 220 ಅಂಗಡಿಗಳ ಮತ್ತು ಸುಮಾರು 3500 ಯಾತ್ರಿಕರು ಉಳಕೊಳ್ಳುವ ವಸತಿಗೃಹಗಳಿಂದ ಬಾಡಿಗೆ 10-12 ಕೋಟಿ, ವಿಶೇಷ ದರ್ಶನ ಶುಲ್ಕ ರೂ:200/ ರಂತೆ, ಹುಂಡಿ ಕಾಣಿಕೆ, ವಸ್ತುರೂಪ ದೇಣಿಗೆ, ಕೃಷಿ ಆದಾಯ, ಯಕ್ಷಗಾನ, ಬಡ್ಡಿ ಇತ್ಯಾದಿ ಇಲ್ಲಿಯ ಆದಾಯ). ಹೆಗ್ಗಡೆಯವರು ನೀಡಿದ ಲೆಕ್ಕ ಸರಿಯಾಗಿಲ್ಲ. ಇವರ ಪಟ್ಟಾಭಿಷೇಕದ ದಿನ ಇವರ ಯೋಜನೆಗಳನ್ನು ಪ್ರಕಟಿಸುತ್ತಾರೆ. ಆದರೆ ಆದಾಯ ಬಹಿರಂಗಪಡಿಸುವುದಿಲ್ಲ! ವರ್ಷಕ್ಕೆ ಒಂದು ಕೋಟಿಗೂ ಹೆಚ್ಚು ಭಕ್ತರು ಈ ದೇವಳಕ್ಕೆ ಬರುತ್ತಾರೆ. ತಿರುಪತಿಯ ನಂತರ ಹೆಚ್ಚು ಆದಾಯದ ದೇವಸ್ಥಾನ ಇದೇ ಆಗಿದೆಯಂತೆ.


ಹುಸಿ ಪ್ರಚಾರ: ಹೆಗ್ಗಡೆಯವರ ಯೋಜನೆಗಳೆಲ್ಲವೂ ದೇವಸ್ಥಾನದ ಆದಾಯದಿಂದ ನಡೆಯುತ್ತದೆ. ಧಾರ್ಮಿಕ ಕ್ಷೇತ್ರವೊಂದು ಸಾಮಾಜಿಕ ಸೇವೆ ಮಾಡಿರುವುದು ಅದ್ಭುತ, ಆದರ್ಶ.

ವಾಸ್ತವ : ಇವರ ಹೆಚ್ಚಿನ ಯೋಜನೆಗಳು ಕೇಂದ್ರ ಮತ್ತು ರಾಜ್ಯ ಸರಕಾರ, ನಬಾರ್ಡ್, ಬ್ಯಾಂಕ್‌ಗಳು, ಖಾಸಗಿ ಸಂಸ್ಥೆಗಳು, ನೀಡುವ ಕೋಟಿ ಕೋಟಿ ಅನುದಾನಗಳಿಂದ ಮತ್ತು ಕಡಿಮೆ ಬಡ್ಡಿ ಸಾಲದಲ್ಲಿ ನಡೆಯುತ್ತಿವೆ. ವಿದೇಶೀ ಅನುದಾನ ಸಂಸ್ಥೆಗಳಿಂದಲೂ ಇವರು ನೆರವು ಪಡೆದಿದ್ದಾರೆ. ಇವರ ಲೆಕ್ಕ ಪತ್ರಗಳಲ್ಲಿಯೇ ಇದು ಕಂಡುಬರುತ್ತದೆ. ಆದರೆ ಸಾರ್ವಜನಿಕವಾಗಿ ಇವರೇ ಸ್ವಂತ ಹಣದಿಂದ - ದೇವಳದ ಹಣದಿಂದ ಮಾಡಿದಂತೆ ಕಾಣಿಸುತ್ತದೆ. ಇತರ ಧಾರ್ಮಿಕ ಕೇಂದ್ರಗಳೂ ದಾನ-ಸೇವೆ ಮಾಡುತ್ತಿದ್ದರೂ ಇವರಷ್ಟು ಪ್ರಚಾರ ಮಾಡುವುದಿಲ್ಲ.

ಹುಸಿ ಪ್ರಚಾರ: ಹೆಗ್ಗಡೆಯವರು ಸರಕಾರಕ್ಕಿಂತಲೂ ಉತ್ತಮವಾಗಿ ಯೋಜನೆಗಳನ್ನು ಜಾರಿ ಮಾಡುತ್ತಾರೆ.

ವಾಸ್ತವ : ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನಿತ 14.57 ಕೋಟಿ ವೆಚ್ಚದ ಬಿಪಿಎಲ್ ಕುಟುಂಬ ಎಪಿಎಲ್ ಮಾಡುವ 'ಸಿರಿ' ಯೋಜನೆಯ ಮೌಲ್ಯಮಾಪನ ವರದಿಯಂತೆ ಇದು ಯಶಸ್ವಿಯಾಗಿಲ್ಲ. ದ.ಕ.ಜಿ.ಎಸ್.ಜಿ.ಎಸ್.ವೈ ಯೋಜನೆ ಅನುಷ್ಠಾನ ಸಮಿತಿಯಲ್ಲಿ ಈ ಬಗ್ಗೆ 2009-2010ರಲ್ಲಿ ನಿರ್ಣಯಗಳಾಗಿವೆ. ಇತರ ಹಲವು ಯೋಜನೆಗಳೂ

▶▶ 14



13 ◀◀

ಯತ್ನವಾಗಿಲ್ಲ. ಕೊಕ್ಕಡದಲ್ಲಿ ಎಂಡೋಸಲ್ಫಾನ್ ಪೀಡಿತರಿಗೆ ಸರಕಾರಿ ಅನುದಾನದಲ್ಲಿ ನಡೆಯುತ್ತಿದ್ದ 'ಪಾಲನಾ ಕೇಂದ್ರ'ದ ಅವ್ಯವಹಾರವನ್ನು ದ.ಕ. ಜಿಲ್ಲಾಧಿಕಾರಿ ಬಹಿರಂಗಪಡಿಸಿ, ಕ್ರಮಕ್ಕೆ ಆದೇಶಿಸಿದ್ದರು (ಮಾರ್ಚ್, 2016). ಇವರು ನಡೆಸುವ ಸರಕಾರಿ ಅನುದಾನಿತ ಗೋಶಾಲೆಯ ಅಕ್ರಮದ ಬಗ್ಗೆ ಕರ್ನಾಟಕ ಸರ್ಕಾರವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಮಾಡಿದ ಮೌಲ್ಯ ಮಾಪನದಲ್ಲಿ ವರದಿಯಾಗಿದೆ. (ಮೇ, 2016)

ಹುಸಿ ಪ್ರಚಾರ: ಹೆಗ್ಗಡೆಯವರ ಶಿಕ್ಷಣ ಸಂಸ್ಥೆಗಳು ಪ್ರಸಿದ್ಧ ಶಿಸ್ತುಬದ್ಧ ಮತ್ತು ಇವುಗಳಿಗೆ ಸರಿಸಾಟಿಯಾಗುವುದು ಕಷ್ಟ ಸಾಧ್ಯ.

ವಾಸ್ತವ : ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳು ತುಂಬಿ ತುಳುಕುತ್ತಿವೆ. ಮಣಿಪಾಲ ಯುನಿವರ್ಸಿಟಿ ದೇಶದಲ್ಲೇ ಅಗ್ರಸ್ಥಾನದ ಮಾನ್ಯತೆ ಪಡೆದಿದೆ. ವಿವೇಕಾನಂದ, ನಿಟ್ಟೆ, ಎ.ಜೆ ಶೆಟ್ಟಿ, ಎಲೋಶಿಯಸ್, ಕೆನರಾ, ಆಳ್ವಾಸ್, ಫಿಲೋಮಿನಾ ಮತ್ತಿತರ ಶಿಕ್ಷಣ ಸಂಸ್ಥೆಗಳೂ ಅತ್ಯುತ್ತಮ ಸಾಲಿನಲ್ಲಿ ಇದ್ದು ಮಾನ್ಯತೆ ಗಳಿಸಿವೆ. ಇವ್ಯಾರಿಗೂ ಕಾಣಿಕೆ ಡಬ್ಬಗಳಿಲ್ಲ.

ಹುಸಿ ಪ್ರಚಾರ: ಹೆಗ್ಗಡೆಯವರ ಶಿಕ್ಷಣ ಸಂಸ್ಥೆಗಳಲ್ಲಿ ಬಡವರಿಗೆ ಉಚಿತ ಮತ್ತು ರಿಯಾಯ್ತಿ ಶುಲ್ಕದಲ್ಲಿ ಶಿಕ್ಷಣ ಸಿಗುತ್ತದೆ.

ವಾಸ್ತವ : ಧಾರ್ಮಿಕ ಹಿನ್ನೆಲೆ ಇದ್ದರೂ ಇಲ್ಲಿಯೂ ಇತರ ಸಂಸ್ಥೆಗಳಿಗೆ ಕಡಿಮೆಯಾಗದ ಶುಲ್ಕ ಇದೆ. ಉಚಿತ, ರಿಯಾಯ್ತಿಗಳು ಇತರ ಶಿಕ್ಷಣ ಸಂಸ್ಥೆಗಳಿಗಿಂತಲೂ ಕಡಿಮೆ ಎನ್ನಬಹುದು. ಧಾರ್ಮಿಕ ಹಿನ್ನೆಲೆಯ ತುಮಕೂರಿನ ಸಿದ್ಧಗಂಗಾದಲ್ಲಿರುವಂತೆ ಉಚಿತ ಶಿಕ್ಷಣ ಇಲ್ಲಿ ಇಲ್ಲ. ಇವರ ಸಂಸ್ಥೆಗಳ ಸಿಬ್ಬಂದಿಗಳ ಮಕ್ಕಳಿಗೆ, ಧರ್ಮಸ್ಥಳ ಮತ್ತು ಸುತ್ತಲಿನ ದಲಿತ ಮತ್ತು ಇತರ ಬಡಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ಇವರು ಕೊಡುವುದಿಲ್ಲವೆಂದು ಹೇಳುತ್ತಾರೆ.

ಹುಸಿ ಪ್ರಚಾರ: ದೇವಸ್ಥಾನಕ್ಕೆ ಬರುವ ಎಲ್ಲಾ ಭಕ್ತರಿಗೂ ಅನ್ನದಾಸೋಹ ಇರುವ ಇಲ್ಲಿಯಷ್ಟು ಶಿಸ್ತುಬದ್ಧ ವ್ಯವಸ್ಥೆ ಬೇರೆಲ್ಲಿಯೂ ಇಲ್ಲ.

ವಾಸ್ತವ : ಧರ್ಮಸ್ಥಳದಲ್ಲಿ ಮಾತ್ರ ಅಲ್ಲ, ಸುಬ್ರಹ್ಮಣ್ಯ ಉಡುಪಿ, ಕೊಲ್ಲೂರು, ಕಟೀಲು ಮುಂತಾಗಿ ಎಲ್ಲಾ ಸಾರ್ವಜನಿಕ ದೇವಸ್ಥಾನಗಳಲ್ಲಿಯೂ ಅನ್ನದಾಸೋಹ ಇದೆ ಮತ್ತು ಇಲ್ಲಿಯೂ ಶಿಸ್ತುಬದ್ಧ ವ್ಯವಸ್ಥೆ ಇದೆ.

ಹುಸಿ ಪ್ರಚಾರ: ದೇವಸ್ಥಾನದ ಮತ್ತು ಇದಕ್ಕೆ ಪೂರಕ ವ್ಯವಸ್ಥೆಗಳ ಎಲ್ಲಾ ನೌಕರರಿಗೂ (ಸುಮಾರು 1000) ಪ್ರಾವಿಡೆಂಟ್ ಫಂಡ್, ಗ್ರ್ಯಾಚುವಿಟಿ ಸಿಗುತ್ತದೆ. ನೌಕರರ ಬಗ್ಗೆ ಹೆಗ್ಗಡೆಯವರಿಗೆ ವಿಶೇಷ ಕಾಳಜಿ ಇದೆ.

ವಾಸ್ತವ : ದೇವಸ್ಥಾನದಲ್ಲಿ ಮತ್ತು ಪೂರಕ ವ್ಯವಸ್ಥೆಗಳಲ್ಲಿ 25–30 ವರ್ಷ ಸೇವೆ ಸಲ್ಲಿಸಿದವರಿಗೂ ನಿವೃತ್ತರಾಗುವಾಗ ಅಲ್ಪ ಮೊತ್ತದ ನಗದು, ಶಾಲು (ಕೆಲವರಿಗೆ ಒಂದು ಉಂಗುರ) ನೀಡುತ್ತಾರೆ. ಇವರಿಗೆ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳು ಈವರೆಗೆ ಸಿಕ್ಕಿಲ್ಲವೆಂದು ತಿಳಿದುಬಂದಿದೆ. ಕಾರ್ಮಿಕ ಇಲಾಖೆಗೆ ದೂರು ನೀಡಲು ಭಯವೆಂದು ಕಾಣುತ್ತದೆ. ತಾ. 21.9.16ರಂದು ರಾಜ್ಯ ಕಾರ್ಮಿಕ ಮಂತ್ರಿಗಳು ಇಲ್ಲಿಯ ನೌಕರರಿಗೆ ಸೌಲಭ್ಯ ನೀಡುವ ಬಗ್ಗೆ ಕ್ರಮಕೈಗೊಳ್ಳಲು ಕಾರ್ಮಿಕ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ. ಈ ದೇವಸ್ಥಾನಕ್ಕೆ ನೂರಾರು ಕೋಟಿ ಆದಾಯವಿದ್ದರೂ ಎಲ್ಲಾ ನೌಕರರಿಗೆ ಕಾನೂನುಪ್ರಕಾರ ಕೊಡಬೇಕಾದ ಸಂಬಳ ಮತ್ತು ನಿವೃತ್ತಿ ಸೌಲಭ್ಯ ಕೊಡದಿರುವುದು ಕಾನೂನು ಸಮ್ಮತವೂ ಅಲ್ಲ, ಧರ್ಮಸಮ್ಮತವೂ ಅಲ್ಲ.

ಹುಸಿ ಪ್ರಚಾರ: ಶ್ರೀಕ್ಷೇತ್ರಕ್ಕೆ 800 ವರ್ಷದ ಇತಿಹಾಸವಿದೆ. ಜೈನ ಹೆಗ್ಗಡೆ ಪರಂಪರೆಯ ಆಡಳಿತ ಪ್ರಾಚೀನಕಾಲದಿಂದಲೂ ಇತ್ತು.

ವಾಸ್ತವ : ಹೆಗ್ಗಡೆ ಕುಟುಂಬಕ್ಕೆ ಈ ದೇವಸ್ಥಾನದ ಆಡಳಿತ ಬಂದದ್ದು ಸುಮಾರು 200 ವರ್ಷಗಳ ಈಚೆಗೆ. ಇದಕ್ಕೂ ಮೊದಲು ಈ ದೇವಸ್ಥಾನದ ಆಡಳಿತ ಸ್ಥಾನಿಕ ಬ್ರಾಹ್ಮಣರದ್ದಾಗಿತ್ತು, ಖ್ಯಾತ ಇತಿಹಾಸಕಾರ ಡಾ|| ಪಿ. ಗುರುರಾಜ ಭಟ್ಟರ 'ತುಳುನಾಡು' ಸಂಶೋಧನಾ ಗ್ರಂಥದ ಪುಟ 94ರ ಉಲ್ಲೇಖ: 'ಇದರಿಂದ ತಿಳಿಯಬಹುದಾದ ವಿಷಯವೇನೆಂದರೆ ಧರ್ಮಸ್ಥಳವು ಒಂದು ಕಾಲದಲ್ಲಿ ಸ್ಥಾನಿಕರದ್ದೇ ಆಗಿತ್ತೆಂಬುದು. ಇಲ್ಲಿಯ ಸ್ಥಳವಂದಿಗರು ಪುತ್ತೂರು ನಟ್ಟೋಜ ಮನೆತನದವರಾಗಿರಬೇಕು. ಟಿಪ್ಪುವಿಗೆ ವಿರೋಧವಾಗಿ ಬ್ರಿಟಿಷರಿಗೆ ಸಹಾಯವಿತ್ತ ಕುಮಾರ ಹೆಗ್ಗಡೆ ಎಂಬವನಿಗೆ ಬ್ರಿಟಿಷರು ಇಲ್ಲಿಯ ಆಡಳಿತವನ್ನು ಬಿಟ್ಟದ್ದಾಗಿ ತಿಳಿದುಬರುತ್ತದೆ. ಈ ಸ್ಥಳಕ್ಕೆ ಹಿಂದಿನ ಹೆಸರು ಕುಡುಮವೆಂದು. ಈ ಧರ್ಮಸ್ಥಳ ಮೂಲಿಗರ ಒಂದು ಪಾಲಿನವರು ಮಂಗಳೂರಿನ ಕದಳಿವನ ಅಂದರೆ ಈಗಿನ ಕದ್ರಿ ಎಂಬಲ್ಲಿ ನೆಲೆಸಿ ಇಲ್ಲಿ ಮಂಜುನಾಥೇಶ್ವರನನ್ನು ಪ್ರತಿಷ್ಠಾಪಿಸಿದರು ಎಂದು ಪ್ರತೀತಿ.' ಟಿಪ್ಪು ಮೃತ ಪಟ್ಟದ್ದು 1799ರಲ್ಲಿ, ಅಂದರೆ ಹೆಗ್ಗಡೆ ಆಡಳಿತ ಇತಿಹಾಸ ಅನಂತರದ್ದು.

ಹುಸಿ ಪ್ರಚಾರ: ಧರ್ಮಸ್ಥಳ ಮಂಜುನಾಥಸ್ವಾಮಿ ದೇವಸ್ಥಾನ ಹೆಗ್ಗಡೆ ಕುಟುಂಬದ ಖಾಸಗಿ ದೇವಸ್ಥಾನ. ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ವಾಸ್ತವ : 1926ರ ಸರಕಾರಿ ಗೆಜೆಟ್ ದಾಖಲೆಯ ಪಟ್ಟಿಯಲ್ಲಿ ಕ್ರ.235ರಲ್ಲಿ ಕುಡುಮದ ಮಂಜುನಾಥ (ಧರ್ಮಸ್ಥಳ) ದೇವಸ್ಥಾನಕ್ಕೆ ರೂ: 220/- ಮತ್ತು ಕುಡುಮದ ಭೂತ (ಅಣ್ಣಪ್ಪ ಸ್ವಾಮಿ) ಕ್ಕೆ ರೂ: 88/- ವಾರ್ಷಿಕ ತಸ್ತೀಕು ಸರಕಾರದಿಂದ ಬರುತ್ತಿತ್ತು, 1926ರ ಅಂದಿನ ಮದ್ರಾಸ್ ಹಿಂದೂ ಧಾರ್ಮಿಕ ದತ್ತಿ ಕಾಯ್ದೆ ಪ್ರಕಾರ ಧರ್ಮಸ್ಥಳ ದೇವಸ್ಥಾನವೂ ಅದರ ವ್ಯಾಪ್ತಿಯಲ್ಲಿತ್ತು, ಆಗಿನ ಹೆಗ್ಗಡೆಯವರು ಈ ದೇವಸ್ಥಾನವನ್ನು ವಿರಹಿತಪಡಿಸಬೇಕೆಂದು ಇಲಾಖೆಗೆ ಅರ್ಜಿ ಕೊಟ್ಟಿದ್ದರು ಮತ್ತು ಇದು ಅಂಗೀಕಾರವಾಗಿತ್ತು, ಆದರೆ ಅನಂತರ ಈ ಅನುಮತಿಯನ್ನು ಇಲಾಖೆ ಹಿಂಪಡೆದ ಕಾರಣ ವ್ಯಾಜ್ಯ ಆರಂಭ ಆಗಿ 1976ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ತಾಂತ್ರಿಕ ಕಾರಣಕ್ಕಾಗಿ ಹೆಗ್ಗಡೆ ಕುಟುಂಬದ ಪರವಾಗಿ ಆದೇಶವಾಯ್ತು, ಆದರೆ 1997ರಲ್ಲಿ ಕರ್ನಾಟಕದಲ್ಲಿ ಹೊಸ ಧಾರ್ಮಿಕ ದತ್ತಿ ಕಾಯ್ದೆ (KRI &CE Act) ಬಂದಿರುವುದರಿಂದ 1976ರ ಆದೇಶ ಈಗ ಊರ್ಜಿತದಲ್ಲಿ ಇಲ್ಲ, ಮಾತ್ರವಲ್ಲದೆ, 2011ರಲ್ಲಿ ತಿದ್ದುಪಡಿಯಾದ ಈ ಕಾಯ್ದೆ ಪ್ರಕಾರ ಈ



ದೇವಸ್ಥಾನವನ್ನು ಇಲಾಖಾ ವ್ಯಾಪ್ತಿಗೆ ತರಲು ಸೂಕ್ತ ಪ್ರಸ್ತಾವನೆ ಕಳಿಸಲು ಮುಜರಾಯಿ ಸಚಿವರ ತಾ. 7.11.2014ರ ಟಿಪ್ಪಣಿ ಪ್ರಕಾರ ಧಾರ್ಮಿಕ ದತ್ತಿ ಆಯುಕ್ತರು ದ.ಕ. ಜಿಲ್ಲಾಧಿಕಾರಿಗಳಿಗೆ 14.1.2015, 29.5.2015, 13.7.2015, 4.9.2015, 13.10.2015 ಮತ್ತು 7.11.2015ರಂದು ನಿರ್ದೇಶನ ಮತ್ತು ಜ್ಞಾಪಕಪತ್ರ ನೀಡಿದ್ದಾರೆ.

ಹುಸಿ ಪ್ರಚಾರ: ಹೆಗ್ಗಡೆ ಕುಟುಂಬದ ಮುಖ್ಯಸ್ಥ ಪುರುಷರೇ ಆಗಿರಬೇಕು.

ವಾಸ್ತವ : ಈ ದೇವಸ್ಥಾನದ ಕುರಿತು ಸುಪ್ರೀಂಕೋರ್ಟ್‌ನಲ್ಲಿ ನಡೆದ ವ್ಯಾಜ್ಯದಲ್ಲಿ 1976ರಲ್ಲಿ ಆದ ಆದೇಶದಲ್ಲಿ ಕುಮಾರ ಹೆಗ್ಗಡೆಯವರು ಕೋರ್ಟ್‌ಗೆ ನೀಡಿದ ಹೇಳಿಕೆ ಉಲ್ಲೇಖವಾಗಿದೆ. ಇದರ ಪ್ರಕಾರ ಉಡುಪಿಯ ಪೂಜ್ಯ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಬಂದ ಸಂದರ್ಭದಲ್ಲಿ ಹೆಗ್ಗಡೆ ಕುಟುಂಬದ ಮುಖ್ಯಸ್ಥರಾಗಿದ್ದವರು ಒಬ್ಬರು ಮಹಿಳೆ: ಶ್ರೀಮತಿ ಅಮ್ಮುದೇವಿ ಬಲ್ಲಾಳ್ತಿ, ಹಾಗಿದ್ದಲ್ಲಿ ತದನಂತರ ಮಹಿಳೆ ಕುಟುಂಬದ ಮುಖ್ಯಸ್ಥರು ಯಾಕೆ ಆಗಬಾರದು? ಹಿಂದು ವಾರೀಸು ಕಾಯ್ದೆ ಪ್ರಕಾರ ಮಹಿಳೆಯರಿಗೆ ಸಮಾನ ಹಕ್ಕು ಬಂದಿರುವುದರಿಂದ ಇದು ಹೆಗ್ಗಡೆ ಕುಟುಂಬಕ್ಕೂ ಅನ್ವಯವಾಗುತ್ತದಲ್ಲವೇ?

ಹುಸಿ ಪ್ರಚಾರ: 9.10.2012ರಂದು ಸೌಜನ್ಯಾ ಅತ್ಯಾಚಾರ ಮತ್ತು ಕೊಲೆಯನ್ನು ಸಂತೋಷ್ ರಾವ್ ಒಬ್ಬರೇ ಮಾಡಿದ್ದು. ಆರೋಪಿತ ಧರ್ಮಸ್ಥಳದ ಇತರ ಮೂವರ ಕೈವಾಡ ಇಲ್ಲವೆಂದು ಸಿಬಿಐ ಕ್ಲೀನ್‌ಚಿಟ್ ನೀಡಿದ್ದರಿಂದ ಸಾಬೀತಾಗಿದೆ.

ವಾಸ್ತವ : 'ಈ ಕೃತ್ಯ ಒಬ್ಬರು ಮಾತ್ರ ಮಾಡಲು ಸಾಧ್ಯವಿಲ್ಲ, ಒಬ್ಬರಿಗಿಂತ ಹೆಚ್ಚು ಮಂದಿ ಭಾಗಿಗಳಾಗಿದ್ದಾರೆ' ಎಂದು ಪೋಸ್ಟ್‌ಮಾರ್ಟಂ ಮಾಡಿದ ಬೆಳ್ತಂಗಡಿಯ ಹಿರಿಯ ಸರಕಾರಿ ವೈದ್ಯರು ಸಿ.ಬಿ.ಐ ಕೋರ್ಟ್‌ನಲ್ಲಿ ನವೆಂಬರ್ 2016ರಲ್ಲಿ ಪ್ರಮಾಣೀಕರಿಸಿರುತ್ತಾರೆ. ಆದ್ದರಿಂದ ಸಿಬಿಐ ಕ್ಲೀನ್‌ಚಿಟ್ ನೀಡಿದ್ದರೂ ಶಂಕಿತ 3 ಮಂದಿ – ಧೀರಜ್ ಕೆಲ್ಲ, ಮಲ್ಲಿಕ್ ಜೈನ್ ಮತ್ತು ಉದಯ್ ಕುಮಾರ್ – ಇವರಿಗೆ ಆರೋಪಿಗಳಾಗಿ ಪರಿಗಣಿಸಿ ಕೋರ್ಟ್ ಸಮನ್ಸ್ ಜಾರಿಮಾಡಿದೆ. ಆದರೆ ಹೆಗ್ಗಡೆ ಸಂಸ್ಥೆಗಳ ವಕೀಲರೇ ಇದಕ್ಕೆ ಹೈಕೋರ್ಟ್‌ನಿಂದ ತಾತ್ಕಾಲಿಕ ತಡೆಯಾಜ್ಞೆ ಪಡೆದಿದ್ದಾರೆ. ಸಿ.ಬಿ.ಐ. ಕ್ಲೀನ್‌ಚಿಟ್ ನೀಡಿದಕೂಡಲೇ ಧರ್ಮಸ್ಥಳದಲ್ಲಿ ವಿಜಯೋತ್ಸವ ಆಚರಿಸಿದ ಹೆಗ್ಗಡೆ ಬೆಂಬಲಿಗರು ಸೌಜನ್ಯ ತಂದೆತಾಯಿಗಳ, ಸ್ವಾಮೀಜಿಯವರ, ಹೋರಾಟಗಾರರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುವ ಬೆದರಿಕೆ ಹಾಕಿದ್ದು ಇಲ್ಲಿ ಉಲ್ಲೇಖನೀಯ. ಹೆಗ್ಗಡೆ ಕುಟುಂಬದವರಾಗಲೀ, ಎಸ್‌ಡಿಎಂ ಕಾಲೇಜಿನ ಪ್ರಾಂಶುಪಾಲರಾಗಲೀ ಸೌಜನ್ಯಾ ಕೊಲೆ ಬಳಿಕ ಅವರ ಮನೆಗೆ ಸಾಂತ್ವನ ಹೇಳಲು ಭೇಟಿ ಕೊಟ್ಟಿಲ್ಲ ಎಂಬುದೂ ಉಲ್ಲೇಖನೀಯ.

ಹುಸಿ ಪ್ರಚಾರ: ಶ್ರೀಕ್ಷೇತ್ರದಲ್ಲಿ ಆತ್ಮಹತ್ಯೆ ಮಾಡಿದರೆ ಮೋಕ್ಷ ಪ್ರಾಪ್ತಿ ಎಂಬ ನಂಬಿಕೆಯಿಂದಾಗಿ ಇಲ್ಲಿ ಬಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅತ್ಯಾಚಾರ, ದೌರ್ಜನ್ಯ ಕೊಲೆ ಈ ಕ್ಷೇತ್ರದಲ್ಲಿ ಆಗುವುದಿಲ್ಲ.

ವಾಸ್ತವ : ಪೊಲೀಸ್ ದಾಖಲೆ ಪ್ರಕಾರ 2001ರಿಂದ 2011ರ ತನಕ ಈ ಪ್ರದೇಶದಲ್ಲಿ 452 ಆತ್ಮಹತ್ಯೆಗಳಾಗಿವೆ. ಇದರಲ್ಲಿ 96 ಮಹಿಳೆಯರು. ಸೌಜನ್ಯಾ ಅತ್ಯಾಚಾರ–ಕೊಲೆ (9–10–2012) ಬಳಿಕ ವ್ಯಾಪಕ ಪ್ರತಿಭಟನೆ, ಜನಜಾಗೃತಿ, ಎಚ್ಚರಿಕೆಗಳ ಪರಿಣಾಮವಾಗಿ ಇಲ್ಲಿ ಆತ್ಮಹತ್ಯೆ ಕಡಿಮೆ ಆಗಿದೆ! ಸರಕಾರದ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ ನಿಯಂತ್ರಣ ಸಮಿತಿಯ ಅಧ್ಯಕ್ಷ ವಿ.ಎಸ್ ಉಗ್ರಪ್ಪನವರು ಈ ಕುರಿತು ವಿಶೇಷ ತನಿಖಾ ದಳ ರಚಿಸಿ ತನಿಖೆಯಾಗಬೇಕೆಂದು ಜನವರಿ 2016ರಲ್ಲಿ ಶಿಫಾರಸ್ಸು ಮಾಡಿದ್ದು ವರದಿಯಾಗಿದೆ. ಇಲ್ಲಿಯ ನೇತ್ರಾವತಿ ನದಿಯಲ್ಲಿ ಸಿಗುವ ಮಹಿಳೆಯರ ಹೆಣಗಳ ಹಿಂದಿರುವ ಕಥೆಯ ವಸ್ತುನಿಷ್ಠ ಅಧ್ಯಯನ ಮತ್ತು ತನಿಖೆ ನಡೆದರೆ ಅತ್ಯಾಚಾರ, ದೌರ್ಜನ್ಯಗಳು ಅನಾವರಣವಾದೀತು. ಈ ಹಿಂದೆ ಇಲ್ಲಿ ಆಗಿದ್ದ ವೇದವಲ್ಲಿ (ಎಸ್.ಡಿ.ಎಂ ಹೈಸ್ಕೂಲ್ ಅಧ್ಯಾಪಕರು), ಪದ್ಮಾಲತಾ (ಎಸ್.ಡಿ.ಎಂ. ವಿದ್ಯಾರ್ಥಿನಿ), ದೇವಸ್ಥಾನದಲ್ಲಿ ಮಾವುತರಾಗಿದ್ದ ನಾರಾಯಣ ಮತ್ತು ಅವರ ತಂಗಿಯ ಜೋಡಿ ಕೊಲೆಗಳ ಅಪರಾಧಿಗಳನ್ನು ಪೊಲೀಸರಿಂದ, ಸಿಐಡಿಯಿಂದ ಪತ್ತೆ ಮಾಡಿ ಬಂಧಿಸಲು ಆಗಿಲ್ಲ, ಇದರ ಹಿಂದಿರುವ ಕಾಣದ ಕೈಗಳು ಯಾವುದು? ನಿಗೂಢ!

ಹುಸಿ ಪ್ರಚಾರ: ಹೆಗ್ಗಡೆಯವರು ರಾಜ್ಯದ ನೂರಾರು ದೇವಾಲಯಗಳನ್ನು, ಜೈನ ಬಸದಿಗಳನ್ನು ಜೀರ್ಣೋದ್ಧಾರ ಮಾಡುತ್ತಿದ್ದಾರೆ. ಧರ್ಮಸ್ಥಳ ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆಗೆ ಹೋದರೆ ಇದು ಸಾಧ್ಯವಾಗುವುದಿಲ್ಲ.

ವಾಸ್ತವ : ದೇವಸ್ಥಾನಗಳ ಜೈನ ಬಸದಿಗಳ ಜೀರ್ಣೋದ್ಧಾರಕ್ಕೆ ಹೆಗ್ಗಡೆಯವರ ಧರ್ಮೋತ್ಥಾನ ಟ್ರಸ್ಟ್‌ಗೆ ರಾಜ್ಯ ಸರಕಾರ 40% ಮತ್ತು ಸ್ಥಳೀಯ ಜೀರ್ಣೋದ್ಧಾರ ಸಮಿತಿ 20% ನೀಡುತ್ತಾರೆ. ಧರ್ಮಸ್ಥಳದ ಪಾಲು 40% ಮಾತ್ರ.! ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಧರ್ಮಸ್ಥಳ ದೇವಸ್ಥಾನ ಬಂದರೆ ಈಗ ಹೆಗ್ಗಡೆಯವರು ಕೊಡುತ್ತಿರುವ ಹಣದ 2–3 ಪಟ್ಟು ಹಣ ಜೀರ್ಣೋದ್ಧಾರಗಳಿಗೆ ಲಭ್ಯವಾಗುತ್ತದೆ.

ಹುಸಿ ಪ್ರಚಾರ: ಹೆಗ್ಗಡೆಯವರು ಬ್ರಹ್ಮ ಕಲಶೋತ್ಸವಗಳಿಗೆ, ಪ್ರತಿಷ್ಠಾಪನೆಗಳಿಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಲಕ್ಷಗಟ್ಟಲೆ ಹಣ ದಾನ ಕೊಡುತ್ತಾರೆ. ಧಾರ್ಮಿಕ ದತ್ತಿ ಇಲಾಖೆಯಿಂದ ಹೀಗೆ ದಾನ ಕೊಡಲು ಸಾಧ್ಯವಿಲ್ಲ.

ವಾಸ್ತವ : ಧರ್ಮಸ್ಥಳ ದೇವಸ್ಥಾನದಿಂದ ವರ್ಷಕ್ಕೆ ಸುಮಾರು 75–80 ಸಂಸ್ಥೆಗಳಿಗೆ ತಲಾ ರೂ: 50 ಸಾವಿರದಿಂದ 10 ಲಕ್ಷ ತನಕ, ಒಟ್ಟು ಸುಮಾರು ರೂ: 3ರಿಂದ4 ಕೋಟಿ ದಾನ ಮಾಡುವ ವರದಿ ಕಂಡುಬರುತ್ತದೆ. ಅಂದರೆ, ದೇವಸ್ಥಾನದ ಒಟ್ಟು ಆದಾಯದ 1 ರಿಂದ 2% ಮಾತ್ರ ! ಈ ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆಗೆ ಬಂದರೆ ದೇವಸ್ಥಾನದ ಆದಾಯದ 10% ತನಕ ಇಲಾಖೆಯ 'ಸಾಮಾನ್ಯ ನಿಧಿ'ಗೆ ವರ್ಗಾವಣೆಯಾಗಿ ಇದನ್ನು ಹಿಂದೂ ಧಾರ್ಮಿಕ ಕಾರ್ಯಗಳಿಗೆ ಧಾರ್ಮಿಕ ಪರಿಷತ್ ನಿರ್ಣಯಿಸಿ ವಿನಿಯೋಗ ಮಾಡಲು ಕಾಯ್ದೆಯಲ್ಲಿ ಅವಕಾಶವಿದೆ.

ಹುಸಿ ಪ್ರಚಾರ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರಾಜ್ಯದ 35 ಲಕ್ಷ ಕುಟುಂಬಗಳ ಬಡತನ ನಿರ್ಮೂಲನೆಯಾಗಿದೆ. ಇವರು ಸ್ವಾವಲಂಬಿಗಳ[...] ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ವಾಸ್ತವ : ಸ್ವಸಹಾಯ ಸಂಘಗಳ ಮೂಲಕ [...] ಕೊಡುವುದಷ್ಟೇ ಈ ಯೋಜನೆಯ ಮುಖ್ಯ [...] ಮಂಜುನಾಥಸ್ವಾಮಿ ಮೇಲಿನ ಭಕ್ತಿಯಿಂದ[...] ಹೆಗ್ಗಡೆಯವರು ಬೆಳೆಸಿದ ಇಮೇಜ್‌ನಿಂದಾಗಿ ಆರಂಭ[...] ಸಂಘಕ್ಕೆ ಸೇರುತ್ತಾರೆ. ಕ್ರಮೇಣ ಇದೊಂದು ಮೀ[...] ಬಡ್ಡಿ ಯೋಜನೆ ಎಂದು ಗೊತ್ತಾಗಿ ಗೊಣಗು[...] ಸಿಬ್ಬಂದಿಗಳಿಂದ ನಿಯಂತ್ರಿತ ಈ ಯೋಜನೆಗೆ [...] ಪರಾವಲಂಬಿಗಳಾಗುತ್ತಿದ್ದಾರೆ. ಬೆಳ್ತಂಗಡಿ ತಾಲೂಕಿನಲ್ಲಿ [...] ಯೋಜನೆ ಬರೇ ಬಡ್ಡಿ ವ್ಯವಹಾರವೆಂದು ಎಲ್ಲರಿ[...] ತಿಳಿದಿದೆ. ಆದ್ದರಿಂದಲೇ ಹೆಗ್ಗಡೆ ಬೆಂಬಲಿಗರು ಉಜಿರೆ[...] (16.10.2013) ಮತ್ತು ಗುರುವಾಯನಕೆರೆ[...] (30.09.15) ಸಂಘಟಿಸಿದ ಪ್ರತಿಭಟನಾ ಸಭೆಯಲ್ಲಿ ನಿ[...] ಜನ ಸೇರಿಸಲು ಸಾಧ್ಯವಾಗದೆ ವಿಫಲವಾಯಿತು. ಉಡುಪಿ ಜಿಲ್ಲೆಯಲ್ಲೂ ಈಗ ಗೊತ್ತಾಗಿದೆ. ಇತರ ಜಿಲ್ಲೆ[...] ಮಂಜುನಾಥಸ್ವಾಮಿಯ ಮೇಲಿನ ಶ್ರದ್ಧೆ ಭಕ್ತಿ[...] ಆಧರಿಸಿ ಇವರ ಯೋಜನೆ ಬೆಳೆದಿದ್ದು ಪ್ರಭಾವ [...] ಧರ್ಮಸ್ಥಳದ ಯೋಜನೆಯೊಂದಿಗೆ. ಸರ[...] ಯೋಜನೆಗಳನ್ನೂ ಸೇರಿಸಿ (ಉದಾ: ಕೃಷಿ ಯಂತ್ರ ಬಾ[...] ಅದರ ಕೀರ್ತಿಯನ್ನೂ ತಾನು ಪಡೆಯುತ್ತಿ[...] ಮಾಧ್ಯಮದಲ್ಲಿ ಭಾರೀ ಪ್ರಚಾರ ಮಾಡುವುದರಿಂದ ವಿ[...] ಅದ್ಭುತ ಕೆಲಸ ಮಾಡುತ್ತಿದ್ದಾರೆಂಬ ಭ್ರಮೆ ಸೃಷ್ಟಿಯಾಗು[...] ಹೆಗ್ಗಡೆಯವರನ್ನು ದೇವಮಾನವರೆ[...] ವೈಭವೀಕರಿಸಲಾಗುತ್ತಿದೆ. ವಾಸ್ತವ ಈಗೀಗ ಅನಾ[...] ಆಗುತ್ತಿದೆ.

'ಧರ್ಮಸ್ಥಳದ 'ಮೀಟರ್ ಬಡ್ಡಿ ಬೆಟ್ಟ' 30 [...] ಕೋಟಿ ವ್ಯವಹಾರದ ಒಡಲಾಳದ ಕತೆ!' ಶೀರ್ಷಿ[...] ಲೇಖನ samachara.com ನಲ್ಲಿ ಪ್ರಕಟವಾ[...] ಮಿತಿಮೀರಿದ ಬಡ್ಡಿಯಿಂದಾಗಿ ಸಂಘದ ಸಾಲ ಮರುಪಾ[...] ತಡವಾದ್ದಕ್ಕೆ ಬಡದಲಿತರೊಬ್ಬರ ಮನೆ ಬಳಿಯ ಮರ[...] ಜಪ್ತಿಮಾಡಿ ಕತ್ತರಿಸಿ ಕೊಂಡೊಯ್ದು ಸಾಲ ವ[...] ಮಾಡಿದ ಪ್ರಕರಣ ಕಾರ್ಕಳ (ಉಡುಪಿ ಜಿಲ್ಲೆ) ಪೊಲೀ[...] ಠಾಣೆಯಲ್ಲಿ 28.10.13ರಂದು ದಾಖಲಾಗಿತ್ತು, ಇಂ[...] ಹಲವು ಪ್ರಕರಣಗಳು ಬೆಳಕಿಗೆ ಬರುತ್ತಿದೆ.

ಹುಸಿ ಪ್ರಚಾರ: ಹೆಗ್ಗಡೆಯವರು ಪತ್ರಿಕಾಗೋಷ್ಠಿ[...] ಹೇಳಿದ ಪ್ರಕಾರ ಸ್ವಸಹಾಯ ಸಂಘಗಳಿಗೆ 26% [...] ಬಡ್ಡಿ ವಿಧಿಸಲು SKDRDPಗೆ ಭಾರತೀಯ ರಿ[...] ಬ್ಯಾಂಕ್‌ನ (RBI) ಅನುಮತಿ ಇದೆಯಾದರೂ [...] 18% ಮಾತ್ರ ವಿಧಿಸುತ್ತಾರೆ.

ವಾಸ್ತವ : ಕಂಪೆನಿ ಕಾಯಿದೆಯಡಿ ನೋಂದಾ[...] ಕಂಪೆನಿಗಳಿಗೆ ಮಾತ್ರ ಶೇ 26ವರೆಗೆ ಬಡ್ಡಿ [...] ಲೇವಾದೇವಿ ನಡೆಸಲು ಭಾರತೀಯ ರಿಸರ್ವ್ ಬ್ಯಾ[...] (RBI) ಅನುಮತಿ ನೀಡುತ್ತದೆ. ಯಾವುದೇ ಸ್ವಯಂಸೇ[...] ಸಂಸ್ಥೆಗಳಿಗೆ (NGO) ಈ ಅನುಮತಿ ನೀಡಿಲ್ಲವೆ[...] ಮಾಹಿತಿ ಹಕ್ಕು ಪ್ರಕಾರ RBI ತಿಳಿಸಿದೆ. ಸುಮ[...] 8% ಕ್ಕೆ ಬ್ಯಾಂಕ್‌ಗಳಿಂದ ಸಾಲ ಪಡೆದು 18.96[...] ಬಡ್ಡಿ - 1% processing fee ವಿಧಿಸಿ (M[...] Consultingನ Code of Condu[...] Compliance Assessment-SKDRD[...] ಬಡವರಿಗೆ ಸಾಲ ಕೊಟ್ಟು ಲಾಭ ಮಾಡಲಾಗು[...] ಬಡವರಿಂದ ಹೆಚ್ಚು ಬಡ್ಡಿ ಕಿತ್ತು ಇದನ್ನು ತಾನು ದಾನ[...] ತನ್ನ ವೈಯಕ್ತಿಕ ವೈಭವೀಕರಣ ಮಾಡುವುದು ಯ[...] ಧರ್ಮ. 'SKDRDP 19'ಕ್ಕೂ ಮೀರಿದ ಬಡ್ಡಿ ವಿಧಿಸಿ[...] ಕಾನೂನು ಉಲ್ಲಂಘನೆ ಮತ್ತು ಶಿಕ್ಷಾರ್ಹ ಅಪರಾಧ[...] ಬೆಳ್ತಂಗಡಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ರಂಜನ್ ರಾ[...] ಯಡೂರ್ ಇವರು ಈ ಸಂಬಂಧ ಕ್ರಿಮಿನಲ್ ದೂ[...] ದಾಖಲಿಸಿದ್ದಾರೆ. (P.C. 14/16. ತಾತ್ಕಾಲಿಕ ತಡೆಯಾ[...] ಇದೆ.)

ಹುಸಿ ಪ್ರಚಾರ: ಶ್ರೀಕ್ಷೇತ್ರದಿಂದ ಅಪಾರ[...] ದಾನಧರ್ಮ ಮಾಡಲಾಗುತ್ತಿದೆ. ಶಿಕ್ಷಣಕ್ಕೆ ಸ್ಕಾಲರ್‌ಶಿ[...] ಶಾಲಾಕೊಠಡಿಗಳಿಗೆ ಪೀಠೋಪಕರಣಗಳಿಗೆ, ಸ್ಮಶಾನ[...] ಮಿಲ್ಕ್ ಸೊಸೈಟಿಗಳಿಗೆ, ಶೌಚಾಲಯಗಳಿಗೆ, ಮದ್ಯವ[...] ಶಿಬಿರಕ್ಕೆ, ಶಿಕ್ಷಕರಿಗೆ ಗೌರವಧನ, ಸಾಮೂಹಿಕ ವಿವಾ[...] ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ, ಧಾರ್ಮಿಕ– ಸಾಂಸ್ಕೃ[...] ಕಾರ್ಯಗಳಿಗೆ ಹಾಗೂ ವೈಯಕ್ತಿಕ ಸಹಾಯ [...] ಮಾಡುತ್ತಿದ್ದಾರೆ.

ವಾಸ್ತವ : ಕ್ಷೇತ್ರದಿಂದ ನೀಡುವ ಈ [...] ದೇಣಿಗೆಗಳನ್ನು ಒಟ್ಟು ಮಾಡಿದರೆ ವರ್ಷಕ್ಕೆ ರೂ. 40-[...] ಕೋಟಿ ಆಗಬಹುದು. ಅಂದರೆ ದೇವಸ್ಥಾನದ ನಿವ್ವ[...] ಆದಾಯದ 15% ಆಸುಪಾಸು ಆಗಬಹುದು! [...] ಮೀಟರ್ ಬಡ್ಡಿ ಮೈಕ್ರೋಫೈನಾನ್ಸ್‌ನ ಲಾಭ / ಕಮಿಷ[...] ವಾರ್ಷಿಕ ರೂ. 55 ಕೋಟಿ ವೀರೇಂ[...] (2012–2013ರಲ್ಲಿ ಇದರ ಬ್ಯಾಲೆನ್ಸ್ ಶೀಟ್ ಪ್ರಕಾ[...] ಲಾಭ ರೂ: 89,8353681.14) ಮಸ್ತರೂಪದಲ್ಲಿ ಕ್ಷೇ[...] ಬರುವ ಅಕ್ಕಿ, ಧಾನ್ಯ, ತರಕಾರಿಗಳಿಗೆ ಲೆಕ್ಕವೇ [...]

▶▶ 15

ದ್ಯವರ್ಜನ ಶಿಬಿರಗಳ ಖರ್ಚು
ಗುತ್ತವಾಗುವ ಮೊತ್ತ ಸಾಕಷ್ಟಿದೆ.
ಸಾಕಷ್ಟಿವೆ.

ಗ್ಗಡೆಯವರು ತಮ್ಮ ಸಂಸ್ಥೆಗಳ
ನೋಡಿಕೊಳ್ಳುತ್ತಾರೆ. ಎಲ್ಲಾ
ಕ ಸೌಲಭ್ಯಗಳೆಲ್ಲಾ ನೀಡುತ್ತಾರೆ.
ಡಿಆರ್‌ಡಿಪಿಯ ನೌಕರರಿಗೆ
ಾಗಿ ಪಾವತಿಸದೆ ಇದ್ದುದರಿಂದ
ಕೋಟಿ ಹೆಚ್ಚುವರಿ ಪಾವತಿಗೆ
ವರ P.F ವೆಬ್‌ಸೈಟ್‌ನಲ್ಲಿದೆ).
ಕಾಂಟ್ರಾಕ್ಟ್ ನೌಕರರು ಮತ್ತು
ತೀರಾ ಕಡಿಮೆ, ಸೌಲಭ್ಯಗಳು
ನೌಕರಿ ಬಿಟ್ಟು ಬೇರೆ ಕಡೆ
ಎಂದು ಹೇಳಲಾಗಿದೆ.

ೆಯವರ ಸಂಸ್ಥೆಗಳಿಗೆ ಸರಕಾರದ
ನುದಾನಗಳೆಲ್ಲವೂ ಅರ್ಹತೆಯ

ದ ಎಸ್‌ಡಿಎಂ ಕಾಲೇಜ್ ಆಫ್
ಬ್ಯಾಂಕ್ ನೆರವಿನ ರೂ: 1.60
ಸುಳ್ಳು ಹಾಜರಾತಿ ಪುಸ್ತಕ,
ಅದೇ ಕಾಲೇಜಿನಲ್ಲಿ 30 ವರ್ಷ
ಿ.ಜೋಷಿ 2014ರಲ್ಲಿ ದೂರು
ರಿಂದಲೂ ತನಿಖೆಯಾಗುತ್ತಿದೆ.
Action Committee ಈ
. ವಿವರಗಳು ವೆಬ್‌ಸೈಟ್‌ನಲ್ಲಿದೆ.
ಮಾಹಿತಿ ಆಯುಕ್ತರು ಈ
ರ್‌ರಿಗೆ ಮಾಹಿತಿ ನೀಡಲು
ದೇಶಿಸಿದೆ. ಯುಜಿಸಿ ಮತ್ತು
ಪಡೆಯುವ ಸಂಸ್ಥೆಗಳು ಮಾಹಿತಿ
ುತ್ತದೆಂದು, ಮಾಹಿತಿ ನೀಡಲು
ಳಿತಕ್ಕೆ ಮಾಹಿತಿ ಆಯುಕ್ತರು
ಿಸಿದ್ದಾರೆ.

ಲಿತರ ಬಗ್ಗೆ ಹೆಗ್ಗಡೆಯವರಿಗೆ

ಯೋಜನೆಯ ನೌಕರರಲ್ಲಿ
ಎಂದು ಬಹಳಷ್ಟು ಆರೋಪ
ಕೆಲವರನ್ನು ನೇಮಿಸಿದ್ದಾರೆ.
ದ ವಿಶ್ವ ತುಳು ಸಮ್ಮೇಳನದಲ್ಲಿ
ತ್ತು, ಆದ್ದರಿಂದ ನಾಗರಿಕ ಸೇವಾ
ಡಕಟ್' ಆಶ್ರಯದಲ್ಲಿ ನಡೆದ
ಟ್ಟದ 'ತುಳುವರ ಪರ್ಬ'ವನ್ನು
ಟರಿಸಲಾಯ್ತು. ಹೆಗ್ಗಡೆ ಸಂಸ್ಥೆ
ನಾಗಿ ಪಡೆದ 43.90 ಎಕ್ರೆ
ಪರ್ಯಾಯ ಭೂಮಿ ಸಿಕ್ಕಿಲ್ಲ
ು ಹೊಂದಿರುವ (ಅದೂ,
ಇವರು ತಾವಾಗಿ ದಲಿತರಿಗೆ
ುವುದು ನೈತಿಕ ಧರ್ಮವಲ್ಲವೇ?
ವಂಚಿತ ದಲಿತರ ಪಾಡು
ಲೆ ಸ್ಥಳಕ್ಕೆ ಎತ್ತಂಗಡಿ ಮಾಡುವ
ಇಲ್ಲಿಯ ದಲಿತರ ನೂರಾರು
ಸುಧಾರಿಸಬೇಕಾಗಿದೆ.

ಯವರ ಎಲ್ಲಾ ವ್ಯವಹಾರಗಳು
ಾಗಿದೆ. ಅವರ ವಿಚಾರ ಮತ್ತು

ಯಕ್ತಿಕ ಆದಾಯ ಎಲ್ಲಿಂದ,
ಕಟ್ಟುತ್ತಾರೆಯೇ? ದೇವಸ್ಥಾನದ
ುಟುಂಬದವರ ಆದಾಯ-ಆಸ್ತಿ
ರು, ಅಳಿಯ ಹೊಂದಿರುವ
ಷ್ಟು? ಇವುಗಳಿಗೆ ಬಂಡವಾಳ
ವರ ಕುಟುಂಬದ ಪಿತ್ರಾರ್ಜಿತ
ಷ್ಟು? ರಾಜಕೀಯ ಪಕ್ಷಗಳಿಗೆ,
ಗೆ ಇವರು ಭಾರೀ ದೇಣಿಗೆ
ಪಗಳಿವೆ. ಸರಕಾರದಿಂದ,
ಂದ, ವಿವಿಧ ಕಂಪೆನಿಗಳಿಂದ,
ಗ್ಗಳಿಂದ ಇವರಿಗೆ ಬಂದ
ವಿವರ ಬಹಿರಂಗಪಡಿಸಿಲ್ಲ.
ಸಾ ಪೈಸಾ ಲೆಕ್ಕ ಜನರ
ಮಠ ಜನರ ಮುಂದೆ ಲೆಕ್ಕ
ುವರೇಕೆ ಇಡುತ್ತಿಲ್ಲ? ಇದು
ಸ್ಥಾನದ ಹಣವನ್ನು ಇವರು
ಆರೋಪ ಬರಲು ಕಾರಣ
ವರ ಆಚಾರಕ್ಕೂ-ವಿಚಾರಕ್ಕೂ
ಕಾನೂನು ಪಾಲಿಸಬೇಕು
ಇವರು ಸುಳ್ಳು ಹೇಳಿಕೆಗಳನ್ನು
ಮಾಡಿ ಪ್ರೂಡಾರು...

ಆಚಾರ? ಧಾರ್ಮಿಕ ಕ್ಷೇತ್ರದಲ್ಲಿ ಅತ್ಯುನ್ನತ ಸ್ಥಾನದಲ್ಲಿರುವ ಪದ್ಮವಿಭೂಷಣರ ಆಸ್ತಿ-ಆದಾಯ ಖಾಸಗಿಯಾದರೂ ಇದನ್ನು ಪ್ರಕಟಿಸಿ ಪಾರದರ್ಶಕವಾಗಿದ್ದು ಜನರ ಸಂಶಯ ನಿವಾರಣೆ ಮಾಡಬೇಕು.

ಹುಸಿ ಪ್ರಚಾರ: ಚತುರ್ದಾನಗಳಾದ ಅನ್ನದಾನ, ವಿದ್ಯಾದಾನ, ಆರೋಗ್ಯ ದಾನ ಮತ್ತು ಅಭಯ ದಾನ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತದೆ. ಇದು ಎಲ್ಲಾ ದೇವಸ್ಥಾನಗಳಿಗೆ ಮಾದರಿ.

ವಾಸ್ತವ : 1. ಅನ್ನದಾನ : ಕ್ರಮಸಂಖ್ಯೆ 11 ನೋಡಿರಿ.

2. ವಿದ್ಯಾ ದಾನ : ಕ್ರಮಸಂಖ್ಯೆ 10 ನೋಡಿರಿ.

3. ಆರೋಗ್ಯ ದಾನ: ಇವರ ಆರೋಗ್ಯ ಸುರಕ್ಷಾ ಯೋಜನೆ ಇನ್ಶೂರೆನ್ಸ್ ಕಂಪೆನಿಗಳದ್ದು. ಇವರ ಸಂಘದ ಸದಸ್ಯರೆಲ್ಲರೂ ಕಡ್ಡಾಯವಾಗಿ ಪ್ರೀಮಿಯಂ ಕಟ್ಟಿ ಇದಕ್ಕೆ ಸೇರಬೇಕು. ಇಂತಹ ಯೋಜನೆ ಇತರ ಆಸ್ಪತ್ರೆಗಳೂ ಮಾಡುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೆಎಂಸಿ, ಎ ಜೆ ಶೆಟ್ಟಿ, ಯೆನಪೋಯ, ಕಂಕನಾಡಿ ಆಸ್ಪತ್ರೆಗಳು ನೀಡುವ ಆರೋಗ್ಯ ಸೇವೆಗೆ ಹೋಲಿಸಿದರೆ ದೇವಸ್ಥಾನದ ಹಿನ್ನೆಲೆ ಇರುವ ಇವರದ್ದೇನೂ ಸಾಲದು.

4. ಅಭಯ ದಾನ : ಸೌಜನ್ಯಾ ಕೊಲೆ ಸಂದರ್ಭದಲ್ಲಿ ಮತ್ತು ಅನಂತರ ಆದ ಭಾರೀ ಪ್ರತಿಭಟನೆಗಳಲ್ಲಿ, ಹಕ್ಕೊತ್ತಾಯ ಸಭೆಯಲ್ಲಿ ಅಷ್ಟೊಂದು ಜನರು ಸಿಡಿದೆದ್ದು ಭಾಗವಹಿಸಲು ಕಾರಣ ಹೆಗ್ಗಡೆ ಬೆಂಬಲಿಗರು ಇಡೀ ಸಮಾಜವನ್ನು ದಶಕಗಳಿಂದ ಭಯದಲ್ಲಿ ಮುಳುಗಿಸಿದ್ದು. ಹೆಗ್ಗಡೆ ಕುಟುಂಬದವರ ಬಗ್ಗೆ ಸಮಾಜದಲ್ಲಿ ಗೌರವಕ್ಕಿಂತಲೂ ಭಾರೀ 'ಭಯ' ಇದೆ. ಕರಾವಳಿ ಅಲೆ ಪತ್ರಿಕೆಯ ಕಚೇರಿ ಧ್ವಂಸ, ಲಂಕೇಶ್ ವಾರ ಪತ್ರಿಕೆ ಕಚೇರಿ ಮೇಲೆ ಆಕ್ರಮಣ, ಪತ್ರಿಕೆಗಳ ಬಂಡಲ್ ಸುಡುವುದು, 'ಡಿ' ಅನುಮತಿ ಇಲ್ಲದೆ ಧರ್ಮಸ್ಥಳದಲ್ಲಿ ವಾಹನ ಬಾಡಿಗೆ ಮಾಡುವವರಿಗೆ ಬೆದರಿಕೆ, 'ಆತ್ಮಹತ್ಯೆ'ಗಳ ಹಿಂದಿರುವ ಭಯಾನಕ ಕಥೆಗಳು-ಈ ಎಲ್ಲಾ ಕಾರಣದಿಂದ ಭಯದಿಂದಲೇ ಎಲ್ಲರೂ ಬಾಯ್ಮುಚ್ಚಿದ್ದಾರೆ ಎಂದು ಹೇಳಲಾಗಿದೆ. ಉಜಿರೆ ಧರ್ಮಸ್ಥಳ ರಸ್ತೆ ಬದಿಯ ಒಬ್ಬ ಬಡವರ ಮನೆ ಮತ್ತು ಸ್ಥಳವನ್ನು ತುಂಬಾ ಕಡಿಮೆ ಬೆಲೆಗೆ ಹೆಗ್ಗಡೆ ಬೆಂಬಲಿಗರು ಕೇಳಿದಾಗ ಅವರು ಒಪ್ಪದ್ದಕ್ಕೆ ಅವರ ಮನೆಯ ದಾರಿ ಬಂದ್ ಮಾಡಿಸಲು ಬಂದಾಗ ಅದನ್ನು ನಾಗರಿಕ ಸೇವಾ ಟ್ರಸ್ಟ್‌ನಿಂದ 2010ರಲ್ಲಿ ತಡೆಯಲಾಯ್ತು (ದಾಖಲೆ ಇದೆ). ಇವರ ಬಗ್ಗೆ ಸತ್ಯ ಮಾತಾಡಿದರೆ ಪೊಲೀಸ್ ಬಳಸಿ ಕೇಸ್ ಹಾಕಿಸುವುದು, ಮಾನನಷ್ಟ ಕೇಸ್ ಹಾಕುವುದು, ಬೆದರಿಕೆ ಹಾಕುವುದು ಮಾಮೂಲಿ. ಅಭಯ ದಾನ ಎಲ್ಲಿದೆ?

ಹುಸಿ ಪ್ರಚಾರ: ಹೆಗ್ಗಡೆಯವರು ಧರ್ಮಸ್ಥಳ ಮತ್ತು ಉಜಿರೆಯಲ್ಲಿ ತಮ್ಮ ಕಟ್ಟಡಗಳ ತೆರಿಗೆಯನ್ನು ಪರಿಪೂರ್ಣವಾಗಿ ಪಂಚಾಯತ್‌ಗೆ ಪಾವತಿಸುತ್ತಾರೆ.

ವಾಸ್ತವ : ಇವರ ಕುಟುಂಬ ಮತ್ತು ಸಂಸ್ಥೆಗಳ 500ಕ್ಕೂ ಮಿಕ್ಕಿ ಸಣ್ಣ-ದೊಡ್ಡ ಕಟ್ಟಡಗಳಿಗೆ ಪಂಚಾಯತ್‌ಗಳು ನಿಯಮಾನುಸಾರ ತೆರಿಗೆ ವಿಧಿಸಿದರೆ ತುಂಬಾ ಹೆಚ್ಚು ಕಟ್ಟಬೇಕಾಗುತ್ತದೆ. ಇವರು ಕಟ್ಟುತ್ತಿರುವುದು ಕಡಿಮೆ. ನಮ್ಮ ದೂರಿನ ಬಳಿಕ ಕ್ರಮ ಪ್ರಕಾರ ತೆರಿಗೆ ವಿಧಿಸಲು ಜಿಲ್ಲಾ ಪಂಚಾಯತ್ ಗ್ರಾಮ ಪಂಚಾಯತ್‌ಗೆ 2010ರಲ್ಲಿ ಸೂಚಿಸಿದೆ. (ಪತ್ರದ ಪ್ರತಿ ಇದೆ) ಭಾರೀ ಆದಾಯ ಇರುವ ಇವರೇ ಸರಿಯಾದ ತೆರಿಗೆ ವಿಧಿಸಲು ತಾವಾಗಿಯೇ ಪಂಚಾಯತ್‌ಗೆ ಹೇಳಬೇಕಿತ್ತು. (ತೆರಿಗೆಯ ವಿವರಗಳೆಲ್ಲಾ ಮಾಹಿತಿ ಹಕ್ಕಿನಲ್ಲಿ ಪಡೆದಿದ್ದೇವೆ.)

ಹುಸಿ ಪ್ರಚಾರ: ಧರ್ಮಸ್ಥಳದಿಂದ ರಿಕ್ಷಾ, ಜೀಪ್‌ಗಳನ್ನು ಬಾಡಿಗೆಗೆ ಓಡಿಸಲು ಹೆಗ್ಗಡೆಯವರು 'ಡಿ' ಅನುಮತಿ ನೀಡುವುದು ಶಿಸ್ತುಬದ್ಧ ವ್ಯವಸ್ಥೆಗಾಗಿ.

ವಾಸ್ತವ : ಧರ್ಮಸ್ಥಳದಲ್ಲಿ 'ಪೂಜ್ಯ ಖಾವಂದರು' ದಯಪಾಲಿಸುವ ಕಾನೂನು ಬಾಹಿರ 'ಡಿ' ಅನುಮತಿ ಪದ್ಧತಿಯ ಕುರಿತು ಆಕ್ಷೇಪ ಅರ್ಜಿಯ ವಿಚಾರಣೆಯನ್ನು ಪುತ್ತೂರು ಸಹಾಯಕ ಆಯುಕ್ತರು, ಬೆಳ್ತಂಗಡಿ ತಹಸೀಲ್ದಾರರು ಮತ್ತು ಬಂಟ್ವಾಳ ಸಹಾಯಕ ಪೊಲೀಸ್ ಅಧೀಕ್ಷಕರ ಉಪಸ್ಥಿತಿಯಲ್ಲಿ 1-9-2015ರಂದು ನಡೆಸಿ, ಗ್ರಾಮ ಪಂಚಾಯತ್‌ನಿಂದ 'ಡಿ' ನಂಬರ್ ಕೊಡಲು ಕ್ರಮ ವಹಿಸುವಂತೆ ಆದೇಶಿಸಿದ್ದಾರೆ. ಈ ಖಾಸಗಿ ಪದ್ಧತಿ ಇವರ ಕುಟುಂಬದ ಸಾರ್ವಭೌಮತ್ವದ ಪದ್ಧತಿಯಾಗಿತ್ತೆಂದು ಹೇಳಲಾಗಿದೆ. ಶಿಸ್ತುಬದ್ಧ ವ್ಯವಸ್ಥೆಯ ಕರ್ತವ್ಯ ಪೊಲೀಸ್ ಇಲಾಖೆದ್ದು, ಸರಕಾರದ್ದು, ಖಾಸಗಿಯವರಿಗೆ ಈ ಅಧಿಕಾರ ಇಲ್ಲ. ಧರ್ಮಸ್ಥಳದಲ್ಲಿರುವ ಯಾವುದೇ ಸ್ಥಳ (ಖಾಸಗಿ / ಸರಕಾರಿ) ಹೆಗ್ಗಡೆ ಅನುಮತಿ ಇಲ್ಲದೆ ಪರಭಾರೆ ಕೂಡದು ಎಂಬ ಅಲಿಖಿತ 'ಕಾನೂನು' ಇನ್ನೂ ಇದೆ ಎಂದು ಹೇಳಲಾಗುತ್ತಿದೆ.

ಹುಸಿ ಪ್ರಚಾರ: ಧರ್ಮಸ್ಥಳದಲ್ಲಿ ಕಳ್ಳತನ, ಆತ್ಮಹತ್ಯೆ ಅತ್ಯಾಚಾರ, ಕೊಲೆ ಆಗುವುದಿಲ್ಲ, ಆದ್ದರಿಂದ ಇಲ್ಲಿ ಪೊಲೀಸ್ ಸ್ಟೇಷನ್ ಅಗತ್ಯ ಇಲ್ಲ.

ವಾಸ್ತವ : ಇತರ ಕ್ಷೇತ್ರಗಳಂತೆಯೇ ಇಲ್ಲಿಯೂ ಕ್ರಿಮಿನಲ್ ಪ್ರಕರಣಗಳು ಆಗುತ್ತವೆ. ಅತೀಹೆಚ್ಚು ಆತ್ಮಹತ್ಯೆಗಳಾಗುತ್ತವೆ. ಅತ್ಯಾಚಾರಗಳಾದರೂ ದಾಖಲಾಗುವುದಿಲ್ಲ ಎಂದು ಜನರಾಡುತ್ತಾರೆ. ಸೌಜನ್ಯಾ ಕೊಲೆ ಬಳಿಕ ಹೆಚ್ಚಿದ ಒತ್ತಡಗಳಿಂದಾಗಿ 2015ರಲ್ಲಿ ಸರಕಾರ ಇಲ್ಲಿ ಪೂರ್ಣ ಪ್ರಮಾಣದ ಪೊಲೀಸ್ ಠಾಣೆ ಸ್ಥಾಪಿಸಿತು. ಹೆಗ್ಗಡೆಯವರ ಅಸಹಕಾರದಿಂದಾಗಿಯೇ ಇಲ್ಲಿ ಪೊಲೀಸ್ ಸ್ಟೇಷನ್ ಸ್ಥಾಪನೆ ವಿಳಂಬವಾಯ್ತು ಎಂದು ಸ್ಥಳೀಯರು ಹೇಳುತ್ತಾರೆ.

ಹುಸಿ ಪ್ರಚಾರ: ಹೆಗ್ಗಡೆಯವರದ್ದು ಸ್ವಚ್ಛ ಜೀವನ, ಸ್ವಚ್ಛ ವ್ಯವಹಾರ, ಇವರಲ್ಲಿ, ಇವರ ಸಂಸ್ಥೆಗಳಲ್ಲಿ ಕಪ್ಪು ಹಣ ಇಲ್ಲ, ಬೇನಾಮಿ ಆಸ್ತಿ ಇಲ್ಲ, ಅದರ ಅಗತ್ಯವೂ ಇವರಿಗಿಲ್ಲ.

ವಾಸ್ತವ : ಚುನಾವಣೆಗಳಲ್ಲಿ ಇವರು ರಾಜಕಾರಣಿಗಳಿಗೆ, ಪಕ್ಷಗಳಿಗೆ, ಅಭ್ಯರ್ಥಿಗಳಿಗೆ ದೇಣಿಗೆ ನೀಡುವುದು ಗುಟ್ಟೇನಲ್ಲ. ಬೇನಾಮಿ ಆಸ್ತಿಗಳೂ ಇದ್ದು ಈ ಬಗ್ಗೆ ತನಿಖೆಯಾಗುತ್ತಿದೆ. ಇವರ ಬಲಗೈಯಂತಿದ್ದ ನೇಮಿರಾಜ ಕೊಂಡೆ ದಂಪತಿಗಳನ್ನು ವಜ್ರದ ಮಾಲೆ ಕದ್ದ ಆರೋಪದಲ್ಲಿ ಧರ್ಮಸ್ಥಳದಿಂದ ಹೊರದೂಡಿದ್ದು, ಅನಂತರ ಅದು ಸಿನಿಮಾ ತಾರೆಯಲ್ಲಿ ಪತ್ತೆಯಾದ್ದು ಜಗಜ್ಜಾಹೀರು. ಇಂತಹ ಚಿನ್ನ-ವಜ್ರಾಭರಣಗಳು ಲೆಕ್ಕವಿಲ್ಲದಷ್ಟು. ಬೆಳ್ತಂಗಡಿ ಸಿಂಡಿಕೇಟ್ ಬ್ಯಾಂಕ್ ಕಟ್ಟಡ, ಸ್ಟೇಟ್ ಬ್ಯಾಂಕ್ ಕಟ್ಟಡ, ಮಂಗಳೂರು, ಪುತ್ತೂರು, ಉಡುಪಿ, ಬೆಂಗಳೂರು ಮತ್ತಿತರ ಕಡೆ ಇವರು ಹೊಂದಿರುವ ಸ್ಥಳ, ಬಾಡಿಗೆಗೆ ಕೊಡುವ ಕಟ್ಟಡಗಳ, ರಾಜ್ಯಾದ್ಯಂತ ಇರುವ ಸಾವಿರಾರು ಎಕ್ರೆ ಸ್ಥಳಗಳ, ನಗ-ನಾಣ್ಯಗಳ ಮೌಲ್ಯ ಲೆಕ್ಕಕ್ಕೆ ಸಿಗದಷ್ಟು. ಆದಾಯಕರ ಇಲಾಖೆಯಿಂದ ಸಮಗ್ರ ತನಿಖೆ ನಡೆಸಿದಾಗ ಮಾತ್ರ ಇವರ ಅಗಾಧ ಆಸ್ತಿ ಎಷ್ಟು? ಇವೆಲ್ಲಾ ಸಕ್ರಮವೇ ಎಂದು ಗೊತ್ತಾಗಬಹುದು.

ಹುಸಿ ಪ್ರಚಾರ: ಹೆಗ್ಗಡೆಯವರು ಪರಿಸರ ಪ್ರೇಮಿಗಳು. ಪರಿಸರ ರಕ್ಷಣೆಗಾಗಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ.

ವಾಸ್ತವ : ನೇತ್ರಾವತಿ ನದಿ ತಿರುವು - ಎತ್ತಿನಹೊಳೆ ಯೋಜನೆ ಬಗ್ಗೆ ಇವರು 'ಅಧ್ಯಯನ ಮಾಡಿ, ಜನರಿಗೆ ಮನವರಿಕೆ ಮಾಡಿ' ಎಂದಷ್ಟೇ ಸರಕಾರಕ್ಕೆ ಹೇಳಿ ಸುಮ್ಮನಿದ್ದಾರೆ. ಪಶ್ಚಿಮಘಟ್ಟ ವಿನಾಶಕಾರಿ ಕುದುರೆಮುಖ ಅದಿರು ಕಂಪೆನಿ ಪರಿಸರ ರಕ್ಷಣೆ ಮಾಡಿದೆ ಎಂದು ಹೊಗಳಿದ್ದರು! ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಯೋಜನೆ ಪರಿಸರಮಾರಕವಾಗಿದ್ದರೂ ಬೆಂಬಲಿಸಿದ್ದಾರೆ. ಬರೀ ಗಿಡಮರ ನೆಡುವ, ಪರಿಸರ ಜಾಗೃತಿ ಕಾರ್ಯಕ್ರಮ ಮಾಡಿ ಅದನ್ನೇ ಪರಿಸರ ಸಂರಕ್ಷಣೆ ಕೆಲಸ ಎಂದು ಬಿಂಬಿಸುವ ಇವರು ಪರಿಸರ ಸೂಕ್ಷ್ಮ ಕರಾವಳಿಯಲ್ಲಿ ಪರಿಸರ ವಿನಾಶಕಾರಿ ಬೃಹತ್ ಯೋಜನೆಗಳ ವಿರುದ್ಧ ಧ್ವನಿ ಎತ್ತಿದವರಲ್ಲ!

ಹುಸಿ ಪ್ರಚಾರ: ಬೆಳ್ತಂಗಡಿ ತಾಲೂಕು ಗ್ರಾಮಾಭಿವೃದ್ಧಿ ಯೋಜನೆಯಿಂದ ಸಂಪೂರ್ಣ ಅಭಿವೃದ್ಧಿ ಆಗಿದೆ, ಬಡತನ ನಿರ್ಮೂಲನೆಯಾಗಿದೆ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ಹೆಗ್ಗಡೆಯವರಿಗೆ ಮಹಿಳಾಪರ ಚಿಂತನೆ, ಮಹಿಳಾ ಸಶಕ್ತತೆ ಬಗ್ಗೆ ಅತೀವ ಆಸಕ್ತಿ.

ವಾಸ್ತವ : ಇವರ ಜ್ಞಾನ ವಿಕಾಸ ಕೇಂದ್ರಗಳಲ್ಲಿ, ಒಕ್ಕೂಟಗಳಲ್ಲಿ 'ಹೆಗ್ಗಡೆಯವರ ಕನಸು ನನಸು ಮಾಡಬೇಕೆಂದು' ಬೋಧಿಸುತ್ತಾರೆ 'ಧರ್ಮಸ್ಥಳ ಯೋಜನೆಯ ಫಲಾನುಭವಿಗಳು' ಎಂದು ಇವರಿಗೆ ಹಣೆಪಟ್ಟಿ ಅಂಟಿಕೊಳ್ಳುತ್ತದೆ. ಊರಿನ ದೇವಸ್ಥಾನದ, ಜಾತ್ರೆ, ಧಾರ್ಮಿಕ ಕಾರ್ಯಕ್ರಮದಲ್ಲಿ ಇವರು ಭಾಗವಹಿಸಲು ಯೋಜನೆಯ ಅಧಿಕಾರಿಗಳ ಅನುಮತಿ ಪಡೆಯುವ ಪರಿಸ್ಥಿತಿ ನಿರ್ಮಿಸಿದ್ದಾರೆ. 'ಪೂಜ್ಯ ಹೆಗ್ಗಡೆಯವರ ಶುಭಾಶೀರ್ವಾದದೊಂದಿಗೆ' ಎಂದು ಎಲ್ಲಾ ಆಮಂತ್ರಣಗಳಲ್ಲಿ (ಮದುವೆ, ಗೃಹ ಪ್ರವೇಶದಂತ ಖಾಸಗಿ ಕಾರ್ಯಕ್ರಮದಲ್ಲಿಯೂ) ಮುದ್ರಿಸುವುದು ಪರಿಪಾಠ ಆಗಿತ್ತು, ಸತ್ಯನಾರಾಯಣ ಪೂಜೆ, ಬ್ರಹ್ಮಕಲಶಾಭಿಷೇಕ ಇತ್ಯಾದಿ ಧಾರ್ಮಿಕ ಆಮಂತ್ರಣದಲ್ಲಿಯೂ 'ಪರಮಪೂಜ್ಯ ಹೆಗ್ಗಡೆಯವರ ಶುಭಾಶೀರ್ವಾದ'ದೊಂದಿಗೆ ಎಂದು ಮೇಲ್ಭಾಗದಲ್ಲಿ ಹಾಕುವುದು ಧಾರ್ಮಿಕರ ಮನಸ್ಸಿಗೆ ನೋವುಂಟುಮಾಡುವ ಸಂಗತಿ.

ಇದೆಲ್ಲಾ ಸಶಕ್ತತೆಗೆ ವಿರುದ್ಧವಾದ್ದು. ಕೃಷಿಕರ, ಬಡವರ, ಮಹಿಳೆಯರ ಅಭಿವೃದ್ಧಿಗೆ ಸರಕಾರಿ ಇಲಾಖೆಗಳು, ಶಾಸಕರು, ಸಂಸದರು, ಜಿಲ್ಲಾ-ತಾಲೂಕು- ಗ್ರಾಮ ಪಂಚಾಯತ್‌ಗಳು, ಬ್ಯಾಂಕ್‌ಗಳು, ಸಹಕಾರಿ ಸಂಸ್ಥೆಗಳು ಇತರ ಸೇವಾ ಸಂಸ್ಥೆಗಳು ನೀಡಿದ ಸೇವೆ, ಸಹಕಾರ ಹಾಗೂ ಹೆಗ್ಗಡೆಯವರ ಸಹಕಾರ ಎಷ್ಟು ಎಂದು ತುಲನಾತ್ಮಕ ಅಧ್ಯಯನ ಆಗಿದೆಯೇ? ಹೆಗ್ಗಡೆಯವರ ಭಾರೀ ಪ್ರಚಾರದಿಂದಾಗಿ ಅವರೇ ಅಭಿವೃದ್ಧಿಯ ಹರಿಕಾರ ಎಂದು ಹೊಗಳುವ ಅಭ್ಯಾಸವಾಗಿದೆ. ಜೀರ್ಣೋದ್ಧಾರಕ್ಕೆ ಕಟ್ಟಡಗಳಿಗೆ, ಕಾರ್ಯಕ್ರಮಗಳಿಗೆ ಇವರು ಕೊಡುವ ದೇಣಿಗೆ ಒಟ್ಟು ಖರ್ಚಿನ 5% ಆಸುಪಾಸು. ಆದರೆ ಇವರಿಂದಲೇ ಆದದ್ದು ಎಂದು ಫಲಕ, ಪ್ರಚಾರ ಆಗುತ್ತದೆ. 'ಬೆಳ್ತಂಗಡಿ ತಾಲೂಕು ಹಿಂದುಳಿದ ತಾಲೂಕು' ಎಂದು ಸರಕಾರ ಈಗಲೂ ಹೇಳುತ್ತಿದೆ. ಹಾಗಾದರೆ ಹೆಗ್ಗಡೆಯವರ ಗ್ರಾಮಾಭಿವೃದ್ಧಿ ಯೋಜನೆಯಿಂದ ಬಡತನ ನಿರ್ಮೂಲನವಾಗಿದೆ, ಅಭಿವೃದ್ಧಿಯಾಗಿದೆ ಎಂಬುದು ಸುಳ್ಳಲ್ಲವೇ?

ಹುಸಿ ಪ್ರಚಾರ: ಯುವಜನಾಂಗಕ್ಕೆ ಸ್ವ ಉದ್ಯೋಗಕ್ಕೆ ರುಡ್‌ಸೆಟ್ Rural Devt & Self Employment Training Institute (RUDSETI) ಇದರ ಕಲ್ಪನೆ - ಕನಸು ವೀರೇಂದ್ರ ಹೆಗ್ಗಡೆಯವರದ್ದು.

ವಾಸ್ತವ : ಈ ಮಹಾನ್ ಕಲ್ಪನೆ-ಕನಸು ಕೇಂದ್ರ ಸಚಿವರಾಗಿದ್ದ ಸಿಂಡಿಕೇಟ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಮತ್ತು ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನ ಅಧ್ಯಕ್ಷರಾಗಿದ್ದ ಮಣಿಪಾಲದ ದಿ। ಟಿ.ಎ. ಪೈಗಳದ್ದು. 'ಸ್ವಉದ್ಯೋಗ ತರಬೇತಿ ಟಿ.ಎ. ಪೈಗಳ ಕನಸು. ಯುವಜನತೆಗೆ ತರಬೇತಿ ನೀಡಿ ಸ್ವಾವಲಂಬಿಗಳನ್ನಾಗಿಸಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು, ಬ್ಯಾಂಕ್ ಮೂಲಕ ಆರಂಭವಾದ ಈ ಯೋಜನೆ ಬರಬರುತ್ತಾ ವಿಸ್ತಾರವಾಗಿತ್ತು ...' ಎಂದು ಕೆ.ಎಂ. ಉಡುಪ, ನಿವೃತ್ತ ಡಿ.ಜಿ.ಎಂ, ಸಿಂಡಿಕೇಟ್ ಬ್ಯಾಂಕ್ ಇವರು ಹೇಳಿದ್ದಾರೆ. (ವಿಜಯವಾಣಿ, 19.9.2016)

ಹುಸಿ ಪ್ರಚಾರ: ರುಡ್‌ಸೆಟ್‌ನ ಸ್ಥಾಪನೆ ಮಾಡಿದ್ದು ವೀರೇಂದ್ರ ಹೆಗ್ಗಡೆಯವರು.

ವಾಸ್ತವ : ರುಡ್‌ಸೆಟ್‌ನ ಸ್ಥಾಪಕರು: ಮಣಿಪಾಲದ ಸಿಂಡಿಕೇಟ್ ಬ್ಯಾಂಕ್. ಈ ಬ್ಯಾಂಕ್‌ನ ಮನವಿ ಮೇರೆಗೆ ಕೆನರಾ ಬ್ಯಾಂಕ್ ಮತ್ತು ಹೆಗ್ಗಡೆಯವರು ಇದರೊಂದಿಗೆ ಸೇರಿದರು. ಸಿಂಡಿಕೇಟ್ ಬ್ಯಾಂಕ್‌ನ ಡಿ.ಜಿ.ಎಂ ಆಗಿದ್ದ, ಟಿ.ಎ ಪೈಗಳ ಆಪ್ತ ಕೆ.ಎಂ.ಉಡುಪರೇ ಹೆಗ್ಗಡೆಯವರನ್ನು ಈ ಯೋಜನೆ ಬಗ್ಗೆ ವಿವರಿಸಿ, ಮನವೊಲಿಸಿ ಸೇರಿಸಿಕೊಂಡದ್ದು. ಈಗಲೂ ಈ ಸಂಸ್ಥೆಯ ಖರ್ಚಿನಲ್ಲಿ 40% ಸಿಂಡಿಕೇಟ್ ಬ್ಯಾಂಕ್, 40% ಕೆನರಾ ಬ್ಯಾಂಕ್ ಭರಿಸುತ್ತದೆ. 20% ಮಾತ್ರ ಹೆಗ್ಗಡೆಯವರ ಸಂಸ್ಥೆ ಭರಿಸುತ್ತದೆ.

ಹುಸಿ ಪ್ರಚಾರ: 'ಶಿಕ್ಷಣದೊಂದಿಗೆ ಕಾಯಕ' ಎಂಬ ತತ್ವದ ಉಜಿರೆಯ 'ರತ್ನಮಾನಸ'ದ ಕಲ್ಪನೆ- ಸ್ಥಾಪನೆ: ರತ್ನವರ್ಮ ಹೆಗ್ಗಡೆ, ವೀರೇಂದ್ರ ಹೆಗ್ಗಡೆಯವರಿಂದ.

ವಾಸ್ತವ : ಇದರ ಕಲ್ಪನೆ ಉಜಿರೆ ಧರ್ಮಸ್ಥಳ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿದ್ದ, ಎಸ್.ಡಿ.ಎಂ. ಎಜುಕೇಶನಲ್ ಟ್ರಸ್ಟ್‌ನ ಕಾರ್ಯದರ್ಶಿಯೂ ಆಗಿದ್ದ ದಿ। ಆರ್.ಎನ್ ಭಿಡೆಯವರದ್ದು ಮತ್ತು ಅವರಿಂದಲೇ ಇದರ ಸ್ಥಾಪನೆ. ಕಾಲಕ್ರಮದಲ್ಲಿ ಖರ್ಚು ಭರಿಸಿದ್ದು ಮಾತ್ರ ಹೆಗ್ಗಡೆ ಶಿಕ್ಷಣ ಸಂಸ್ಥೆಯಿಂದ. ಭಿಡೆಯವರನ್ನು ಮರೆತ ಕಾರಣ ಭಿಡೆ ಕುಟುಂಬದವರೇ ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ್ದರು. (ಎಸ್.ಡಿ.ಎಂ. ಎಜುಕೇಶನಲ್ ಟ್ರಸ್ಟ್ ಉಪಾಧ್ಯಕ್ಷರಾಗಿ ದಿ। ಜಿ.ಎನ್. ಭಿಡೆ, ಕೋಶಾಧಿಕಾರಿಯಾಗಿ ದಿ। ಬಿ.ನರಸಿಂಹ ಭಟ್ ಸೇವೆ ಸಲ್ಲಿಸಿದ್ದೂ ಈಗ ಮರೆಯಾದ ಸತ್ಯ!)

ಹುಸಿ ಪ್ರಚಾರ: ಹೆಗ್ಗಡೆಯವರ ಶಾಂತಿವನ ಟ್ರಸ್ಟ್‌ನಿಂದ ಬೆಳ್ತಂಗಡಿ ಸಮಾಜ ಮಂದಿರದ ಬಳಿ ರಚನೆಯಾದ ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಕಲಾಭವನದಿಂದ ಶ್ರೀಸಾಮಾನ್ಯರಿಗೆ, ಸಂಘಸಂಸ್ಥೆಗಳಿಗೆ ಉಪಕಾರವಾಗಿದೆ. ಸಮಾಜ ಮಂದಿರಕ್ಕೆ ಸರಕಾರ ನೀಡಿದ ಸ್ಥಳದ ಮಂಜೂರಾತಿ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆಗಿಲ್ಲ.


ವಾಸ್ತವ: ಬೆಳ್ತಂಗಡಿ ಸಮಾಜ ಮಂದಿರ ಬಿಲ್ಡಿಂಗ್ ಸೊಸೈಟಿಗೆ ಸರಕಾರ 61 ಸೆಂಟ್ಸ್ ಸ್ಥಳ 'ಸಮಾಜಮಂದಿರ' ಉದ್ದೇಶಕ್ಕೆಂದೇ ಕೆಲವು ಷರತ್ತು ವಿಧಿಸಿ ಮಂಜೂರು ಮಾಡಿತ್ತು. ಈ ಕಟ್ಟಡವನ್ನು ಷರತ್ತು ಉಲ್ಲಂಘಿಸಿ ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ಕೆಡವಲಾಗಿದೆ. ಇದರ ಪಕ್ಕದಲ್ಲಿ ಹೆಗ್ಗಡೆಯವರು ಬೃಹತ್ ಕಲಾಭವನ (ಹಾಲ್) ನಿರ್ಮಿಸಿ ದುಬಾರಿ ಬಾಡಿಗೆಗೆ ನೀಡುತ್ತಿದ್ದಾರೆ. ಕಡಿಮೆ ಬಾಡಿಗೆಗೆ ಲಭ್ಯವಾಗುತ್ತಿದ್ದ ಸಮಾಜಮಂದಿರ ನಾಶಗೊಳಿಸಿ, ಅದರೊಂದಿಗೆ ಅದರ ನಿರ್ಮಾತೃಗಳ ನೆನಪನ್ನೂ ನಾಶಮಾಡಲಾಗಿದೆ. ಈ ಕುರಿತು ಈ ಸೊಸೈಟಿಯ ಅಧ್ಯಕ್ಷ ವೀರೇಂದ್ರ ಹೆಗ್ಗಡೆ ಮತ್ತು ಕಾರ್ಯದರ್ಶಿ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು (ಕ್ರ.0503/2015). ತಾ.14/12/2015ರಂದು ಪೊಲೀಸ್‌ರು 'ಬಿ' ರಿಪೋರ್ಟ್ ಹಾಕಿದ್ದು ಅನಿರೀಕ್ಷಿತವೇನಲ್ಲ. ಇದಕ್ಕೆ ದೂರುದಾರ ರಂಜನ್ ರಾವ್ ಬೆಳ್ತಂಗಡಿ ಕೋರ್ಟ್‌ನಲ್ಲಿ ಕಾನೂನು ಪ್ರಕಾರ ಆಕ್ಷೇಪಣೆ ಸಲ್ಲಿಸಿದ್ದಾರೆ. ತನಿಖೆ ಸಾಗುತ್ತಿದೆ.

ಹುಸಿ ಪ್ರಚಾರ: ನಾಗರಿಕ ಸೇವಾ ಸಮಿತಿ (ರಿ) ಗುರುವಾಯನಕೆರೆ ಇವರು ಡಾ। ವೀರೇಂದ್ರ ಹೆಗ್ಗಡೆಯವರನ್ನು ಪದ್ಮವಿಭೂಷಣ ಪ್ರಶಸ್ತಿ ಸಿಕ್ಕಿದ ಸಂದರ್ಭದಲ್ಲಿ ಅಭಿನಂದಿಸಿದ್ದಾರೆ.

ವಾಸ್ತವ : 1976-77ರಲ್ಲಿ ಸ್ಥಾಪನೆಯಾದ ನಾಗರಿಕ ಸೇವಾ ಸಮಿತಿ (ರಿ.ನಂ.41/77) ಈಗಲೂ ಅಸ್ತಿತ್ವದಲ್ಲಿದ್ದರೂ ಇದೇ ಹೆಸರಿನಲ್ಲಿ ಕೆಲವರು ಸುಳ್ಳು ಪ್ರಮಾಣಪತ್ರ ಸಲ್ಲಿಸಿ 2015ರಲ್ಲಿ ಇನ್ನೊಂದು ನಾಗರಿಕ ಸೇವಾ ಸಮಿತಿ ರಿಜಿಸ್ಟ್ರಿ ಮಾಡಿದ್ದು ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಕಾಯ್ದೆಯ ಉಲ್ಲಂಘನೆಯಾಗಿದೆ.

ಈ ಸಮಿತಿ ಹೆಸರಿನಲ್ಲಿ ಹೆಗ್ಗಡೆಯವರನ್ನು ಅಭಿನಂದಿಸಿ ಜಾಹೀರಾತು, ಫ್ಲೆಕ್ಸ್ ಹಾಕಿ ಗೊಂದಲ ಸೃಷ್ಟಿಸಲು ಪ್ರಯತ್ನಿಸಲಾಗಿತ್ತು, ಈ ಡುಪ್ಲಿಕೇಟ್ ಸಮಿತಿ ರದ್ದುಪಡಿಸಲು ದೂರು ಸಲ್ಲಿಸಲಾಗಿದ್ದು ಸೊಸೈಟಿಗಳ ಡೆಪ್ಯುಟಿ ರಿಜಿಸ್ಟ್ರರು ಸದ್ರಿ ಸಮಿತಿಗೆ ನೋಟಿಸು ನೀಡಿದ್ದಾರೆ. ■

2017ರ ಬಜೆಟ್: ಸ್ವಲ್ಪ ಆಳವಾಗಿ ಪರಿಶೀಲಿಸಿ



ಮೋದಿ ಭಕ್ತರು ಸಂತಸದಿಂದ ಕುಣಿದಾಡುತ್ತಿದ್ದಾರೆ. ಈ ಬಾರಿಯ ಬಜೆಟ್ ರೈತಪರವಾಗಿದೆ, ಕೃಷಿಕಾರ್ಮಿಕರ ಪರವಾಗಿದೆ, ದಲಿತಪರವಾಗಿದೆ, ರಾಜಕೀಯ ಪಕ್ಷಗಳಲ್ಲಿ ಪಾರದರ್ಶಕತೆ ತರಲಿದೆ, ಕಾಳಧನಿಕರನ್ನು ಮಟ್ಟಹಾಕಲಿದೆ ಎಂದೆಲ್ಲ ಹಾಡಿಹೊಗಳುತ್ತಿದ್ದಾರೆ. ಇದಕ್ಕೆ ದನಿಗೂಡಿಸಿರುವ ಬಾಲಂಗೋಚಿ ಕಾರ್ಪೋರೇಟ್ ಮಾಧ್ಯಮಗಳೂ ಇದೊಂದು ದಿಟ್ಟ, ವಿನೂತನ, ಪರಿವರ್ತನೆ ತರಲಿರುವ ಬಜೆಟ್ ಎಂದು ಕೊಂಡಾಡುತ್ತಿವೆ. 2017ರ ಬಜೆಟ್ ನಿಜವಾಗಿ ಹೇಗಿದೆ? ಇದನ್ನು ಅರಿಯಲು ಮೋದಿ ಭಕ್ತರ ಹೊಗಳಿಕೆಗೆ ಪಾತ್ರವಾಗಿರುವ ವಿಚಾರಗಳನ್ನು ಒಂದೊಂದಾಗಿ ಎತ್ತಿಕೊಂಡು ಸ್ವಲ್ಪ ಆಳವಾಗಿ ಪರಿಶೀಲಿಸಬೇಕಾಗುತ್ತದೆ.

1) ಬಜೆಟ್ ರೈತಪರವಾಗಿದೆಯೆ?

2017ರ ಬಜೆಟ್ ಕೃಷಿವಲಯಕ್ಕೆ ಭಾರಿ ಉತ್ತೇಜನ ನೀಡಲಿದೆ, ಆದರಲ್ಲಿ ಅನೇಕ ರೈತಪರ ಕಾರ್ಯಕ್ರಮಗಳಿವೆ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ ಕಳೆದ ವರ್ಷವೂ ಇದೇ ರಾಗ ಹಾಡಲಾಗಿತ್ತು! ಕೆಲವು ಭಟ್ಟಂಗಿ ವಿಶ್ಲೇಷಕರಂತೂ ಕಳೆದ ಬಾರಿ ರೈತರಿಗೆ, ಬಡವರಿಗೆ ಕೊಟ್ಟದ್ದು ಅತಿಯಾಯಿತು ಎಂದಿದ್ದರು. ಆದರೆ ಈ ಬಾರಿ ಪ್ಲೇಟ್ ಬದಲಾಯಿಸಿ ಗ್ರಾಮೀಣ ಭಾಗಕ್ಕೆ ಪ್ರೋತ್ಸಾಹ ನೀಡಲಿರುವ ಈ ಬಜೆಟ್ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸಲಿದೆ ಎನ್ನುತ್ತಿದ್ದಾರೆ. ಇವರು ಹೀಗೆ ಸ್ವಲ್ಪ ಮೆತ್ತಗಾಗಲು ಮುಖ್ಯ ಕಾರಣ ಏನೆಂದರೆ ನೋಟು ರದ್ದತಿಯ ಅತ್ಯಧಿಕ ದುಷ್ಪರಿಣಾಮ ಆಗಿರುವುದು ಗ್ರಾಮೀಣ ಭಾರತದ ಮೇಲೆ ಎಂಬ ಸತ್ಯವನ್ನು ಇವರು ಅರಿತಿದ್ದಾರೆ.

ಗ್ರಾಮೀಣ ಭಾಗದ ಜನತೆ ಸತತ ಎರಡು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ತತ್ತರಿಸುತ್ತಿದ್ದಾಗ ಸರ್ಕಾರ ಕೈಕಟ್ಟಿಕೊಂಡು ಕುಳಿತಿತ್ತೆ ಹೊರತು ಸ್ವಾಮಿನಾಥನ್ ಸಮಿತಿ ಶಿಫಾರಸು ಮಾಡಿರುವ ಕನಿಷ್ಠ ಬೆಂಬಲ ಬೆಲೆಗಳನ್ನು ನೀಡುವ ಬಗ್ಗೆ ಅಪ್ಪಿತಪ್ಪಿಯಾದರೂ ಯೋಚಿಸಿರಲಿಲ್ಲ, ಈ ಸನ್ನಿವೇಶದಲ್ಲಿ ಬಂದ ನೋಟು ರದ್ದತಿ ಗಾಯದ ಮೇಲೆ ಬರೆ ಎಳೆದು ರೈತಾಪಿ ವರ್ಗದ ಸಂಕಷ್ಟಗಳನ್ನು ದ್ವಿಗುಣಗೊಳಿಸಿದೆ. ಇಂಥಾ ಪರಿಸ್ಥಿತಿಯಲ್ಲಿರುವ ಕೃಷಿವಲಯಕ್ಕೆ ಬಜೆಟ್‌ನಲ್ಲಿ ಯಾವ ವಿನೂತನ ಕ್ರಮಗಳಿವೆ? ರೈತರಿಗೆ ನಿಶ್ಚಿತ ಆದಾಯ ಸಿಗುವಂತಾಗಲು ಏನು ಮಾಡಲಾಗಿದೆ? ಸಾಲದ ಕೂಪದಲ್ಲಿರುವವರಿಗೆ ಯಾವ ರೀತಿ ನೆರವಾಗಲಿದೆ? ಪ್ರಾಕೃತಿಕ ವಿಕೋಪಗಳಿಂದಾಗಿ ರೈತರು ಇನ್ನಷ್ಟು ಸಾಲದ ಸುಳಿಗೆ ಬಲಿಯಾಗುವುದನ್ನು ತಡೆಯಲು ಏನು ಮಾಡಲಾಗಿದೆ? ಅದ್ಯಾವ ಕ್ರಾಂತಿಕಾರಿ ಹೆಜ್ಜೆಗಳನ್ನಿಡಲಾಗಿದೆ?

2017-18ರ ಸಾಲಿಗೆ ಕೃಷಿ ವಲಯಕ್ಕೆಂದು ತೆಗೆದಿಡಲಾಗಿರುವ ಒಟ್ಟು ಮೊತ್ತ ರೂ. 51,206 ಕೋಟಿ ಅಥವಾ ಇಡೀ ಬಜೆಟಿನ ಶೇಕಡಾ 2.3ರಷ್ಟು. ಕಳೆದ ಬಾರಿ ಇದು ರೂ. 48,072 ಕೋಟಿ ಆಗಿತ್ತು, ಲೆಕ್ಕ ಹಾಕಿದರೆ ಕಳೆದ ಸಲಕ್ಕಿಂತ ಈ ಸಲ ಬರೀ ಶೇಕಡಾ 6.14ರಷ್ಟು ಹೆಚ್ಚಳ ಮಾಡಲಾಗಿದೆ, ಅಷ್ಟೆ! ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಕಳೆದ ಬಾರಿಯ ಹಾಗೆ ಈ ಬಾರಿಯೂ ರೈತರಿಗೆ ನಿಶ್ಚಿತ ಆದಾಯ, ದುಪ್ಪಟ್ಟು ಆದಾಯದ ಪ್ರಸ್ತಾಪಗಳಿವೆ. ಆದರೆ ಅದು ಹೇಗೆ ಆಗಲಿದೆ ಎಂದು ತಿಳಿಸಲಾಗಿಲ್ಲ, ಬಜೆಟಿನಲ್ಲಿ ಕನಿಷ್ಠ ಬೆಂಬಲ ಬೆಲೆಗಳ ಸುಳಿವೂ ಇಲ್ಲದಿರುವುದನ್ನು ಗಮನಿಸಬೇಕು.

'ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ'ಯನ್ನು ವಿಪರೀತ ಕೊಂಡಾಡಲಾಗುತ್ತಿದೆ. ಆದರೆ ವಾಸ್ತವದಲ್ಲಿ ಇದರ ಅನುಷ್ಠಾನವೂ ತೀರ ಅಸಮರ್ಪಕವಾಗಿದ್ದು ರೈತರಿಗೆ ಯಾವ ವಿಧದಲ್ಲೂ ಸಹಾಯವಾಗಿಲ್ಲ, ಹಾಗೆ ನೋಡಿದರೆ ಕಳೆದ ಹತ್ತು ವರ್ಷಗಳಲ್ಲಿ ಬಂದಿರುವ ಯಾವ ವಿಮಾ ಯೋಜನೆಯಿಂದಲೂ ಪ್ರಯೋಜನವಾಗಿಲ್ಲ, ಮಹತ್ವದ ವಿಷಯ ಏನೆಂದರೆ ಕಳೆದ 2016-17ನೆ ಸಾಲಿನ ವಿಮಾ ಪ್ರೀಮಿಯಮ್‌ನ ಪರಿಷ್ಕೃತ ವೆಚ್ಚ ರೂ. 13,240 ಕೋಟಿಗೆ ಏರಿದೆ. ಇದು ಹೋಗಿರುವುದು ವಿಮಾ ಕಂಪನಿಗಳ ಖಾತೆಗೆ, ರೈತರಿಗಲ್ಲ, ರೈತರಿಗೆ ದೊರಕುವುದು ಅವರು ವಿಮೆ ಕ್ಲೈಮ್ ಮಾಡಿದಾಗ ಮಾತ್ರ. ಇದಕ್ಕಿಂತ ದೊಡ್ಡ ಮೋಸ ಯಾವುದಿದೆ? ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯಡಿ ಶೇಕಡಾ 40ರಷ್ಟು ರೈತರನ್ನು ಒಳಗೊಳ್ಳುವ ಗುರಿ ಇಟ್ಟುಕೊಂಡಿರುವ (ಕಳೆದ ವರ್ಷದ ಗುರಿ 26.5%). ಪ್ರಸಕ್ತ ಬಜೆಟಿನಲ್ಲಿ ಇದಕ್ಕೆಂದು ತೆಗೆದಿರಿಸಲಾಗಿರುವ ಮೊತ್ತ ಕೇವಲ ರೂ. 9000 ಕೋಟಿ. ಇದು ಕಳೆದ ಸಾಲಿನ ಪರಿಷ್ಕೃತ ವೆಚ್ಚಕ್ಕಿಂತಲೂ ಕಡಿಮೆ! ಹೀಗಿರುವಾಗ ಕಳೆದ ವರ್ಷಕ್ಕಿಂತ ಶೇಕಡಾ 13.5ರಷ್ಟು ಅಧಿಕ ರೈತರನ್ನು ಹೇಗೆ ಕವರ್ ಮಾಡಲಾಗುವುದೆಂಬುದು ನಿಜಕ್ಕೂ ಕುತೂಹಲಕಾರಿ ಯಾಗಿದೆ!

ಕಳೆದ ವರ್ಷ ನೀರಾವರಿಗೆಂದು ತೆಗೆದಿರಿಸಲಾಗಿದ್ದ ರೂ. 20000 ಕೋಟಿ ಹಣವನ್ನು ಹೇಗೆ ವೆಚ್ಚ ಮಾಡಲಾಯಿತೆಂದು ತಿಳಿಸಲಾಗಿಲ್ಲ, ಇದೀಗ ಮತ್ತೆ ಅಷ್ಟೆ ಮೊತ್ತವನ್ನು ತೆಗೆದಿರಿಸಲಾಗಿದೆ.

ಇನ್ನು ಸಾಲಗಳ ವಿಷಯಕ್ಕೆ ಬಂದರೆ. ಸಣ್ಣಪುಟ್ಟ ರೈತರಿಗೆ ಬ್ಯಾಂಕುಗಳು ಬಹುತೇಕವಾಗಿ ಸಾಲ ನಿರಾಕರಿಸುವುದರಿಂದ ಅವರ ಸಾಲಗಳಲ್ಲಿ ಅರ್ಧಕ್ಕೂ ಜಾಸ್ತಿ ಖಾಸಗಿ ಮೂಲಗಳಿಂದ ಪಡೆಯುವ ದುಬಾರಿ ಬಡ್ಡಿಯ ಸಾಲಗಳಾಗಿವೆ. ಇದಕ್ಕೆ ಪ್ರಾಕೃತಿಕ ವಿಕೋಪಗಳೂ ಸೇರಿದಾಗ ಉಂಟಾಗುವ ವಿಷಮ ಪರಿಸ್ಥಿತಿಯನ್ನು ಎದುರಿಸಲಾಗದೆ ಅನೇಕರು ಆತ್ಮಹತ್ಯೆಗೆ ಶರಣಾಗುತ್ತಾರೆ. ಆದರೆ ಈ ಬಜೆಟಿನಲ್ಲಿ ಬ್ಯಾಂಕ್ ಸಾಲ ಸಿಗಲಾರದ ಸಣ್ಣಪುಟ್ಟ ರೈತರಿಗಾಗಿ ಏನೂ ಇಲ್ಲ, ರೈತರಿಗೆ ಸಾಲ ಬಡ್ಡಿ ಮನ್ನಾವೂ ಇಲ್ಲ, ಸಬ್ಸಿಡಿ ಹೆಚ್ಚಳವೂ ಇಲ್ಲ, ಅಸಲಿಗೆ ಬಡ್ಡಿ ಸಬ್ಸಿಡಿಯ ಮೊತ್ತ (ರೂ. 15000 ಕೋಟಿ) ಕಳೆದ ಬಜೆಟಿನಷ್ಟೆ ಇದೆ! ಸಾಲದ ಗುರಿಯನ್ನು ರೂ. 10 ಲಕ್ಷ ಕೋಟಿಗೆ ಏರಿಸಲಾಗಿದೆ, ಎನ್ನಲಾಗಿದೆ. ಆದರೆ ಕೇವಲ ಬಜೆಟ್ ಭಾಷಣದಲ್ಲಷ್ಟೆ ಪ್ರಸ್ತಾಪ ಆಗಿರುವ ಈ ಸಂಖ್ಯೆ (ಇದು ಲಿಖಿತರೂಪದಲ್ಲಿ ಇಲ್ಲ!) ಬ್ಯಾಂಕುಗಳ ಸಾಲ ನೀಡುವಿಕೆಯ ಗುರಿಯಷ್ಟೆ ಹೊರತು ಬಜೆಟಿನ ಒಂದು ಅಂಶವಲ್ಲ! ಮೋದಿ ಸರ್ಕಾರದ ಚಾತುರ್ಯ ಹೇಗಿದೆ ನೋಡಿ. ಈ ರೂ. 10 ಲಕ್ಷ ಕೋಟಿ ಮೊತ್ತದ ಸಾಲಗಳ ಫಲಾನುಭವಿಗಳು ಯಾರು ಹೇಳಿ? ಇದರ ಗರಿಷ್ಠ ಪಾಲು ರಿಲಾಯನ್ಸ್ ಫ್ರೆಶ್‌ನಂತಹ ಕೃಷಿ ಸಂಬಂಧಿತ ವಾಣಿಜ್ಯೋದ್ದಿಮೆಗಳ ಪಾಲಾದರೆ ಆಶ್ಚರ್ಯಪಡಬೇಕಾಗಿಲ್ಲ, ಹೆಚ್ಚಿನ ಕೃಷಿ ಸಾಲ ನಗರಗಳಿಗೆ ಹೋಗುತ್ತಿದೆ ಎಂದು ಅಧ್ಯಯನಗಳೂ ಹೇಳುತ್ತವೆ.


ಕೃಷಿ ಆದಾಯಕ್ಕೆ ತೆರಿಗೆ ವಿಧಿಸುವುದರಿಂದ ತೆರಿಗೆ ಆದಾಯವನ್ನು ದೊಡ್ಡ ಮಟ್ಟನಲ್ಲಿ ಹೆಚ್ಚಿಸಬಹುದೆಂಬುದು ಒಂದು ಸರಳ ಸತ್ಯ. ಆದರೆ ಬಜೆಟಿನಲ್ಲಿ ಇದರ ಪ್ರಸ್ತಾಪ ಮಾಡದಿರುವುದು ಮೋದಿ ಸರ್ಕಾರ ಬಡ ರೈತರ ಪರ ಇಲ್ಲ, ಶ್ರೀಮಂತ ಭೂಮಾಲೀಕರ ಪರ ಇದೆ ಎನ್ನುವುದನ್ನು ಎತ್ತಿ ತೋರಿಸುತ್ತದೆ.

2) ಕೃಷಿಕಾರ್ಮಿಕರ ಪರವಾಗಿದೆಯೆ?

2015ರಲ್ಲಿ ಮನರೆಗಾವನ್ನು (ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ) ಕಾಂಗ್ರೆಸ್‌ನ ವೈಫಲ್ಯಗಳ ನಿದರ್ಶನ ಎಂದು ಕರೆದ ಮೋದಿ ಅದನ್ನು "ನೆಲದಲ್ಲಿ ಹೊಂಡ ತೋಡುವುದಕ್ಕಾಗಿ ಜನರಿಗೆ ಹಣ ನೀಡುವ ಯೋಜನೆ" ಎಂದು ಟೀಕಿಸಿದ್ದ, ಒಮ್ಮೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳನ್ನು ಉದ್ದೇಶಿಸಿ "ಇದು 60 ವರ್ಷಗಳಲ್ಲಿ ಬಡತನ ನಿವಾರಿಸಲಾಗದ ನಿಮ್ಮ ವೈಫಲ್ಯಕ್ಕೆ ಜೀವಂತ ಉದಾಹರಣೆ. ಇದನ್ನು ನಾನು ನಿಲ್ಲಿಸುವೆ ಎಂದು ಭಾವಿಸಿದಿರಾ? ನನ್ನ ರಾಜಕೀಯ ವಿವೇಚನೆ ಹಾಗೆ ಮಾಡದಂತೆ ತಡೆಯುತ್ತಿದೆ. ನಾನು ಅದನ್ನು ಭಾಜಾಭಜಂತ್ರಿಯೊಂದಿಗೆ ಮುಂದುವರಿಸುವೆ" ಎಂದು ವ್ಯಂಗ್ಯವಾಡಿದ್ದ 2017ರ ಬಜೆಟಿನಲ್ಲಿ ಮನರೆಗಾ ಯೋಜನೆಗೆ 48000 ಕೋಟಿ ತೆಗೆದಿರಿಸುವುದಷ್ಟೆ ಅಲ್ಲ ಇದು ಕಳೆದ ವರ್ಷದ ರೂ. 38,500ಕ್ಕಿಂತಲೂ 25% ಹೆಚ್ಚು ಎಂದು ಕೊಚ್ಚಿಕೊಳ್ಳಲಾಗಿದೆ. ಆದರೆ ಇಲ್ಲೊಂದು ಆಟ ಆಡಲಾಗಿದೆ. ವಾಸ್ತವವಾಗಿ ಮೋದಿ ಸರ್ಕಾರ ಮಾಡಿರುವುದೇನು? ರಾಜ್ಯಗಳು ಕೇಳುವ ಮೊತ್ತವನ್ನು ಕೇಂದ್ರ ಒದಗಿಸಬೇಕಾಗಿದೆ ಎಂದಿರುವ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ತಲೆಬಾಗಿ 2016-17ರ ಪರಿಷ್ಕೃತ ವೆಚ್ಚವನ್ನು ಸುಮಾರು ರೂ. 47,500 ಕೋಟಿಗಳಿಗೆ ಏರಿಸಿದೆ. ಈಗ 2017ರ ಬಜೆಟಿನಲ್ಲಿ ಇದಕ್ಕೆ ಬರೀ 500 ಕೋಟಿ ಸೇರಿಸಿದೆ ಅಷ್ಟೆ! ಅಂದರೆ ಬರೀ 1% ಹೆಚ್ಚಳ! ಆದರೆ ವಾಸ್ತವದಲ್ಲಿ ಹಣದುಬ್ಬರವನ್ನು ಪರಿಗಣಿಸಿದರೆ ಇಲ್ಲಿ ಹೆಚ್ಚಳ ಆಚೆಗಿರಲಿ, ದೊಡ್ಡ ಖೋತಾ ಆಗಲಿದೆ! ನಿಜಸ್ಥಿತಿ ಏನೆಂದರೆ ಮೋದಿ ಸರ್ಕಾರ ಮನರೆಗಾ ಅಡಿಯಲ್ಲಿ ಉದ್ಯೋಗ ಸೃಷ್ಟಿ ಕಾರ್ಯಕ್ರಮವನ್ನು ಪ್ರೋತ್ಸಾಹಿಸುತ್ತಿಲ್ಲ, ರಾಜ್ಯಗಳಿಗೆ ಹಣ ಬಿಡುಗಡೆಗೆ 2, 3 ತಿಂಗಳು ವಿಳಂಬಿಸುತ್ತಿದೆ. ಸದ್ಯ 34 ರಾಜ್ಯಗಳ ಪೈಕಿ 22ರ ಬಳಿ ಸಂಬಳ ವಿತರಣೆಗೆ ದುಡ್ಡಿಲ್ಲದೆ ಕೇಂದ್ರದಿಂದ ಸಹಾಯ ಯಾಚಿಸಿದ್ದು ಅದಿನ್ನೂ ಬಿಡುಗಡೆಯೆ ಆಗಿಲ್ಲ.

3) ದಲಿತರು ಮತ್ತು ಆದಿವಾಸಿಗಳ ಪರ ಇದೆಯೆ?

ಪ್ರಸಕ್ತ ಬಜೆಟಿನಲ್ಲಿ ದಲಿತರು ಮತ್ತು ಆದಿವಾಸಿಗಳ



ಅಭಿವೃದ್ಧಿಗಾಗಿ ಕಳೆದ ಸಾಲಿಗಿಂತ ಶೇಕಡ 30ಕ್ಕೂ ಅಧಿಕ ಹಣವನ್ನು ತೆಗೆದಿರಿಸಲಾಗಿದೆ ಎಂದು ಬೊಂಬ್ಡಾ ಬಜಾಯಿಸಲಾಗುತ್ತಿದೆ. ಆದರೆ ಇದನ್ನು ಸೂಕ್ಷ್ಮ ಪರಿಶೀಲನೆಗೊಡ್ಡಿರುವ "ದಲಿತ ಮಾನವ ಹಕ್ಕುಗಳಿಗಾಗಿ ರಾಷ್ಟ್ರ ಮಟ್ಟದ ಆಂದೋಲನ" ಬಜೆಟಿನ ಅಸಲಿ ಹೂರಣವನ್ನು ಬಯಲಿಗೆಳೆದಿದೆ. ಆಂದೋಲನ ತಿಳಿಸಿರುವಂತೆ ಈ ಸಮುದಾಯಗಳು ಸಮಾಜದ ಇತರ ವರ್ಗಗಳ ಜತೆ ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳುವ ಸಲುವಾಗಿ 2010ರಲ್ಲಿ ನೇಮಕಗೊಂಡಿದ್ದ ನರೇಂದ್ರ ಜಾಧವ್ ಸಮಿತಿ ತನ್ನ ಅಧ್ಯಯನದ ಬಳಿಕ ಕೆಲವೊಂದು ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಿತ್ತು, ಅದರ ಪ್ರಕಾರ ಪ್ರತಿ ಸಲ ದಲಿತರು ಮತ್ತು ಆದಿವಾಸಿಗಳಿಗೆ ಪ್ರತ್ಯೇಕ ಪ್ರತ್ಯೇಕ ಉಪಯೋಜನೆಗಳನ್ನು (Scheduled Castes Sub Plan/Scheduled Tribes Sub Plan) ತಯಾರಿಸಬೇಕು. ಆದರೆ 2017ರ ಬಜೆಟ್ ಈ ನಿಗದಿತ ಪರಿಪಾಠಕ್ಕೆ ಇತಿಶ್ರೀ ಹೇಳಿದೆ.

2016-17ರ ಸಾಲಿನಲ್ಲಿ ದಲಿತರಿಗಾಗಿ ನಿಗದಿಯಾಗಿದ್ದ ರೂ. 38833 ಕೋಟಿಗಳನ್ನು ಈ ಬಾರಿ 52393 ಕೋಟಿಗಳಿಗೂ (34.92%), ಆದಿವಾಸಿಗಳಿಗಾಗಿ ರೂ. 24005 ಕೋಟಿ ಇದ್ದುದನ್ನು ಈ ಬಾರಿ ರೂ. 31920 ಕೋಟಿಗಳಿಗೂ (30.35%) ಏರಿಸಲಾಗಿದೆ ಎಂಬುದು ಮೋದಿ ಸರ್ಕಾರದ ವಾದ. ಆದರೆ ಕೊಂಚ ಆಳವಾಗಿ ಅಭ್ಯಸಿಸಿದಾಗ ದಲಿತರು ಮತ್ತು ಆದಿವಾಸಿಗಳಿಗೆಂದು ತೆಗೆದಿರಿಸಿರುವ ಮೊತ್ತ ಹಿಂದಿಗಿಂತ ಕಡಿಮೆಯಾಗಿರುವುದು ಅರಿವಿಗೆ ಬರುತ್ತದೆ. ಬಜೆಟಿನಲ್ಲಿ ಯೋಜಿತ ಮತ್ತು ಆಯೋಜಿತ ವೆಚ್ಚಗಳನ್ನು ಒಟ್ಟು ಸೇರಿಸುವ ಒಂದು ಭಾರಿ ಬುದ್ಧಿವಂತಿಕೆಯ ಕೆಲಸ ಆಗಿದೆ. ಹೀಗೆ ಯೋಜಿತ ಮತ್ತು ಆಯೋಜಿತ ವೆಚ್ಚಗಳನ್ನು ಒಟ್ಟು ಸೇರಿಸುವ ಸಂದರ್ಭಗಳಲ್ಲಿ ಜಾಧವ್ ಸಮಿತಿಯ ಸೂಚನೆಗಳನ್ನು ಅನುಸರಿಸಬೇಕೆಂದಿದೆ. ಅದರಂತೆ ಸರ್ಕಾರ ಒಟ್ಟು ಬಜೆಟಿನ ಕನಿಷ್ಠ ಶೇಕಡಾ 4.63ರಷ್ಟು ಮೊತ್ತವನ್ನು ದಲಿತ, ಆದಿವಾಸಿಗಳಿಗಾಗಿ ನಿಗದಿ ಮಾಡಬೇಕಾಗುತ್ತದೆ. ಅರ್ಥಾತ್ 2017ರ ಬಜೆಟಿನಲ್ಲಿ ದಲಿತರಿಗೆ ರೂ. 71139 ಕೋಟಿ, ಆದಿವಾಸಿಗಳಿಗೆ ರೂ. 34349 ಕೋಟಿಯಷ್ಟು ಹಣವನ್ನು ತೆಗೆದಿರಿಸಬೇಕಾಗಿತ್ತು, ಆದರೆ ಆಗಿರುವುದೆ ಬೇರೆ. ಇದು ಜಾಧವ್ ಮಾರ್ಗದರ್ಶಿ ಸೂತ್ರಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಹಣಕಾಸು ಸಚಿವಾಲಯ ಕಳೆದ ಆಗಸ್ಟ್ 23ರಂದೇ ಸಂಬಂಧಪಟ್ಟ ಎಲ್ಲಾ ಸಚಿವಾಲಯ ಹಾಗೂ ಇಲಾಖೆಗಳಿಗೆ ಸುತ್ತೋಲೆಯೊಂದನ್ನು ಕಳುಹಿಸಿ
ಅನುಸರಿಸುವಂತೆ ಆದೇಶಿಸಿದ ಹೊ

ಆಂಧ್ರ, ತೆಲಂಗಾಣಗಳಲ್ಲಿ
ವಿಶ್ವವಿದ್ಯಾನಿಲಯಗಳನ್ನು
ಮಾಡಲಾಗಿದೆ. ಆದರೆ
ನಿಗದಿಯಾಗಿರುವುದು ಬರೀ 1
ಎಐಐಎಂಎಸ್‌ನಂತಹ ಸಂಸ್ಥೆಗಳ
ವಿದ್ಯಾರ್ಥಿಗಾಗಿ ರೂ. 50 ಲಕ್ಷ
ಇದರೊಂದಿಗೆ ಹೋಲಿಸಿದಾಗ
ಸೋಗಲಾಡಿತನ ಬಯಲಾಗುತ್ತ

ಮತ್ತೊಂದು ಮುಖ್ಯ ವಿಚಾ
ಸಂಬಂಧಪಟ್ಟುದಾಗಿದೆ. ಮ್ಯಾಟ್ರಿಕ್‌ಪ
ಕ್ಕಾಗಿ ದಲಿತ ವಿದ್ಯಾರ್ಥಿಗಳಿಗೆ
ಮತ್ತು ಆದಿವಾಸಿ ವಿದ್ಯಾರ್ಥಿಗಳಿಗೆ
ತೆಗೆದಿರಿಸಲಾಗಿದೆ. ಆದರೆ 2015-
ಮಕ್ಕಳ ರೂ. 9659.61 ಕೋ
ಮಕ್ಕಳ ರೂ. 1608 ಕೋಟಿ
ಯಾಗಿಲ್ಲ, ಪ್ರಸಕ್ತ ಬಜೆಟಿನಲ್ಲಿ
ಮೊತ್ತವನ್ನು ತೆಗೆದಿರಿಸಲಾಗಿಲ್ಲ,

ಕಳೆದ ಬಜೆಟಿನಲ್ಲಿ
ಯೋಜನೆಗಳಿದ್ದರೆ ಈ ಬಾರಿ ಅದ
ಹಾಗೇ ಆದಿವಾಸಿ ಯೋಜನೆಗಳ
ಇಳಿಸಲಾಗಿದೆ. ದಲಿತ ಹಕ್ಕುಗಳ
ಉಪದೇಶ ಮಾಡುವ ಮೋದಿ
ನಡುವೆ ಅಜಗಜಾಂತರ
ಸ್ಪಷ್ಟವಾಗುವುದಿಲ್ಲವೆ?

ಮೋದಿ ಸರ್ಕಾರ ಪ್ರಸಕ್ತ ಬಜೆ
ಕಾರ್ಯಸೂಚಿಯ ಜಾರಿಗಾಗಿ
ಅದು "ದಲಿತ ಉಪಯೋಜನೆ, ಆದಿ
ಎಂದಿರುವುದನ್ನು ಬಜೆಟಿನಲ್ಲಿ
ಆದಿವಾಸಿಗಳ ಕಲ್ಯಾಣ" ಎಂಬ
ಈ ರೀತಿ ದಲಿತ ಉಪಯೋಜ
ಉಪಯೋಜನೆಗಳನ್ನು ಕೈಬಿಟ್ಟಿರುವು
ವಿಧಿಯ ಉಲ್ಲಂಘನೆಯಾಗಿದೆ.


4) ರಾಜಕೀಯ ಪಕ್ಷಗ... ತರಲಿದೆಯೆ?

ಈ ಬಾರಿಯ ಬಜೆಟಿನಲ್ಲಿ
ಭ್ರಷ್ಟಾಚಾರಮುಕ್ತಗೊಳಿಸುವ
ಈಡೇರಿಸಿರುವುದಾಗಿ ಮೋದಿ
ರಾಜಕೀಯ ವ್ಯವಸ್ಥೆಯನ್ನು ಪಾರದರ್ಶಕ
ಸರ್ಕಾರಕ್ಕೆ ನಿಜಕ್ಕೂ ಆ ಇಚ್ಛಾಶಕ್ತಿ
ಇಲ್ಲವೆಂದೆ ಉತ್ತರಿಸಬೇಕಾಗುತ್ತದೆ. ವಾಸ್ತ
ಸರ್ಕಾರದ ಪ್ರಸ್ತಾಪಗಳನ್ನು ಅಂಗೀಕರಿಸಿ
ಅಪಾರದರ್ಶಕ ವಾಗಲಿದೆ. ಪಾರದ
ಸರಳ ವಿಧಾನವೆಂದರೆ ರಾಜಕೀಯ
ಪ್ರಾಧಿಕಾರಗಳೆಂದು ಘೋಷಿಸಿ ಮಾ
ವ್ಯಾಪ್ತಿಯೊಳಗೆ ತರುವುದು. ಆದರೆ ಮೋ
ಇದನ್ನು ವಿರೋಧಿಸಿ ಸರ್ವೋಚ್ಚ ನ್ಯಾಯ
ಸಲ್ಲಿಸಿದೆ! ರಾಜಕೀಯ ಪಕ್ಷಗಳನ್ನು
ಬಿಜೆಪಿಯ ಒಳಗುಟ್ಟೆಲ್ಲ ಬಹಿರಂಗ
ಭಯವೆ ಸರ್ಕಾರ ಹಿಂದೇಟು ಹಾಕ
ಬಿಜೆಪಿಯೂ ಸೇರಿದಂತೆ ಭಾರತದ
ಇದುವರೆಗೂ ತಮ್ಮ ಘೋಷಿತ ಆದಾ
ಮೂಲಗಳ ಹೆಸರು ಮತ್ತಿತರ ವಿವರ
ನಿರಾಕರಿಸುತ್ತಾ ಬಂದಿವೆ. ಈಗಿರುವ
ಆ ವಿನಾಯಿತಿ ನೀಡುತ್ತವೆ ಎನ್ನು
ಇಂತಹ ಸನ್ನಿವೇಶದಲ್ಲಿ ಪಾರದರ್ಶಕ
ಸರ್ಕಾರ ನೀಡುತ್ತಿರುವ ಹೇಳಿಕೆಗಳೆಲ್ಲ ಬರಿ
ಮತದಾರರು ಅರಿಯಬೇಕಾಗಿದೆ.
2017ರ ಬಜೆಟಿನಲ್ಲಿ ದೇಣಿಗೆಯ ಮಿ
ಆದಾಯ ತೆರಿಗೆ ಕುರಿತ ಸೂಚನೆ
ಬಾಂಡ್ ಮುಂತಾದುವುಗಳಿಂದ ವ್ಯವಸ್ಥೆ
ಎಂದು ಭಾವಿಸುವುದು ಹಾಸ್ಯಾಸ್ಪದ

(ಅ) ದೇಣಿಗೆಯ ಮಿತಿ

ವ್ಯಕ್ತಿಗಳು ಮತ್ತು ಸಂಸ್ಥೆಗಳ
ಪಕ್ಷಗಳಿಗೆ ನಗದುರೂಪದಲ್ಲಿ ನೀಡಬ
ಮಿತಿಯನ್ನು (ರೂ. 20,000
ಇಳಿಸುವುದನ್ನು ಬಿಟ್ಟರೆ ಬೇರೇನ
ಬದಲಾವಣೆಗಳಾಗಿಲ್ಲ, ಮಿಕ್ಕೆಲ್ಲ
ಉಳಿಸಿಕೊಳ್ಳಲಾಗಿದೆ. ಅಂದರೆ
ನೀಡುವವರ ವೈಯಕ್ತಿಕ ವಿವರ
ಬೇಕಾಗಿಲ್ಲ, ಎರಡು, ಇದಕ್ಕಿಂತ

ನ್ಯಾಯಾಂಗದಲ್ಲೂ ಮೀಸಲಾತಿ ಬೇಕಿದೆ



ಜಸ್ಥಾನದಲ್ಲಿ ಸರ್ಕಾರಿ ಶುಶ್ರೂಷಕಿ ನ್ವರಿ ದೇವಿಯವರು ಮೇಲ್ಜಾತಿ ಮ್ಮಿಕೊಂಡಿದ್ದ ಬಾಲ್ಯವಿವಾಹವನ್ನು ತಡೆದಿದ್ದಕ್ಕೆ, ಐವರು ಮೇಲ್ಜಾತಿ ೇವಿಯವರ ಮೇಲೆ ಸಾಮೂಹಿಕ ರು. ಈ ಪ್ರಕರಣದ ಕುರಿತು ಗಳನ್ನು ಹಲವಾರು ಕಾರಣಗಳನ್ನು ತ್ತು, ಅಂತಹ ಕಾರಣಗಳಲ್ಲಿ ಈ

ು ಕಟ್ಟುನಿಟ್ಟಾಗಿ ಅಸ್ಪೃಶ್ಯತೆ ಆಚರಣೆ ಐವರಲ್ಲಿ (ಆರೋಪಿಗಳು) ಒಬ್ಬರೂ ಗಸನ್ನು ಮುಟ್ಟಿದ್ದಾರೆ ಎನ್ನುವುದು ೆ!!"

ುಸ್ಲಿಂ ಸಮುದಾಯದ ಮೊಹ್ಸಿನ್ ರಾಷ್ಟ್ರ ಸೇನೆಯ ಸದಸ್ಯರು ಹಾಕಿ ಲಿಂದ ಹೊಡೆದು ಕೊಂದಿದ್ದರು. ೇ ಮೂವರು ಆರೋಪಿಗಳನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ೀನು ನೀಡಲು ಕಳೆದ ತಿಂಗಳು ಈ ಕೆಳಗಿನ ಕಾರಣ ನೀಡಿದೆ.

ಇನ್ನೊಂದು ಧರ್ಮದವರಾಗಿದ್ದು ದ ಹೆಸರಿನಲ್ಲಿ ಉದ್ರೇಕಿತರಾಗಿ ೆ!!" (ಅಪ್ಪೆ)

ತರ ವಿಚಾರದಲ್ಲಿ ಅನಾಗರಿಕವಾಗಿ ವರ್ತಿಸಿದರೆ, ಮುಸ್ಲಿಂ ವಿಚಾರದಲ್ಲಿ ಅಸಾಂವಿಧಾನಿಕವಾಗಿ ವರ್ತಿಸಿದೆ. ಜಾತಿ ಮನಸ್ಸು ದಲಿತರನ್ನು ಹೇಗೆ ಮುಸ್ಲಿಮರನ್ನು ಯಜಮಾನ್ಯ ಮನಸ್ಸು ಅನ್ಯಾಯವೆಸಗುತ್ತದೋ ಅದೇರೀತಿ ೂ ಕೂಡ ದಲಿತರು-ಮುಸ್ಲಿಮರ ಜಿಕ ಹಾಗೂ ಧಾರ್ಮಿಕವಾಗಿ ಾಗಿದೆ. ನ್ಯಾಯಾಧೀಶರುಗಳೂ ಸಹ ಅಂಗವಾಗಿರುವುದರಿಂದ ಸಮಾಜದ ದರೊಳಗೂ ಜನ್ಮದತ್ತವಾಗಿರುತ್ತವೆ. ಮನಸ್ಸು 'ಕೊಲೆ, ಅತ್ಯಾಚಾರಗಳಲ್ಲಿ ಅಸ್ಪೃಶ್ಯತೆಯನ್ನು ಮೀರಿ ದುರುಳರು ಕೃತ್ಯವೆಸಗುತ್ತಾರೆ' ಎಂಬ ಸಾಮಾನ್ಯ ಅಂಶವನ್ನು ಸಹ ಮರೆಯುತ್ತದೆ. ಅದೇರೀತಿ ಧಾರ್ಮಿಕ ಯಜಮಾನ್ಯ ಮನಸ್ಸು 'ಧರ್ಮದ ಉದ್ರೇಕತೆಯಿಂದಾದರೂ ಹತ್ಯೆ ಹತ್ಯೆಯೇ' ಎಂಬ ತೀರ ಸಾಮಾನ್ಯ ಕಾನೂನು ಭಾಷೆಯನ್ನೇ ಮರೆತುಬಿಡುತ್ತದೆ. ಹೀಗಿರುವಾಗ ದಲಿತರ-ಮುಸ್ಲಿಮರ ಪರವಾಗಿ ನ್ಯಾಯಾಲಯಗಳು ನಿಲ್ಲುತ್ತವೆಯೇ? ಇತಿಹಾಸದ ನಿದರ್ಶನಗಳು ಇಲ್ಲವೆಂದೇ ಉತ್ತರಿಸುತ್ತಿದೆ. ಬೆಲ್ಚಿ, ಪಿಪ್ರ, ಖೈರ್ಲಾಂಜಿ, ಕಂಬಾಲಪಲ್ಲಿ, ಕರಂಚೇಡು, ನಾಗಲಾಪಲ್ಲಿ, ಜರುನ್ವಾರ್, ಕಿಲ್ವೆನ್ಮಣಿ, ಗೋದ್ರಾ ಹತ್ಯಾಕಾಂಡ, ಮುಂಬೈ-ಹೈದರಾಬಾದ್ ಹತ್ಯಾಕಾಂಡ. ಅಖ್ಲಾಕ್ ಮುಂತಾದ ಪ್ರಕರಣಗಳು ಸಾಕ್ಷಿ ಒದಗಿಸುತ್ತಲೇ ಇವೆ.

ಆದಿವಾಸಿಗಳನ್ನಂತು ನಮ್ಮ ದೇಶದ ಕಾನೂನುಗಳು ಅಪರಾಧಿ ಬುಡಕಟ್ಟುಗಳು ಎಂಬ ಹೆಸರಿನಲ್ಲಿಯೇ ಕರೆದುಬಿಟ್ಟಿವೆ. ಭಗತ್ ಸಿಂಗ್ ಅಥವಾ ಕಾರ್ಲ್ ಮಾರ್ಕ್ಸ್ ಪುಸ್ತಕಗಳಿದ್ದರೆ ಸಾಕು ನಕ್ಸಲೈಟರೆಂದು ಹಣೆಪಟ್ಟಿ ಕಟ್ಟಿ ಜೈಲಿಗೆ ತಳ್ಳಲಾಗುತ್ತದೆ. ಉದ್ಯಮಿಗಳ ನಿಸರ್ಗ ಲೂಟಿಯನ್ನು ತಡೆಯುವ ಪ್ರತಿಯೊಬ್ಬ ಭಾರತೀಯರೂ ಭಯೋತ್ಪಾದಕರಂತೆ ಕಂಡುಬಿಡುತ್ತಾರೆ. ತಕ್ಷಣವೇ ಜೈಲು ಸೇರಿಸುತ್ತಾರೆ ಇಲ್ಲವೆ ಬಂದೂಕು ಹಾರಿಸಿ ಫೋಟೋ ತೆಗೆಸಿಕೊಳ್ಳುತ್ತಾರೆ.


ಇಂತಹ ಪರಿಸ್ಥಿತಿಯಲ್ಲಿ ನಮ್ಮ ನ್ಯಾಯಾಲಯಗಳು ನಿಷ್ಪಕ್ಷಪಾತ ತೀರ್ಪು ನೀಡುವಲ್ಲಿ ಸಫಲವಾಗಿವೆಯೇ ಎಂಬುದಕ್ಕೆ ಮೇಲಿನ ಮೂರೂ ಜನಾಂಗಗಳ ಬಗ್ಗೆ ನಮ್ಮ ನ್ಯಾಯಾಲಯಗಳು ನಡೆದುಕೊಂಡಿರುವ ರೀತಿ ಅದರ ವಿಫಲತೆಯನ್ನು ಎತ್ತಿ ತೋರಿಸುತ್ತಿವೆ. ಬೇಲಿಯೇ ಎದ್ದು ಹೊಲ ಮೇಯುತ್ತಿರುವಾಗ ಜೈಲಿನಲ್ಲಿ ತುಂಬಿರುವವರು ಯಾವ ಜನಾಂಗದವರಾಗಿರುತ್ತಾರೆ? ಉತ್ತರ ಸುಸ್ಪಷ್ಟ.

2015 ರಲ್ಲಿರುವಂತೆ ಭಾರತದಲ್ಲಿನ ಜೈಲಿನ ಖೈದಿಗಳ ಅಂಕಿಅಂಶಗಳ ಪ್ರಕಾರ ಭಾರತದ ವಿವಿಧ ಜೈಲುಗಳಲ್ಲಿ ಶೇ. 22 ರಷ್ಟು ದಲಿತರು, ಶೇ. 21 ರಷ್ಟು ಮುಸ್ಲಿಮರು ಮತ್ತು ಶೇ. 12 ರಷ್ಟು ಆದಿವಾಸಿಗಳು ಜೈಲುವಾಸಿಗಳಾಗಿದ್ದಾರೆ. 2011 ರ ಜನಗಣತಿಯ ಪ್ರಕಾರ ದೇಶದಲ್ಲಿ ಈ ಜನಾಂಗಗಳ ಪಾಲು ಶೇ. 40. ಅಂದರೆ ದಲಿತರ ಜನಸಂಖ್ಯೆ ಶೇ. 17, ಮುಸ್ಲಿಮರದ್ದು ಶೇ. 14 ಹಾಗೂ ಆದಿವಾಸಿಗಳದ್ದು ಶೇ. 9. ಈ ಮೂರು ಜನಾಂಗಗಳೂ ದೇಶದ ಜನಸಂಖ್ಯೆಯಲ್ಲಿ ಶೇ. 40ರಷ್ಟು ಪಾಲು ಹೊಂದಿವೆ. ಆದರೆ ಜೈಲಿನಲ್ಲಿರುವ ಸದಸ್ಯರಲ್ಲಿ ಈ ಜನಾಂಗಗಳ ಪಾಲು ಶೇ. 55!! ತಪ್ಪು ಮಾಡಿದ್ದಾರೆ ಅದಕ್ಕಾಗಿ ಜೈಲು ಸೇರಿದ್ದಾರೆ ಎಂದು ಕೈತೊಳೆದುಕೊಳ್ಳುವವರೇ ಹೆಚ್ಚು. ಮೇಲಿನ ಎರಡು ತೀರ್ಪುಗಳು ನಿರೂಪಿಸಿರುವಂತೆ ನ್ಯಾಯಾಧೀಶರ ಪೂರ್ವಾಗ್ರಹವನ್ನ ಪ್ರಶ್ನಿಸುವವರಿಲ್ಲ. ತೀರ ಇತ್ತೀಚೆಗೆ ಮಾಲೆಗಾವ್ ಸ್ಫೋಟದ ಆರೋಪದಲ್ಲಿ ಬಂಧಿಸಲಾಗಿದ್ದ 9 ಮುಸ್ಲಿಂ ಯುವಕರನ್ನು ಸಾಕ್ಷಿಗಳಿಲ್ಲದ ಕಾರಣ ಕೋರ್ಟ್ ಖುಲಾಸೆಗೊಳಿಸಿತು. 2014 ರಲ್ಲಿ ಉತ್ತರ ಪ್ರದೇಶದಲ್ಲಿ ನಾಸಿ ಹುಸೇನನ್ನು 7 ವರ್ಷಗಳ ಕಾಲ ಬಂಧಿಸಿ ಸಾಕ್ಷಿಗಳಿಲ್ಲದ ಕಾರಣ ಖುಲಾಸೆಗೊಳಿಸಿತ್ತು, ಅದೇರೀತಿ 2013 ರಲ್ಲಿ ಪಾಟ್ನಾ-ಛತ್ತೀಸ್‌ಗಡದ 14 ಮುಸಲ್ಮಾನರನ್ನು, ಜಮ್ಮುಕಾಶ್ಮೀರದಲ್ಲಿ 3 ಮುಸಲ್ಮಾನರನ್ನು ಖುಲಾಸೆಗೊಳಿಸಲಾಯಿತು. ಈ ಅಮಾಯಕರೆಲ್ಲರನ್ನೂ ಭಯೋತ್ಪಾದಕರೆಂದು ಬಿಂಬಿಸಿ ಜೈಲಿಗಟ್ಟಲಾಗಿತ್ತು. ಕಳೆದೆರಡು ದಶಕದಲ್ಲಿ ಇಂತಹ ಪ್ರಕರಣಗಳು ನಮಗೆ ಸಾಕಷ್ಟು ಸಿಗುತ್ತವೆ. ಮತ್ತೊಂದು ಕಡೆ ದಲಿತರ ಮೇಲಿನ ನರಮೇದಗಳಿಗೆ ಒಂದಕ್ಕೂ ನ್ಯಾಯ ಸಿಕ್ಕಿಲ್ಲ. ಕೊಂದಿರುವುದು ನಿಜ ಆದರೆ ಕೊಂದವರಾರೆಂದು ದಶಕಗಳ ನಂತರವೂ ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಪತ್ತೆ ಹಚ್ಚಲಾಗಿಲ್ಲ. ಮುಸ್ಲಿಂ ಎಂಬ ಕಾರಣಕ್ಕಾಗಿ ಅನುಮಾನಿಸಿ ವರ್ಷಾನುಗಟ್ಟಲೆ ಜೈಲಿಗಟ್ಟುವ ಕಾನೂನು ವ್ಯವಸ್ಥೆ ಮೇಲ್ಜಾತಿಯೆಂಬ ಕಾರಣಕ್ಕಾಗಿ ದಲಿತರನ್ನು ಸುಟ್ಟು ಬೂದಿಯಾಗಿಸಿದರೂ ಸಾಕ್ಷಿಗಳಿಲ್ಲವೆಂದು ಶಿಕ್ಷಿಸುವುದಿಲ್ಲ. ಪ್ರತಿಕೂಲ ಸಾಕ್ಷಿಗಳುಂಟಾದರೂ ಮರು ತನಿಖೆಗೆ ಆದೇಶಿಸುವುದಿಲ್ಲ. ಇದಕ್ಕೆ ನ್ಯಾಯಾಲಯದಲ್ಲಿರುವ ಜಾತೀಯ-ಧಾರ್ಮಿಕ ಪೂರ್ವಾಗ್ರಹವಲ್ಲದೆ ಬೇರೇನು ಕಾರಣ?

ನ್ಯಾಯಾಂಗದಲ್ಲಿರುವ ಈ ಪೂರ್ವಾಗ್ರಹ ಮನಸ್ಥಿತಿಯನ್ನು ನ್ಯಾಯಾಂಗ ವ್ಯವಸ್ಥೆಯೊಳಗಿರುವವರೇ ಪ್ರಶ್ನಿಸಿದ್ದಾರೆ. 2014 ರಲ್ಲಿ ಮದ್ರಾಸ್ ಹೈಕೋರ್ಟ್‌ಗೆ 12 ನೂತನ ನ್ಯಾಯಾಧೀಶರ ನೇಮಕಾತಿಗೆ ಕೊಲಿಜಿಯಮ್ ಮೂಲಕ ಚಾಲನೆ ನೀಡಲಾಗಿತ್ತು. ಆದರೆ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳಲು ಬಾರ್ ಕೌನ್ಸಿಲ್ ಮೂರು ಹಿರಿಯ ನ್ಯಾಯಾಧೀಶರನ್ನು ಆಯ್ಕೆ ಮಾಡಿತ್ತು. ಆದರೆ ಅವರೆಲ್ಲರೂ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾದ್ದರಿಂದ ಅದನ್ನು ಇತರ ನ್ಯಾಯಾಧೀಶರು ಪ್ರಶ್ನಿಸಿ ಹೊಸ ಸದಸ್ಯರನ್ನು ಆಯ್ಕೆ ಮಾಡಬೇಕಾಗಿ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದ್ದರು.

ಕೆಳಹಂತದ ನ್ಯಾಯಾಲಯಗಳಲ್ಲಂತೂ ತಾರತಮ್ಯ ಮನೆ ಮಾಡಿಕೊಂಡಿದೆ. 2013 ರಲ್ಲಿ ಅಲಹಾಬಾದಿನಲ್ಲಿ ಜಿಲ್ಲಾ ನ್ಯಾಯಾಧೀಶರೊಬ್ಬರು ತಮಗೆ ಗೊತ್ತು ಮಾಡಿದ ಕೊಠಡಿಯನ್ನು ಗಂಗಾಜಲದಿಂದ ಶುದ್ಧೀಕರಿಸಿದ್ದರು. ಅದಕ್ಕೆ ಕಾರಣ ಈ ಹಿಂದೆ ಆ ಕೊಠಡಿಯಲ್ಲಿದ್ದವರೊಬ್ಬರು ದಲಿತ ನ್ಯಾಯಾಧೀಶರು! ಅದೇ ವರ್ಷದಲ್ಲಿ ಮಧ್ಯಪ್ರದೇಶದ ಜಿಲ್ಲಾ ನ್ಯಾಯಾಧೀಶರೊಬ್ಬರು ಎಲ್ಲಾ ಶಾಲಾ ಮಕ್ಕಳಿಗೂ ಬ್ರಾಹ್ಮಣ ಜ್ಯೋತಿಷಿಗಳ ಬಳಿ ಭವಿಷ್ಯ ಕೇಳಿಸಿ ಶಾಲೆಗೆ ದಾಖಲಿಸಬೇಕು ಎಂದಿದ್ದರು. ಆಗ ಮಗುವಿನ ವಿದ್ಯಾಭ್ಯಾಸದ ಭವಿಷ್ಯ ತಿಳಿಯುತ್ತದೆ ಎಂಬುದು ಅವರ ವಾದವಾಗಿತ್ತು! ಬಾಂಬೆ ಹೈಕೋರ್ಟ್ ಜ್ಯೋತಿಷ್ಯವನ್ನು ವಿಜ್ಞಾನವೆಂದು ತೀರ್ಪಿತ್ತಿದ್ದನ್ನು ಇಲ್ಲಿ ನಾವು ಸ್ಮರಿಸಬಹುದು. ಹೀಗಿರುವಾಗ ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕೆ ಬೇಡವೆ?

2013 ರಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರು ಗುವಾಹಟಿಯಲ್ಲಿ ನಡೆದ ಬಾರ್ ಕೌನ್ಸಿಲ್ ವಿಚಾರಸಂಕಿರಣದಲ್ಲಿ ಭಾರತದ ನ್ಯಾಯಾಂಗ ವ್ಯವಸ್ಥೆ ಸುಧಾರಣೆಯಾಗಬೇಕು ಎಂದು ಮಾತನಾಡುತ್ತಾ "ಜನಸಾಮಾನ್ಯರಿಗೆ ತ್ವರಿತಗತಿ ಮತ್ತು ಗುಣಾತ್ಮಕ ತೀರ್ಪು ನೀಡಲು ತುರ್ತಾಗಿ ನ್ಯಾಯಾಂಗ ವ್ಯವಸ್ಥೆ ಸುಧಾರಿಸಬೇಕಿದೆ. ಕೇವಲ ತೀವ್ರಗತಿಯಲ್ಲಿ ತೀರ್ಪು ನೀಡುವುದಲ್ಲ, (ದೇಶದ) ಜನತೆಗೆ ಸುಲಭವಾಗಿ ಅದು ದಕ್ಕಬೇಕು ಅದರಲ್ಲೂ ಸಮಾಜದ ದುರ್ಬಲ ವರ್ಗದ ಜನರಿಗೆ ಅದು ಸುಲಭವಾಗಿ ದಕ್ಕಬೇಕು" ಎಂದಿದ್ದರು. ರಾಷ್ಟ್ರಪತಿಗಳ ಮೇಲಿನ ಮಾತುಗಳಲ್ಲಿಯೇ ದುರ್ಬಲ ವರ್ಗದವರಿಗೆ ಸುಲಭಕ್ಕೆ ನ್ಯಾಯ ಸಿಗುತ್ತಿಲ್ಲ ಎಂಬುದು ತಿಳಿದುಬರುತ್ತಿದೆ. ಈ ಹಿಂದೆ ರಾಷ್ಟ್ರಪತಿಗಳಾಗಿದ್ದ ಕೆ.ಆರ್.ನಾರಾಯಣನ್‌ರವರೂ ಸಹ ಕೊಲಿಜಿಯಮ್ ವಿಧಾನದಲ್ಲಿ ದುರ್ಬಲ ವರ್ಗದವರಿಗೆ ಪ್ರಾತಿನಿಧ್ಯ ಕಲ್ಪಿಸಬೇಕೆಂದು ಕಿವಿಮಾತು ಹೇಳಿದ್ದರು.



ದಲಿತರ, ಆದಿವಾಸಿಗಳ ಮತ್ತು ಮುಸ್ಲಿಮರ ಪರ ಹಲವು ದಕ್ಷ ನ್ಯಾಯಾಧೀಶರು ನ್ಯಾಯದ ತೀರ್ಪು ನೀಡಿದ್ದಾರೆ. ನ್ಯಾಯಾಂಗದ ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಅಂತಹವರ ಬಗ್ಗೆ ನಿಜಕ್ಕೂ ಗೌರವವಿದೆ. ಆದರೆ ಅಂತಹವರ ಪ್ರಮಾಣ ತೀರ ಕಡಿಮೆ ಇದೆ. ಇದಕ್ಕೆ ಕಾರಣವೇನೆಂದರೆ ನ್ಯಾಯಾಧೀಶರೆಲ್ಲರಿಗೂ ದಲಿತ-ಅಲ್ಪಸಂಖ್ಯಾತ-ಆದಿವಾಸಿ ಸಂವೇದನೆಗಳಿರುವುದಿಲ್ಲ. ಅಷ್ಟೇ ಏಕೆ, ಮಹಿಳಾ ಸಂವೇದನೆಯೂ ಇರುವುದಿಲ್ಲ. ಆದರೆ ದೇಶದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ದುರ್ಬಲ ವರ್ಗದವರ ಪ್ರಾತಿನಿಧ್ಯ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಇದೆ. ಕಳೆದ 6 ವರ್ಷಗಳಿಂದ ಒಬ್ಬ ಪರಿಶಿಷ್ಟ ಜಾತಿಯ ನ್ಯಾಯಾಧೀಶರಿಗೆ ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡಲಾಗಿಲ್ಲ. ಏಕೆಂದರೆ ರೋಸ್ಟರ್ ಪದ್ಧತಿ ಉನ್ನತ ನ್ಯಾಯಾಲಯಗಳ ಹುದ್ದೆಗಳಿಗಿಲ್ಲ. ಹಾಗೆಯೇ ಕಳೆದ 10 ವರ್ಷಗಳಲ್ಲಿ ಮೂವರು ಮಹಿಳೆಯರಿಗೆ ಮಾತ್ರ ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡಲಾಗಿದೆ. ಅದರಲ್ಲಿ ಇಬ್ಬರು ನಿವೃತ್ತಿ ಹೊಂದಲಿದ್ದಾರೆ. ಕಳೆದ ವಾರ ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡಿದ ನ್ಯಾಯಾಧೀಶರಲ್ಲಿ ಮಹಿಳೆಯರೇ ಇಲ್ಲ.

ಆದ್ದರಿಂದ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ದುರ್ಬಲ ವರ್ಗದವರ ಪ್ರಾತಿನಿಧ್ಯವಿರಬೇಕಿದೆ. ಈ ಪ್ರಾತಿನಿಧ್ಯದಿಂದ ನ್ಯಾಯಾಂಗದ ಮೇಲಿನ ನಂಬಿಕೆ ಹೆಚ್ಚಾಗುವುದಂತೂ ನಿಜ. ಆದರೆ ಈ ಬೆಳವಣಿಗೆಯಿಂದಲೇ ದುರ್ಬಲ ವರ್ಗದವರಿಗೆ ನೂರಕ್ಕೆ ನೂರರಷ್ಟು ನ್ಯಾಯ ಸಿಗುತ್ತದೆ ಎಂದಲ್ಲ. ನ್ಯಾಯ ಮತ್ತು ದುರ್ಬಲ ವರ್ಗದವರ ನಡುವಿನ ಅಂತರ ಕಡಿಮೆಯಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲೂ ಮೀಸಲಾತಿಗೆ ಅವಕಾಶ ಮಾಡಿಕೊಡಬೇಕಾಗಿದೆ. ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು ಎತ್ತಿ ಹಿಡಿಯುವ ನ್ಯಾಯಾಲಯ ತಾನೂ ಸಹ ಅದನ್ನು ಪಾಲಿಸಬೇಕಿದೆ.

■ ವಿಕಾಸ ಆರ್ ಮೌರ್ಯ

ೆ್ ಮೂಲಕ ಪಾವತಿಸಬೇಕಲ್ಲದೆ ವರಗಳನ್ನೂ ಪ್ರಕಟಿಸಬೇಕು.

ು ದೇಣಿಗೆಯನ್ನು ರೂ 2000ಕ್ಕೆ ವ್ಯಕ್ತಿಗಳು/ಸಂಸ್ಥೆಗಳು ಹಿಂದಿನಂತೆ ೂ ದೇಣಿಗೆ ನೀಡಬಹುದಾಗಿದೆ. ಹಿಂದೆ ರೂ. 20,000ಕ್ಕೆ ಒಂದು ಸಾಕಾಗಿದ್ದರೆ ಈಗ ರೂ 2000ದ ಮಾಡಬೇಕು, ಅಷ್ಟೆ! ಇದ್ಯಾವ ೆ ನಗದು ದೇಣಿಗೆ ನೀಡುವವರ ಸಾರ್ವಜನಿಕರಿಗೆ ಲಭ್ಯವಾಗುವುದೆ ೆ. ಮೋದಿ ಸರ್ಕಾರ ಯಾರಿಗೆ ು ಹೊರಟಿದೆ?

ವತಿ: ದೇಣಿಗೆಯ ಮೊತ್ತ ರೂ. ದ್ದಲ್ಲಿ ದಾನಿಯ ಅಥವಾ ಸಂಸ್ಥೆಯ ಬ ಈಗಾಗಲೆ ಇರುವ ನಿಯಮ ಪರಿಣಾಮಕಾರಿಯಾಗಿಲ್ಲ ಎಂದು ation for Democratic ದ ಅಧ್ಯಯನವೊಂದು ತಿಳಿಸುತ್ತದೆ. ಪ್ರಸ್ತ ಬಜೆಟಿನಲ್ಲಿ "ರಾಜಕೀಯ ನ್ನು ಚೆಕ್ ಅಥವಾ ಡಿಜಿಟಲ್ ೀಕರಿಸುವ ಹೊಸ" ಎಂಬ ಹಳೆ ಘೋಷಿಸಲಾಗಿದೆ. ಮೋದಿ ಸರ್ಕಾರ ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿದ್ದರೆ ಅದು ಇದನ್ನು "ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಎಲ್ಲಾ ದೇಣಿಗೆಗಳನ್ನು ಚೆಕ್ ಅಥವಾ ಡಿಜಿಟಲ್ ರೂಪದಲ್ಲಿ ಸ್ವೀಕರಿಸಬೇಕು" ಎಂದು ಬದಲಾಯಿಸಬೇಕಿತ್ತು. ಆದರೆ ಇದನ್ನು ಮಾಡದಿರುವುದು ಅದರ ಭ್ರಷ್ಟಾಚಾರಮುಕ್ತಿಯ ಹೇಳಿಕೆಗಳೆಲ್ಲ ಬರೀ ಘೋಷಣೆಗೆ ಸೀಮಿತ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ದೇಶಾದ್ಯಂತ ನಗದುರಹಿತ ವಹಿವಾಟು ಜಾರಿಗೊಳಿಸಲು ಭಾರಿ ಉತ್ಸುಕತೆಯಿಂದಿರುವ, ಬೀದಿಬದಿ ವ್ಯಾಪಾರಿಗಳು ಸಹಿತ ಕಾರ್ಡುಜ್ಜುವ ಯಂತ್ರಗಳನ್ನು ಇಟ್ಟುಕೊಳ್ಳಲು ಉತ್ತೇಜಿಸುತ್ತಿರುವ ಸರ್ಕಾರಕ್ಕೆ ರಾಜಕೀಯ ಪಕ್ಷಗಳ ದೇಣಿಗೆಯನ್ನು ನಗದುರಹಿತವಾಗಿಸುವ ಬಗ್ಗೆ ಯಾಕಿಷ್ಟು ನಿರುತ್ಸಾಹ? ಈ ಬಗ್ಗೆ ಮತದಾರರು ಸ್ವಲ್ಪ ಗಂಭೀರವಾಗಿ ಚಿಂತಿಸಬೇಕು.

(ಆ) ಆದಾಯ ತೆರಿಗೆ

ಪಕ್ಷಗಳ ಆದಾಯ ತೆರಿಗೆ ವಿಚಾರದಲ್ಲೂ "ಪಕ್ಷಗಳು ವಿವರಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸಬೇಕು.....: ನಿಯಮ ಪರಿಪಾಲನೆ ಮಾಡಿದರಷ್ಟೆ ತೆರಿಗೆ ವಿನಾಯಿತಿ ಮುಂದುವರಿಯಲಿದೆ" ಎಂಬ ವಾಕ್ಯಗಳಿಂದ ವಿಶೇಷ ವ್ಯತ್ಯಾಸವೇನೂ ಆಗದು. ಯಾಕೆಂದರೆ ಪ್ರತಿಯೊಂದು ಪಕ್ಷವೂ ಲೆಕ್ಕಪತ್ರ ಇಟ್ಟುಕೊಳ್ಳಬೇಕು, ಆಡಿಟ್ ಮಾಡಿಸಬೇಕು, ಪ್ರತಿ ವರ್ಷ ಆದಾಯ ತೆರಿಗೆ ಪಾವತಿಸಿ ಅದರ ವಿವರಗಳನ್ನು ಸಲ್ಲಿಸಬೇಕು ಎಂಬ ನಿಯಮ ಈಗಾಗಲೆ ಇದೆ. ಆದರೆ ಬರೀ ಆಂತರಿಕ ಆಡಿಟ್ ಸಾಕು, ಬಾಹ್ಯ ಆಡಿಟ್‌ನ ಅವಶ್ಯಕತೆ ಇಲ್ಲ ಎಂದಿರುವಾಗ ಪಕ್ಷಗಳಿಂದ ಸಲ್ಲಿಸಲ್ಪಡುವ ವಿವರಗಳು ಎಷ್ಟು ವಿಶ್ವಾಸಾರ್ಹ ಎಂಬ ಪ್ರಶ್ನೆಗಳಿವೆ. ಇದಲ್ಲದೆ ಅನೇಕ ಪ್ರಾದೇಶಿಕ ಪಕ್ಷಗಳು ವಿವರಗಳನ್ನು ಸಲ್ಲಿಸುತ್ತಲೇ ಇಲ್ಲ. ತೆರಿಗೆ ಇಲಾಖೆಯೂ ವಿವರಗಳನ್ನು ಕಾಲಕಾಲಕ್ಕೆ ಸರಿಯಾದ ಪರಿಶೀಲನೆಗೆ ಒಳಪಡಿಸುತ್ತಿಲ್ಲ ಎಂಬ ಆರೋಪಗಳಿವೆ. ಇಂಥಾ ಪರಿಸ್ಥಿತಿ ಇರುವಾಗ ಅದೇ ಹಳೆ ಪದ್ಧತಿಗಳು ಹಾಗೇ ಮುಂದುವರಿಯಲಿರುವುದು ನಿಸ್ಸಂಶಯ. ರಾಜಕೀಯ ಪಕ್ಷಗಳ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹೆಚ್ಚಲಿದೆ, ಕಪ್ಪುಹಣದ ಉತ್ಪಾದನೆಗೆ ತಡೆ ಬೀಳಲಿದೆ ಎಂಬ ಹೇಳಿಕೆಗಳನ್ನು ಒಂದು ಚಿಟಿಕೆ ಉಪ್ಪಿನೊಂದಿಗೆ ಸ್ವೀಕರಿಸಬೇಕಾಗಿದೆ.

(ಇ) "ಮತದಾರರ ಬಾಂಡ್"

ಮೋದಿ ಸರ್ಕಾರದ "ಮತದಾರರ ಬಾಂಡ್" (Electoral Bond) ಎಂಬ ವಿನೂತನ ಐಡಿಯವೂ ಅಪಾರದರ್ಶಕತೆಯನ್ನು ಮುಂದುವರಿಸಲಿದೆ. ಕಾರಣವೇನೆಂದರೆ ಪಕ್ಷಗಳು ಇಂತಹ ಬಾಂಡ್‌ಗಳನ್ನು ಬ್ಯಾಂಕುಗಳ ಮೂಲಕ ಪಡೆಯಬೇಕಾಗಿರುವುದರಿಂದ ಬಾಂಡ್ ಖರೀದಿಸಿದ ದಾನಿಗಳ ಹೆಸರನ್ನು ಬಹಿರಂಗಪಡಿಸುವ ದರ್ದು ಅವುಗಳಿಗಿರುವುದಿಲ್ಲ. ಹೀಗಾಗಿ ದಾನಿಗಳು ಯಾರೆಂದು ಪಕ್ಷಕ್ಕೆ ತಿಳಿಯುತ್ತದಾದರೂ ಸಾರ್ವಜನಿಕರಿಗೆ ತಿಳಿಯುವುದಿಲ್ಲ. ದಾನಿಗಳ ಹೆಸರನ್ನು ಬಹಿರಂಗಪಡಿಸುವ ಉದ್ದೇಶವೂ ಸರ್ಕಾರಕ್ಕೆ ಇರುವ ಹಾಗಿಲ್ಲ. ಏಕೆಂದರೆ ಈಗ ಹೊಸ ವಿಧೇಯಕವೊಂದರ ಮೂಲಕ ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ಮಾಡಿ ಚುನಾವಣಾ ಆಯೋಗಕ್ಕೆ ಬಾಂಡ್‌ಗಳ ವಿವರಗಳನ್ನು ಸಲ್ಲಿಸಬೇಕಾಗಿಲ್ಲ ಎಂಬ ನಿಯಮವೊಂದನ್ನು ತರಲು ಉದ್ದೇಶಿಸಲಾಗಿದೆ. ಆದುದರಿಂದ ಅಂತಿಮವಾಗಿ ಬಾಂಡ್ ಯೋಜನೆ ಜಾರಿಯಾದಲ್ಲಿ ರಾಜಕೀಯ ಪಕ್ಷಗಳಿಗೆ ಇನ್ನಷ್ಟು ಅನುಕೂಲವೆ ಆಗಲಿದೆ.

5) ಕಾಳಧನಿಕರ ಆಸ್ತಿ ಮುಟ್ಟುಗೋಲಿಗೆ ಮತ್ತೊಂದು ಕಾನೂನು ಬೇಕೆ?

ಮೋದಿ ಸರ್ಕಾರದ ಬಜೆಟಿನಲ್ಲಿ ವಿದೇಶಕ್ಕೆ ಕಾಲ್ಕೀಳುವಂತಹ ದೊಡ್ಡ ದೊಡ್ಡ ಖದೀಮರ ಆಸ್ತಿಗಳನ್ನು ಮುಟ್ಟುಗೋಲು ಹಾಕುವ ಸಲುವಾಗಿ ಹೊಸ ಕಾಯ್ದೆಯೊಂದನ್ನು ರಚಿಸುವ ಭರವಸೆ ನೀಡಲಾಗಿದೆ. ಆದರೆ ಇದಕ್ಕೆ ಈಗಾಗಲೆ ಇರುವಂತಹ ಕಾನೂನುಗಳೆ ಧಾರಾಳ ಸಾಕು. ನಿಜವಾಗಿ ಬೇಕಾಗಿರುವುದು ಹೊಸ ಕಾನೂನುಗಳಲ್ಲ, ರಾಜಕೀಯ ಇಚ್ಛಾಶಕ್ತಿ! ಅದಿಲ್ಲದ ಕಾರಣಕ್ಕೆ ಲಲಿತ್ ಮೋದಿ, ವಿಜಯ ಮಲ್ಯರಂಥವರು ಪಾರಾಗಲು ಸಾಧ್ಯವಾಗಿದೆ. ಕಾರ್ಪೊರೇಟುಗಳು ಬ್ಯಾಂಕುಗಳಿಂದ ಕೋಟಿಕೋಟಿ ಸಾಲ ಪಡೆದು ಪಂಗನಾಮ ಹಾಕಲು ಸಾಧ್ಯವಾಗಿದೆ.

ಈಗ ಹೇಳಿ ಮೋದಿ ಸರ್ಕಾರದ ಈ ಬಾರಿಯ ಬಜೆಟ್ ನಿಜಕ್ಕೂ ಯಾರ ಪರವಾಗಿದೆ?

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: ವಿವಿಧ ಮೂಲಗಳಿಂದ)

ಮೋದಿಯ ಹೆಸರನ್ನು ತೂರಿಬಿಡುವ ಚೇಲಾ ಮಾಧ್ಯಮ


ಭಾರತೀಯ ಸೇನೆಯನ್ನು ತಮ್ಮ ವೈಯಕ್ತಿಕ ವೈಭವೀಕರಣಕ್ಕೆ ಹಿಂದಿನ ಯಾವುದೇ ಪ್ರಧಾನಿಯೂ ದುರ್ಬಳಕೆ ಮಾಡಿರಲಿಲ್ಲ. ಆದರೆ ಸೇನೆಯ ಹೆಸರನ್ನು ತನ್ನ ಸ್ವಾರ್ಥಕ್ಕೆ ದುರ್ಬಳಕೆ ಮಾಡಿದವರಲ್ಲಿ ಮೋದಿಯೇ ಮೊಟ್ಟಮೊದಲ ಪ್ರಧಾನಿ. ಇಂತಹ ಸ್ವಾ ಬುದ್ಧಿಯವರನ್ನೂ ದೇಶಪ್ರೇಮಿ ಅನ್ನಬೇಕೆ? ಹಿಂದಿನ 20 ವರ್ಷಗಳಿಂದಲೂ ಬೇರೆ ಬೇರೆ ಸರಕಾರಗಳಿದ್ದಾಗಲೂ ಇಂತಹದ್ದೇ ಆರು ಸರ್ಜಿಕಲ್ ದಾಳಿಗಳು ಯಶಸ್ವಿಯಾಗಿ ನಡೆದಿವೆ ಎಂದು ಅಂದು ಇಂತಹ ಸರ್ಜಿಕಲ್ ದಾಳಿಗಳಲ್ಲಿ ನೇರವಾಗಿ ಭಾಗವಹಿಸಿದ್ದ ಸೇನಾಧಿಕಾರಿಗಳೇ ಹೇಳಿದ್ದಾರೆ. ಆದರೆ ಆಗಿನ ಪ್ರಧಾನಿಗಳು ಮೋದಿಯಂತೆ ಆ ಸರ್ಜಿಕಲ್ ದಾಳಿಗಳನ್ನು ತಮ್ಮ ಸ್ವಂತದ ವೈಭವೀಕರಣಕ್ಕೆ ದುರ್ಬಳಕೆ ಮಾಡಿರಲಿಲ್ಲ.

ಎಲ್ಲಾ ದೇಶಗಳೂ ದೇಶದ ಸುರಕ್ಷಿತತೆಯ ದೃಷ್ಟಿಯಿಂದ ಸರ್ಜಿಕಲ್ ದಾಳಿಗಳನ್ನು ಗುಟ್ಟಾಗಿಯೇ ಇಡಬೇಕೆಂಬ ಮಿಲಿಟರಿ ಸ್ಟ್ರೇಟೇಜಿಕ್ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತವೆ. ಆದರೆ ಮೋದಿಯಂತಹ ನಾಟಕಕಾರನಿಗೆ ಇವೆಲ್ಲಾ ಅರ್ಥವಾಗುವುದಿಲ್ಲ. ಹಾಗಾಗಿ ಈಗಿನ ಉತ್ತರಪ್ರದೇಶದ ಚುನಾವಣೆ ಪ್ರಚಾರದ ವೇಳೆ ಸರ್ಜಿಕಲ್ ದಾಳಿ ಬಗ್ಗೆ ಮೋದಿ ಅಡಿಗಡಿಗೆ ಉಲ್ಲೇಖಿಸಿ ತನ್ನ ಬೆನ್ನು ತಾನೇ ತಟ್ಟಿಕೊಂಡು ನಿಜವಾದ ಯೋಧರಿಗೆ ಅವಮಾನಿಸುತ್ತಿದ್ದಾರೆ. ಕೆಲತಿಂಗಳ ಹಿಂದೆ ನಡೆದ ಸರ್ಜಿಕಲ್ ದಾಳಿಯಲ್ಲಿ ಭಾಗವಹಿಸಿದ್ದ ಇಪ್ಪತ್ತೊಂದು ಯೋಧರನ್ನು ಮೊನ್ನೆ ಗಣರಾಜ್ಯ ದಿನದಂದು ಶೌರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಈ ಯೋಧರ ಹೆಸರು ಬಹಿರಂಗಪಡಿಸಿಲ್ಲ). ಹಾಗಾದರೆ ಹಿಂದಿನ ಸರ್ಜಿಕಲ್ ದಾಳಿಗಳಲ್ಲಿ ಭಾಗವಹಿಸಿದ್ದ ಯೋಧರನ್ನು ಗುರುತಿಸಿ ಅವರಿಗೂ ಶೌರ್ಯ ಪ್ರಶಸ್ತಿ ಯಾಕೆ ಕೊಡಬಾರದು? ಅವರೆಲ್ಲ ಜೀವದ ಹಂಗು ತೊರೆದು ಪಾಕ್ ಗಡಿಯೊಳಗೆ ನುಗ್ಗಿ ವೈರಿಗಳನ್ನು ಸದೆಬಡಿದಿದ್ದು ದೇಶಸೇವೆ ಅಲ್ಲವೇ? ಅಂತಹ ಹಳೆಯ ಯೋಧರನ್ನು ಗುರುತಿಸಿ ಅವರಿಗೂ ಶೌರ್ಯ ಪ್ರಶಸ್ತಿ ಕೊಡದ ಈಗಿನ ಮೋದಿ ಸರಕಾರವನ್ನೇ ದೇಶದ್ರೋಹಿ ಅನ್ನಬೇಕಾಗುತ್ತದೆ. ದೇಶಕ್ಕಾಗಿ ಹೋರಾಡುವ ಯೋಧರಲ್ಲಿ ತಾರತಮ್ಯ ಮಾಡುವುದು ಎಳ್ಳಷ್ಟೂ ಸರಿಯಲ್ಲ.

ಹೋದಲ್ಲೆಲ್ಲಾ ಯೋಧರ ಬಗ್ಗೆ ಅತಿಯಾದ (ಕೃತಕ) ಅಭಿಮಾನ ಮತ್ತು ಕಾಳಜಿ ಪ್ರದರ್ಶಿಸುವ ಮೋದಿ ಭಾರತೀಯ ಸೇನೆಯಲ್ಲಿ ಯೋಧರಿಗೆ ಕಳಪೆ ಊಟ ಕೊಡುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬಿಎಸ್‌ಎಫ್ ಯೋಧ ತೇಜಬಹದ್ದೂರ್ ಯಾದವ್ ದೂರಿದ್ದಕ್ಕೆ ಪ್ರತಿಕ್ರಿಯಿಸಲೇ ಇಲ್ಲ! ಅಷ್ಟೇ ಅಲ್ಲ, ಈಗ ಮೇಲಧಿಕಾರಿಗಳು ಆ ಯೋಧ ತೇಜಬಹದ್ದೂರ್ ಯಾದವನಿಗೆ ಸತ್ಯ ಹೊರಗೆಡುಹಿದ್ದಕ್ಕಾಗಿ ಅಪಾರ ಕಿರುಕುಳ ಕೊಡುತ್ತಿರುವ ಕುರಿತು ಯಾದವನ ಪತ್ನಿ ಮತ್ತು ಮಕ್ಕಳು ಮೋದಿಗೆ ಬರೆದ ಹನ್ನೆರಡು ಪತ್ರಕ್ಕೂ ಪ್ರಧಾನಿ ಕಚೇರಿಯಿಂದ ಉತ್ತರವೇ ಇಲ್ಲವಂತೆ. ಪ್ರಧಾನಿ ಕಚೇರಿಗೆ ಬರುವ ಪ್ರತಿ ಪತ್ರವನ್ನೂ ಮೋದಿ ಓದಿ ವೈಯಕ್ತಿಕವಾಗಿ ಪ್ರತಿಕ್ರಿಯಿಸುತ್ತಾರೆ ಎಂದು ಮೋದಿಯ ಪ್ರಚಾರ ವಿಭಾಗ ಬೊಗಳೆ ಬಿಡುತ್ತಿದೆ ಎಂಬುದು ಈ ಮೂಲಕ ಸಾಬೀತಾಗುತ್ತದೆ.

ಕಳೆದ ದೀಪಾವಳಿಯಂದು ಮೋದಿ ಯೋಧರೊಂದಿಗೆ ದೀಪಾವಳಿ ಆಚರಿಸುವ ನಾಟಕ ಆಡಿದರು. ಅಲ್ಲಿ ಕೆಲವು ಯೋಧರು ಧೈರ್ಯ ವಹಿಸಿ ಸೇನೆಯಲ್ಲಿ ಕೆಳಮಟ್ಟದ ಯೋಧರಿಗೆ ಕೊಡುವ ಕಳಪೆ ಆಹಾರದ ಬಗ್ಗೆ ನೇರವಾಗಿ ಪ್ರಧಾನಿ ಮೋದಿಗೆ ಹೇಳಿದ್ದರೂ ಮೋದಿ ಅದಕ್ಕೆ ಪ್ರಾಮುಖ್ಯತೆ ಕೊಟ್ಟಿರಲಿಲ್ಲ.

ಮೋದಿ ಇನ್ನೊಂದು ಹಸಿ ಸುಳ್ಳು ಹೇಳಿದರು. ಕೆಲವು ಯೋಧರು ಇನ್ನು ಕೆಲವೇ ತಿಂಗಳಲ್ಲಿ ನಿವೃತ್ತಿಯಾಗಲಿದ್ದು ತಾವು ನಿವೃತ್ತಿಯಾಗುವ ಮೊದಲು ತಮ್ಮನ್ನು ಸೇರಿಸಿ



ಇನ್ನೊಂದು ಸರ್ಜಿಕಲ್ ದಾಳಿ ಮಾಡಿ ತಮಗೆ ದೇಶಸೇವೆಗೆ ಅವಕಾಶ ಕೊಡಬೇಕು ಎಂದು ವೃದ್ಧ ಯೋಧರು ಕೋರಿಕೊಂಡರೆಂದು ಮೋದಿ ಬುರುಡೆ ಬಿಟ್ಟರು. ನಮ್ಮ ನಿಸ್ವಾರ್ಥ ಸೇನೆಗೆ ಗೌರವ ಕೊಡುವ ಬದಲು ಅವರ ಹೆಸರಲ್ಲಿಯೂ ಮೋದಿ ಸುಳ್ಳು ಕಥೆ ಕಟ್ಟಿ ಹೇಳುತ್ತಿರುವುದು ಅವರೆಂತಹ ಸ್ವಾರ್ಥಿ ಹಾಗೂ ಸಮಯಸಾಧಕ ಎಂಬುದನ್ನು ತೋರಿಸುತ್ತದೆ.

ಇತ್ತೀಚೆಗೆ ಅಮೆರಿಕದ ಅಧ್ಯಕ್ಷ ಟ್ರಂಪ್ ಹಾಕಿದ ಧಮಕಿಯಿಂದಾಗಿ ಭಯೋತ್ಪಾದಕ ಹಫೀಜ್ ಸಯೀದ್‌ನನ್ನು ಪಾಕಿಸ್ತಾನ ಗೃಹಬಂಧನದಲ್ಲಿ ಇರಿಸಿದೆ. ಆದರೆ ಮೋದಿಯ ಚೇಲಾ ಮಾಧ್ಯಮಗಳು ಮೋದಿ ಟ್ರಂಪ್‌ಗೆ ಹೇಳಿ ಸಯೀದ್ ಹಫೀಜನ ಗೃಹಬಂಧನ ಮಾಡಿಸಿದ್ದು ಎಂದು ಬೊಗಳೆ ಪ್ರಚಾರ ಮಾಡಿದವು. ಜಗತ್ತಿನಲ್ಲಿ ಎಲ್ಲಿಯೇ ಏನೇ ಘಟಿಸಲಿ ಅಲ್ಲಿ ಮೋದಿಯ ಹೆಸರನ್ನು ತೂರಿಬಿಡುವ ಮೋದಿಯ ಚೇಲಾ ಮಾಧ್ಯಮಗಳ ಅಭ್ಯಾಸ ಈಗ ಎಲ್ಲೆಡೆ ಹಾಸ್ಯಾಸ್ಪದವಾಗುತ್ತಿದೆ.

- ಎಚಲಪ್ಪ ಮುಂಡಾಲ, ಮಂಗಳೂರು

ಜೆ. ಕಾರ್ಯಪ್ಪ ವಿರುದ್ಧ ಆರೆಸ್ಸೆಸ್ ಸಂಚು

ಅಮೆರಿಕಾದ ಸಿಐಎ ಇತ್ತೀಚೆಗೆ ಬಹಿರಂಗ ಮಾಡಿದ ತಮ್ಮ ಗುಪ್ತ ದಾಖಲೆಗಳಲ್ಲಿ ಒಂದು ದಾಖಲೆ ಜೂನ್ 1950 ರಲ್ಲಿ ಆಗಿನ ಭಾರತದ ಸೇನಾಪಡೆಯ ದಂಡನಾಯಕರಾಗಿದ್ದ ಕನ್ನಡಿಗ ಜನರಲ್ ಕಾರ್ಯಪ್ಪನವರ ಮೇಲೆ ಭಾರತೀಯ ಸೇನೆಯ ಆರು ಸಿಖ್ ಅಧಿಕಾರಿಗಳು ಹತ್ಯೆಯ ಪ್ರಯತ್ನ ಮಾಡಿದರು ಹಾಗೂ ಈ ಸಂಚಿನ ಹಿಂದೆ ಆರೆಸ್ಸೆಸ್ ಇತ್ತು ಎಂದು ಹೇಳುತ್ತದೆ ಎಂಬುದನ್ನು ಔಟ್‌ಲುಕ್ ಪತ್ರಿಕೆ ಕಳೆದ ವಾರ ಬಹಿರಂಗಪಡಿಸಿದೆ. ಜ.ಕಾರ್ಯಪ್ಪನವರ ಹತ್ಯೆಗೆ ಸೇನೆಯ ಕೆಲವು ಅಧಿಕಾರಿಗಳೇ ಪ್ರಯತ್ನ ಮಾಡಿ ಅದರಲ್ಲಿ ಅವರು ವಿಫಲರಾಗಿ ನಂತರ ಆ ತಪ್ಪಿತಸ್ಥ ಸೇನಾಧಿಕಾರಿಗಳಿಗೆ ಶಿಕ್ಷೆಯಾಯಿತು. ಸ್ವತಂತ್ರ ಭಾರತದ ಹೊಸದರಲ್ಲಿಯೇ ನಡೆದ ಅತ್ಯಂತ ಮಹತ್ವದ ಇಂತಹ ಘಟನೆಯನ್ನು ನಮ್ಮ ಸೋ-ಕಾಲ್ಡ್ ತನಿಖಾ ವರದಿಗಾರರು ಮರೆತಿರುವುದು ಖೇದಕರ.



ನೆಹರು ಕಾಲದಲ್ಲಿ ನಡೆದ ಸಣ್ಣಪುಟ್ಟ ವಿಷಯಗಳನ್ನೂ ಈಗ ಕೆದುಕಿ ತೆಗೆದು ಸಂಬಂಧಪಟ್ಟವರಿಗೆ ಬೇಕೆಂದೇ ಮುಜುಗರ ಉಂಟುಮಾಡುವ ತನಿಖಾ-ಪತ್ರಕರ್ತರೆಂದು ಬಿರುದು ಪಡೆದವರು ಈ ಜ.ಕಾರ್ಯಪ್ಪನವರ ಹತ್ಯೆ ಪ್ರಯತ್ನದ ಅತ್ಯಂತ ಗಹನ ವಿಷಯವುಳ್ಳ 1950ರ ಘಟನೆಯನ್ನು ಕೆದುಕಿ ತೆಗೆಯದಿರುವುದು ಆಶ್ಚರ್ಯ.


ಈಗಲಾದರೂ ಜನರಿಗೆ ಆರೆಸ್ಸೆಸ್ಸಿನ ನಿಜರೂಪ ಅರ್ಥವಾಯಿತಲ್ಲಾ! ಜ.ಕಾರ್ಯಪ್ಪ ಹಿಂದೂ ಆಗಿದ್ದರೂ ಅವರನ್ನು ಸಿಖ್‌ರಿಂದ ಹತ್ಯೆ ಮಾಡಿಸಿ ಕೋಮು ಗಲಭೆ ಹಬ್ಬಿ ಸಿಖ್‌ರನ್ನು ವಿಲನ್‌ಗಳಂತೆ ಬಿಂಬಿಸಿ ದೇಶದಲ್ಲಿ ಸರ್ವತ್ರ ಅರಾಜಕತೆ (Civil war) ಹಬ್ಬಿಸಿ ತಮ್ಮ ಮನುವಾದದ ಅಜೆಂಡಾವನ್ನು ಅನುಷ್ಠಾನಗೊಳಿಸುವ ಕುತಂತ್ರ ನಮಗೆ ಸ್ವಾತಂತ್ರ್ಯ ಸಿಕ್ಕ ದಿನದಿಂದಲೇ ಆರೆಸ್ಸೆಸ್ ನಡೆಸಿತ್ತು ಎಂಬುದಕ್ಕೆ ಈ 1950 ರ ಘಟನೆ ಸಾಕ್ಷಿ. ಒಂದುವೇಳೆ ಅಂದು ಆರೆಸ್ಸೆಸ್ ತನ್ನ ಷಡ್ಯಂತ್ರದಲ್ಲಿ ಸಫಲವಾಗಿದ್ದರೆ ದೇಶದಲ್ಲಿ ದೊಂಬಿ ಗಲಾಟೆಗಳಾಗಿ ಸೇನಾಪಡೆ ದೇಶದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡು ಪ್ರಜಾಪ್ರಭುತ್ವವನ್ನು ರದ್ದುಪಡಿಸಿ ಮಾರ್ಷಲ್-ಲಾ ಹೇರುವುದು ಅನಿವಾರ್ಯವಾಗುತ್ತಿತ್ತು, ನೆಹರೂ-ಸರ್ದಾರ್ ಪಟೇಲರ ನೇತೃತ್ವದ ಕಾಂಗ್ರೆಸ್ ಸರಕಾರ ತೊಲಗಿ ಸೇನಾಡಳಿತ ಸ್ಥಾಪಿತವಾಗುತ್ತಿತ್ತು. ನಂತರ ಮೆಲ್ಲಗೆ ಸೇನೆಯೊಳಗೆ ತೂರಿಕೊಂಡ ಆರೆಸ್ಸಿಗರು ಕ್ರಮೇಣ ದೇಶದ ಅಧಿಕಾರವನ್ನು ತಮ್ಮ ಕೈವಶ ಮಾಡಿಕೊಳ್ಳುವ ದೀರ್ಘ ಹುನ್ನಾರು ನಡೆಸಿದ್ದು ನಿಜವಿರಬಹುದು.

ಒಂದುವೇಳೆ ಆಗ ಆರೆಸ್ಸೆಸ್ ಸಫಲವಾಗಿದ್ದರೆ ಇಂದು ಭಾರತ ದೇಶ ಹಲವಾರು ತುಂಡುಗಳಾಗಿ ಬಹಳಷ್ಟು ತುಂಡುಗಳಲ್ಲಿ ಆರೆಸ್ಸೆಸ್ಸಿನವರೇ ತುಂಡರಸರಾಗಿ ಮೆರೆಯುತ್ತಿದ್ದದ್ದು ಖಂಡಿತ. 1950 ರಲ್ಲಿ ಸಂಘಿಗಳು ಸಫಲವಾಗಿರದಿದ್ದರೂ ಕೊನೆಗೂ 2014 ರಲ್ಲಿ ಈ ಕೇಸರಿಪಾಳ್ಯ ತಮ್ಮ ಕೈಗೊಂಬೆ ಮೋದಿಯನ್ನು ಅಧಿಕಾರಕ್ಕೇರಿಸುವಲ್ಲಿ ಸಫಲರಾಗಿರುವರು. 1950 ರಲ್ಲಿ ಆರೆಸ್ಸೆಸ್‌ನವರು ಪಂಜಾಬಿ ಸಿಖ್ಖರನ್ನು ದಾರಿತಪ್ಪಿಸಿ ಕಾರ್ಯಪ್ಪರ ಹತ್ಯೆ ಮಾಡಿಸಿ ಇಡೀ ದೇಶವನ್ನು ಸಿಖ್ಖರ ವಿರುದ್ಧ ತಿರುಗಿಸಿ, ಪಂಜಾಬಿಗಳನ್ನು ಬಲಿಪಶು ಮಾಡಿ ಅವರ ರಕ್ತದ ಕಾಲುವೆ ಹರಿಸಿ, ತಮ್ಮ ಘೋರ ಸಂಚನ್ನು ಸಫಲಗೊಳಿಸಲು ಪ್ರಯತ್ನಿಸಿದ್ದನ್ನು ಈಗಿನ ಪಂಜಾಬಿ ಪೀಳಿಗೆ ಮರೆಯಬಾರದು. ಉತ್ತರಾಖಂಡ್ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಪಾಕಿಸ್ತಾನದಿಂದ 1947 ರ ವಿಭಜನೆ ಕಾಲದಲ್ಲಿ ವಲಸೆ ಬಂದ ಪಂಜಾಬಿ ಸಿಖ್ ನಿರ್ವಾಸಿತರು ದೊಡ್ಡ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಈ ರಾಜ್ಯಗಳಲ್ಲಿ ಮುಂದಿನ ವಾರ ಶುರುವಾಗುವ ಮತದಾನದ ಸಮಯದಲ್ಲಿ ಅಲ್ಲಿಯ ಪಂಜಾಬಿ ಮತದಾರರು ಆರೆಸ್ಸೆಸ್‌ನ ಈ ಘೋರ ಹುನ್ನಾರುಗಳನ್ನು ಅರಿತು ತಮ್ಮ ಹಿರಿಯರನ್ನು ಬಲಿಪಶುವಂತೆ ಬಳಸುವ ಆರೆಸ್ಸೆಸ್ ಯೋಜನೆಗೆ ಈಗ ಮತಪೆಟ್ಟಿಗೆ ಮೂಲಕ ಪ್ರತೀಕಾರ ತೀರಿಸಬೇಕಿದೆ.

- ರಾಮಕೃಷ್ಣ ಎ ಕುಲಾಲ್, ಬೆಂಗಳೂರು

ನಾಸ್ತಿಕ ಮೋದಿಯ ಆಸ್ತಿಕ ನಾಟಕ


ಸನಾತನ ಧರ್ಮ ರಕ್ಷಕ, ಹಿಂದೂ ಹೃದಯ ಸಾಮ್ರಾಟ ಎಂಬ ಬಿರುದು ಪಡೆದಿರುವ ನರೇಂದ್ರ ಮೋದಿ ನಿಜದಲ್ಲಿ ನಾಸ್ತಿಕರೇ? ಹೌದು ಎನ್ನುತ್ತಾರೆ ಮುಖ-ಭಾವ ಮತ್ತು ಅಂಗ-ಭಾಷೆ (ಬಾಡಿ ಲಾಂಗ್ವೇಜ್) ಅಭ್ಯಸಿಸಿ ಜನರ ಮೂಲಗುಣ ಕಂಡುಹಿಡಿಯುವ ಮನೋವಿಜ್ಞಾನಿಗಳು. ಹಿಂದೂ ದೇವರ ಮೂರ್ತಿಯ ಎದುರು ಅಥವಾ ಹಿಂದೂ ಸ್ವಾಮೀಜಿಗಳ ಸಮ್ಮುಖದಲ್ಲಿ ಮೋದಿ ನಿಲ್ಲುವ ಮತ್ತು ಮಾತನಾಡುವ ಭಂಗಿ ಹಾಗೂ ಅವರ ಮುಖಭಾವದಿಂದ ಅವರಲ್ಲಿ ಆ ಸಂದರ್ಭದಲ್ಲಿ ಭಕ್ತಿಯ ಲೇವಲೇಶವೂ



ಇರುವುದಿಲ್ಲ, ಅವರದ್ದು ಕೇವಲ
ಎನ್ನುತ್ತಾರೆ ಅಂಗಭಾಷೆ ಪರಿಣಿತರು.
ನಮ್ಮ ಯಡಿಯೂರಪ್ಪನವರದ್ದು ನಿಜ
ದೇವಸ್ಥಾನದಲ್ಲಿ ಅವರ ದೈನ್ಯ ಮುಖ
ಅಂಗಭಾಷೆ ಅಭ್ಯಸಿಸಿದವರು.

ನಾಸ್ತಿಕರಲ್ಲಿ ಎರಡು ವರ್ಗದವ
ವರ್ಗದವರು ತಾವು ನಾಸ್ತಿಕ ಎ
ಒಪ್ಪಿಕೊಳ್ಳುತ್ತಾರೆ ಹಾಗೂ ಅದರಂತ
ಇವರು ನಿಜಜೀವನದಲ್ಲಿ ಅತ್ಯಂತ
ಹಾಗೂ ಅತ್ಯಂತ ತತ್ವನಿಷ್ಠರಾಗಿರುತ
ಭಗತ್ ಸಿಂಗ್). ಎರಡನೆಯ ವರ್ಗ
ಎರಡು ಮುಖದವರು! ಸಿದ
ನಾಸ್ತಿಕರಾದರೂ ಅದನ್ನು ಇವರು
ಆದರೆ ಬಹಿರಂಗವಾಗಿ ತಾವು ದೊಡ್ಡ
ಎಂದು ನಾಟಕವಾಡುತ್ತಾರೆ. ಇವ
ಬೂಟಾಟಿಕೆ ಮತ್ತು ಸಮಯ
ತುಂಬಿರುತ್ತದೆ. ಮೋದಿಯ ನಾಸ್ತಿ
ಗುಂಪಿನದು. ಕಾವಿಧಾರಿಗಳಲ್ಲೂ
ಅತ್ಯಾಚಾರ ಮಾಡಿ ನಂತರ ಗೋಮ
ಸ್ವಾಮೀಜಿಗಳು ಈ ಎರಡನೆಯ
ಅಪ್ರಾಮಾಣಿಕ ಆಷಾಢಭೂತಿ ನಾಸ್ತಿ
ಸ್ಥಾಪಕ ಗೋಲ್ವಾಲ್ಕರ್ ಒಂದೆಡೆ
ಒಂದು ಸಾಕು ಪ್ರಾಣಿ ಅಷ್ಟೇ,
ಕೊಲ್ಲುವುದಕ್ಕೆ ನಮ್ಮ ಅಭ್ಯಂತರವಿ
ಮಂಗ ಮಾಡಲು ಗೋವು ದೇವ
ನಟಿಸಬೇಕಾಗುತ್ತದೆ, ಅದನ್ನೇ
ಮುಖಾಂತರ ನಾವು ಪ್ರಚಾರ
ಗೋಲ್ವಾಲ್ಕರ್ ಸಹ ಗೋಭಕ್ತ
ಆಷಾಢಭೂತಿ ನಾಸ್ತಿಕನೇ ತಾನೇ.

ವಿನಾಯಕ ಸಾವರ್ಕರ್ ಆರೆಸ್ಸೆಸ್
ಜತೆಗೆ ಅವರು ಹಿಂದುತ್ವ ಶಬ್ದದ
ಚಿತ್ಪಾವನ್ ಬ್ರಾಹ್ಮಣರಾಗಿದ್ದ ವಿನಾಯ
ಅಪ್ಪಟ ನಿರೀಶ್ವರವಾದಿ (ಅಥೇಯಿಸ್ಟ್
ವೈದಿಕ ಧರ್ಮದಲ್ಲಿರುವ ಯಾವುದೇ
ಅಥವಾ ಪ್ರಾಣಿರೂಪದ ದೇವರನ್ನು ನ
ಅವರು ಕಟ್ಟಾ ಆರೆಸ್ಸಿಗರಾಗಿದ್ದರು
ಎಲ್ಲಾ ಧಾರ್ಮಿಕ ಸಮಾರಂಭಗಳಲ್ಲಿ
(ನಾನು ಮುಂಬೈ- ಪುಣೆ-ಬೆಂಗಳೂರಿನ
ಇದ್ದಾಗ ಸ್ವತಃ ಕಂಡಿರುವಂತೆ ಮಹಾ
ಬ್ರಾಹ್ಮಣರಲ್ಲಿ ಮತ್ತು ಕರ್ನಾಟಕದ
ಅತೀಹೆಚ್ಚು ನಾಸ್ತಿಕರಿದ್ದಾರೆ. ಇದಕ್ಕೆ
ಮನೋವೈಜ್ಞಾನಿಕ ಕಾರಣಗಳೇನು ಎಂ
ಅರ್ಥವಾಗಿಲ್ಲ). ಸಾವರ್ಕರರು ಭಾರತ
ವರ್ಷ ಮೊದಲೇ ಮುಸ್ಲಿಮರ ವಿರುದ್ಧ
ಲೇಖನಗಳನ್ನು ಬರೆದಿದ್ದರು. ಸಾ
ಲೇಖನದಲ್ಲಿ "ಗೋಹತ್ಯೆಯಿಂದ
ಎನ್ನುವುದಕ್ಕೆ ಅರ್ಥವಿಲ್ಲ ಹಾಗ
ಗೋವುಗಳನ್ನು ಮಾಂಸಕ್ಕಾಗಿ ಕೊಲ



ಭಾರತ ಕೂಲಿಕಾರರನ್ನು ಸೃಷ್ಟಿಸುವ ದೇಶವಾಗಕೂ

ಅಮೆರಿಕ ದೇಶದ ನೂತನ ಅಧ್ಯಕ್ಷರಾದ ಟ್ರಂಪ್ ಅವರು, ಬೇರೆ ದೇಶಗಳಿಂದ ಜನರು ಕೆಲಸಕ್ಕಾಗಿ (ಕೂಲಿಗಾಗಿ) ಅಮೆರಿಕಕ್ಕೆ ವಲಸೆ ಬರುವುದನ್ನು ನಿಯಂತ್ರಿಸಲು, ಕ್ರಮ ತೆಗೆದುಕೊಂಡರು. ಅದರಲ್ಲಿ ವಿಶೇಷ ಏನಿದೆ?? ಅದು ಸಂಪೂರ್ಣವಾಗಿ ಅಮೆರಿಕನ್ನರಿಗೆ ಸಂಬಂಧಿಸಿದ ವಿಷಯ.

ಆದರೆ ಇಲ್ಲಿ ನಮ್ಮ ರಾಜಕಾರಣಿಗಳು ಆಕಾಶವೇ ಕಳಚಿ ಅವರ ತಲೆಯ ಮೇಲೆ ಬಿದ್ದಂತೆ ಆಡುತ್ತಿದ್ದಾರೆ!! ಏಕೆಂದರೆ ಈಗಾಗಲೇ ಅಲ್ಲಿ ಹೋಗಿ ಕೆಲಸ ಮಾಡುತ್ತಿರುವ ಭಾರತೀಯರು, ಕೆಲಸ ಕಳೆದುಕೊಂಡು ವಾಪಸ್ ಬರಬಹುದೆಂಬ ಕಾರಣಕ್ಕೆ!! ಇನ್ನೂ ಅನೇಕರು ಹೊಸದಾಗಿ ಹೋಗುವುದು ತಪ್ಪಬಹುದೆಂಬ ಕಾರಣಕ್ಕೆ??

ಅಲ್ಲಾ ಸ್ವಾಮಿ, ನಮ್ಮ ದೇಶ ಅಭಿವೃದ್ಧಿ ಹೊಂದುತ್ತಿರುವ/ಹೊಂದಬೇಕಾದ ದೇಶ. ಅಮೆರಿಕ ಅಭಿವೃದ್ಧಿಯಾಗಿರುವ ದೇಶ. ನಮ್ಮಲ್ಲಿ ತಯಾರಾದ ತಂತ್ರಜ್ಞರು/ಇಂಜಿನಿಯರುಗಳೆಲ್ಲ ದೇಶ ಬಿಟ್ಟು ಬೇರೆ ದೇಶಗಳಿಗೆ ಹೋದರೆ, ಅಭಿವೃದ್ಧಿ ಹೊಂದಬೇಕಾದ ನಮ್ಮ ದೇಶವನ್ನು ಕಟ್ಟುವವರು ಯಾರು? ಅಭಿವೃದ್ಧಿ ಪಡಿಸುವವರು ಯಾರು?? ಪರಿಣತಿ ಪಡೆದ ಅಭ್ಯರ್ಥಿಗಳನ್ನೆಲ್ಲ ವಿದೇಶಗಳಿಗೆ ಕಳಿಸಿ, ಉಳಿದ ಅಭ್ಯರ್ಥಿಗಳಿಂದ ದೇಶವನ್ನು ಕಟ್ಟಲು ಸಾಧ್ಯವೇ???

ಅಭಿವೃದ್ಧಿ ಹೊಂದಬೇಕಾದ ನಮ್ಮ ದೇಶದಲ್ಲಿ ಕೆಲಸ ಇಲ್ಲ ಎಂದು ಹೇಳಿದವರು ಯಾರು? ನಮ್ಮ ಡಾಕ್ಟರ್/ಇಂಜಿನಿಯರ್‌ಗಳಿಗೆ ಇಲ್ಲಿ ಕೆಲಸ ಇಲ್ಲ ಅಂತ ಹೇಳಿದವರು ಯಾರು?? ಮಾಡುವವರಿಗೆ ಕೆಲಸ ಎಷ್ಟು ಬೇಕಾದರೂ ಇದೆ!!! ಹೀಗಿರುವಾಗ ಅಮೆರಿಕ ಅಧ್ಯಕ್ಷರ ಕ್ರಮಕ್ಕೆ ಚಿಂತಿಸುವ ಮುಖಂಡರ ನಡೆ ನಾಚಿಕೆಗೇಡಿನದು. ಈ ಚಾಳಿ ಕೇವಲ ಇಂದಿನದಲ್ಲ. ಈ ಹಿಂದೆ, ಒಂದು ದಶಕಕ್ಕೂ ಹಿಂದೆ, ನಮ್ಮ ಪ್ರಧಾನಿಗಳೊಬ್ಬರು ವಿದೇಶಕ್ಕೆ ಹೋಗಿದ್ದಾಗ "ನಮ್ಮ ಯುವಕರಿಗೆ ಕೆಲಸ ಕೊಟ್ಟು ಸಹಾಯ ಮಾಡಿ" ಎಂದು ಆ ದೇಶದ ಪ್ರಧಾನಿಯವರನ್ನು ಕೇಳಿಕೊಂಡದ್ದುಂಟು. ಅದನ್ನು ಕೇಳಿ ಭಾರತೀಯನಾದ ನನಗೆ ಇದು ತುಂಬ ನಾಚಿಕೆಗೇಡಿನ ಸಂಗತಿ ಎನಿಸಿತ್ತು.

ಈಗಲಾದರೂ ನಮ್ಮ ಯುವಕರು ಕೆಲ
ವಿದೇಶಗಳಿಗೆ ಹೋಗುವುದು ನಿಲ್ಲ
ಕೂಲಿ ಆಳುಗಳನ್ನು ರಫ್ತು ಮಾಡ
ಆಗಬಾರದು. ಇದು ಸಂಪೂರ್ಣ
ನಡೆಸುವವರ ಜವಾಬ್ದಾರಿ.

ನಮ್ಮ ಯುವಕರಲ್ಲಿ ಉದ್ಯಮ
ಇರುವವರಿಗೆಲ್ಲಾ ಉಚಿತವಾಗಿ ತರಬೇ
ಸ್ಥಾಪನೆಗೆ ಪ್ರೋತ್ಸಾಹ ಕೊಡಬೇಕು. ಆ
ಯಾವುದಾದರೂ ಸಮಸ್ಯೆ ಇದ್ದರೆ
ಉದ್ಯಮಿಗಳು ನಾಮುಂದು ತಾಮುಂದು
ಬಂದು, ಬೇಕಾದ ಉದ್ಯಮ ಸ್ಥಾಪ
ಪಡೆದ ಅಭ್ಯರ್ಥಿಗಳಿಗೆಲ್ಲ ಕೆಲಸಗಳನ್ನು
ಉದ್ಧಾರವಾಗಿ, ದೇಶವನ್ನೂ ಉದ್ಧಾರ
ನಮ್ಮ ಯುವಕರು ಕೆಲಸ ಹುಡುಕಿಕೊ
ಹೋಗುವುದನ್ನು ತಪ್ಪಿಸಲು ಸಾಧ್ಯ

- ವೀರಯ್ಯಾತ

ಮ ಸ್ಪಷ್ಟವಾಗಿ ಬರೆದಿರುವರು. ಜತೆಗೆ ಅವರೇ ಹೇಳಿದ್ದು ಂದೂ ಪುರೋಹಿತರೆಲ್ಲಾ ಮೂಲದಲ್ಲಿ ನಾಸ್ತಿಕರೇ ರುತ್ತಾರೆ. ಹಾಗಾಗಿಯೇ ಅವರು ದೇವಸ್ಥಾನದಲ್ಲಿ ಮುಗ್ಧ ರಿಗೆ ದೇವರ ಎದುರಲ್ಲೇ ಸುಳ್ಳು ಹೇಳಿ ದೇವರ ಬಗ್ಗೆ ಯ ಮೂಡಿಸಿ ಮೋಸದಿಂದ ಹಣ ಸುಲಿಯಲು ಸುವುದಿಲ್ಲ. ದೇವರನ್ನು ನಿಜವಾಗಿ ನಂಬುವ ಯಾವನೇ ರೋಹಿತನಿಗೆ ತಾನೇ ನಂಬುವ ದೇವರ ಹೆಸರಲ್ಲಿ ಭಕ್ತರನ್ನು ಚಿಸಲು ಎಂದೂ ಮನಸ್ಸು ಬರುವುದಿಲ್ಲ. ಹಾಗಾಗಿ ರತದ ಶೇ.80 ಹಿಂದೂ ಪುರೋಹಿತರು ಮತ್ತು ಮೀಜಿಗಳು ಮೂಲದಲ್ಲಿ ನಾಸ್ತಿಕರು."

ಹಾಗಾದರೆ ನಾಸ್ತಿಕರಾಗಿದ್ದ ಸಾವರ್ಕರರು ಹಿಂದೂ ರ್ಮದ ಬಗ್ಗೆ ಅಭಿಮಾನ ಬೆಳೆಸಿಕೊಂಡಿದ್ದು ಹೇಗೆ ದು ಕೆಲವರ ಪ್ರಶ್ನೆ. ನಿಜದಲ್ಲಿ ಸಾವರ್ಕರರದ್ದು ಹಿಂದೂ ರ್ಮದ ಅಭಿಮಾನವಾಗಿರದೇ ಅವರದ್ದು ತಮ್ಮ ಬ್ರಾಹ್ಮಣ ಾಂಗ ಅರ್ಥಾತ್ ಆರ್ಯ ಜನಾಂಗದ ಶ್ರೇಷ್ಠತೆಯ ಿಮಾನವಾಗಿತ್ತು ಅಷ್ಟೇ. ಜನಾಂಗ ಬೇರೆ ಧರ್ಮ ಬೇರೆ ಬುದನ್ನು ನಾವು ಗಮನಿಸಬೇಕು. ಅಮೆರಿಕದ ಯ-ಬಿಳಿಯ ಎರಡೂ ಜನಾಂಗದವರು ಕ್ರೈಸ್ತರಾದರೂ ಲ್ಲಿಯ ಬಿಳಿಯರು ಕರಿಯರನ್ನು ದ್ವೇಷಿಸಿ ಕೇವಲ ಯರನ್ನು ಹೆಚ್ಚು ಗೌರವಿಸುತ್ತಾರೆ. ಅಂದರೆ ಇದು ಸ್ತ ಧರ್ಮದ ಪ್ರೀತಿ ಆಗಿರದೇ ಬಿಳಿ ಜನಾಂಗದ ಪ್ರೀತಿ ಸಿಜಮ್) ಆಗಿದೆ. ಅಮೆರಿಕದ ಬಿಳಿಯರಂತೆಯೇ ರ್ಕರರ ಹಿಂದೂ ಪ್ರೀತಿ ಸಹ ತಮ್ಮ ವೈದಿಕ ಜನಾಂಗದ ಷ್ಠತೆಯ ಪ್ರೀತಿ (ರೇಸಿಜಮ್) ಮಾತ್ರ ಆಗಿತ್ತು ಅಷ್ಟೇ.

ಎರಡನೇ ಗುಂಪಿನ ಆಷಾಢಭೂತಿ ನಾಸ್ತಿಕರು ಹೆಚ್ಚಾಗಿ ಮ್ಮ ಮೂಲ ಸಿದ್ಧಾಂತಗಳನ್ನು ಬದಿಗಿಟ್ಟು ಕುಟುಂಬದ ವುಕ ಮಹಿಳಾ ಸದಸ್ಯರ ಸಮಾಧಾನಕ್ಕಾಗಿ ಅಥವಾ ಜಕೀಯ ಲಾಭಕ್ಕಾಗಿ ಇಲ್ಲವೇ ಸಾಮಾಜಿಕ ಲಾಭಕ್ಕಾಗಿ ವು ಬಹಳ ದೊಡ್ಡ ಆಸ್ತಿಕರು ಮತ್ತು ಭಕ್ತಿಯ ಡಾರಿಗಳು ಎಂದು ಪ್ರದರ್ಶನ ಮಾಡುವ ಅನಿವಾರ್ಯತೆ ಟಾಗುತ್ತದೆ. ಹೆಚ್ಚಿನ ಸಾಂಸಾರಿಕ ನಿರೀಶ್ವರವಾದಿಗಳಿಗೆ ುವೇ ದೊಡ್ಡ ಉಭಯ ಸಂಕಟ. ಅವರು ಎರಡು ುಖ ಇಟ್ಟುಕೊಳ್ಳಲೇ ಬೇಕಾಗುತ್ತದೆ. ಹಿಟ್ಲರ್ ತಾನು ್ತ ಧರ್ಮದ ನಿಷ್ಠ ಅಭಿಮಾನಿ ಹಾಗಾಗಿ ಯೇಸು ನನ್ನು ಶಿಲುಬೆಗೇರಿಸಿದ ಯಹೂದಿಗಳನ್ನು ದ್ವೇಷಿಸುತ್ತೇನೆ ನುತ್ತಿದ್ದ. ಆದರೆ ಅವನೂ ಮೂಲದಲ್ಲಿ ನಾಸ್ತಿಕನೇ ಆಗಿದ್ದು ನಿಗೆ ಯೇಸುಕ್ರಿಸ್ತನ ಬಗ್ಗೆ ಯಾವುದೇ ವಿಶೇಷ



-ಗೌರವ ಇರಲಿಲ್ಲ. ಆದರೆ ಜರ್ಮನಿಯ ಬಹುಸಂಖ್ಯಾತ ರ ವಿಶ್ವಾಸ ಗೆಲ್ಲುವುದಕ್ಕಾಗಿ ಅವನು ಯೇಸುಕ್ರಿಸ್ತನ ಲೆ ಅಚಲ ನಂಬಿಕೆ ಇರುವ ನಾಟಕ ಆಡಲೇಬೇಕಿತ್ತು. ಅದೇ ಪ್ರಕಾರ ಇಟಲಿಯ ಫ್ಯಾಸಿಸ್ಟ್ ಪ್ರಧಾನಿ ಸ್ಸೋಲಿನಿ ಸಹ ನಾಸ್ತಿಕನಾಗಿದ್ದರೂ ಜನರ ವಿಶ್ವಾಸ ಪಲು ತಾನೊಬ್ಬ ಪಕ್ಕಾ ಕ್ಯಾಥೊಲಿಕ್ ಎಂದು ತಕವಾಡುತ್ತಿದ್ದ. ಇರಾಕ್ ಸರ್ವಾಧಿಕಾರಿ ಸದ್ದಾಮ್ ಸೇನ್ ಸಹ ಅಷ್ಟೇ, ಅವನೂ ನಾಸ್ತಿಕನಾಗಿದ್ದರೂ ಅವನು ೊಬ್ಬ ಪಕ್ಕಾ ಸುನ್ನಿ ಮುಸ್ಲಿಂ ಎಂದು ತೋರಿಸಿಕೊಳ್ಳುತ್ತಿದ್ದ. ಲ್ಲಾ ಮುಸ್ಲಿಂ ಭಯೋತ್ಪಾದಕರ ಮುಖಂಡರೂ ಲದಲ್ಲಿ ನಾಸ್ತಿಕರಾಗಿದ್ದರೂ ಇಸ್ಲಾಂ ಧರ್ಮ ಮತ್ತು ನೂ ನೆಪದಲ್ಲಿ ಜನರನ್ನು ಉದ್ರೇಕಿಸಿ ರಕ್ತ ಹರಿಸಿ ನಾಯಕತ್ವ ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ ಅಷ್ಟೇ. ರಲ್ಲಿ ನೈಜನಂಬಿಕೆ ಇರುವ ಯಾವನೇ ಒಬ್ಬ ಮನುಷ್ಯ ್ವಾಧಿಕಾರಿಯೂ ಆಗಲಾರ ಮತ್ತು ಭಯೋತ್ಪಾದಕನೂ ಲಾರ ಎಂಬುದು ಮನೋವೈಜ್ಞಾನಿಕ ಸತ್ಯ. ಹಾಗಾಗಿ ್ವಾಧಿಕಾರಿ ಮನೋವೃತ್ತಿ ಹೊಂದಿರುವ ನಮ್ಮ ಪ್ರಧಾನಿ ದಿ ಸಹ ಆಸ್ತಿಕರಾಗಿರಲು ಸಾಧ್ಯವೇ ಇಲ್ಲ ಅನ್ನುತ್ತಾರೆ ರ ದೇಹಭಾಷೆ ಹಾಗೂ ಮೂಲ ಸ್ವಭಾವ ಸಿಸಿದವರು. ಅವರು ಸಿಕ್ಕ ಸಿಕ್ಕಲ್ಲೆಲ್ಲಾ ದೇವಸ್ಥಾನಕ್ಕೆ ವುದು, ಸಿಕ್ಕಸಿಕ್ಕ ಕಾವಿಧಾರಿಗಳ ಕಾಲಿಗೆ ಉರುಳುವುದು, ಸ್ಥಾನ-ಮಠ-ಆಶ್ರಮಗಳಲ್ಲಿ ಕಮಿಷನ್ ಆಧಾರದಲ್ಲಿ ನೋಟುಗಳ ಭಾರಿ ಕಪ್ಪು ಹಣ ಬದಲಿಸಲು ಅನುವು ಕೊಟ್ಟದ್ದು, ರಾಮಮಂದಿರ ಕಟ್ಟುವ ಬಗ್ಗೆ ಮಾತನಾಡು ವುದು, ಇವೆಲ್ಲವೂ ತನ್ನ ರಾಜಕೀಯ ಲಾಭಕ್ಕಾಗಿಯೇ ರತು ನಿಜವಾದ ಭಕ್ತಿಭಾವದಿಂದ ಅಲ್ಲವೇ ಅಲ್ಲ. ಮೋದಿಯವರು ತಮ್ಮ ತಾರುಣ್ಯದಲ್ಲಿ ಗುಜರಾತಿ ಕ ಕಂಪನಿಯಲ್ಲಿ ಕೆಲಸ ಮಾಡಿರುವುದರಿಂದ ಅವರು

ಮೋದಿಯ ಬಜೆಟ್ ಮತ್ತು ಕಳ್ಳಾಟ

ಮೊನ್ನೆ ಫೆಬ್ರವರಿ ಒಂದಕ್ಕೆ ಜೇಟ್ಲಿ ಮಂಡಿಸಿದ ಬಜೆಟ್ ಆಯವ್ಯಯಕ್ಕೆ ಚುನಾವಣೆಯ ಭಯವೇನೂ ಇರಲಿಲ್ಲ. ಆದರೂ ನೋಟು ರದ್ದತಿಯ ದುಷ್ಪರಿಣಾಮದ ವಿಶ್ಲೇಷಣೆ ಮಾಡಲು ಜೇಟ್ಲಿ-ಮೋದಿಗೆ ತುಂಬಾ ಭಯವಿತ್ತು. ಅದಕ್ಕಾಗಿ ನೋಟು ರದ್ದತಿಯಿಂದ ಕೆಲಸ ಕಳೆದುಕೊಂಡು



ಬೀದಿಗೆ ಬಿದ್ದಿರುವ 40 ಲಕ್ಷ ಕಾರ್ಮಿಕರಿಗೆ ಹಾಗೂ ಬಾಗಿಲು ಮುಚ್ಚಿರುವ ಎರಡು ಕೋಟಿ ಸಣ್ಣ ಉದ್ಯಮಿಗಳಿಗೆ ಯಾವುದೇ ಪರಿಹಾರ ಈ ಬಜೆಟ್‌ನಲ್ಲಿ ಘೋಷಿಸಲಿಲ್ಲ. ಒಂದು ವೇಳೆ ನೋಟು ರದ್ದತಿ ವಿಷಯವನ್ನು ಸಂಸತ್ತಿನಲ್ಲಿ ಮುಟ್ಟಿದ್ದರೆ ಸಂಸದರು ಅನೇಕ ಪ್ರಶ್ನೆಗಳನ್ನು ಎತ್ತಿ ಮೋದಿ ಸರಕಾರಕ್ಕೆ ಮುಜುಗರ ಉಂಟುಮಾಡುತ್ತಾರೆ ಎಂಬ ಭಯದಿಂದ ಆ ವಿಷಯವನ್ನೇ ಬಜೆಟ್ಟಿನಲ್ಲಿ ಮುಟ್ಟಲಿಲ್ಲ. ಎಂತಹ ಶಾಣ್ಯಾಗಳು ಇವರಿಬ್ಬರೂ!

ಇದು ಮೋದಿಯ ಕನಸನ್ನು ಸಾಕಾರಗೊಳಿಸುವ ಬಜೆಟ್ ಅಂತೆ! ಇಂತಹ ಪೊಳ್ಳು ಕನಸನ್ನು ತೋರಿಸಿಯೇ ಮೋದಿ ಜನರನ್ನು 2014 ರಲ್ಲಿ ಮರುಳು ಮಾಡಿ ಗೆದ್ದಿದ್ದು. ಈ ಕನಸುಗಳೆಲ್ಲಾ ಸಣ್ಣ ಮಕ್ಕಳ ಎದುರು ಚಾಕ್‌ಲೆಟಿನ ಹೊರ ಕವರ್ ತೋರಿಸಿ ಮುಗ್ಧ ಮಗುವನ್ನು ಮರುಳು ಮಾಡಿದಂತೆ ಆಗಿದೆ. ಮೋದಿ ತೋರಿಸಿರುವ ಕನಸು ಬರೀ ಕನಸೇ ಹೊರತು ಅದನ್ನು ನನಸು ಮಾಡುವಷ್ಟು ಅರ್ಥಶಾಸ್ತ್ರದ ಪರಿಣತಿ ಮೋದಿ ಪಡೆಯಲ್ಲಿ ಯಾರಿಗೂ ಇಲ್ಲ. ಮೇಲಾಗಿ ಮೋದಿ ಮತ್ತು ಅಂಬಾನಿ ಗ್ಯಾಂಗಿಗೆ ಅದು ಬೇಕಾಗಿಯೂ ಇಲ್ಲ.

ಮೋದಿ ಜೇಟ್ಲಿಯ ಬಜೆಟ್ಟಿನಲ್ಲಿ ಉತ್ತಮ ಅಂಶಗಳಿದ್ದು ಅದಕ್ಕೆ ವಿದೇಶಿ ಹೂಡಿಕೆದಾರರು ಧನಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ದೇಶಕ್ಕೆ ತೋರಿಸಲು ಬಜೆಟ್ ದಿನದಂದು ಶೇರ್ ಮಾರುಕಟ್ಟೆಯಲ್ಲಿ ಮೋದಿ ಗ್ಯಾಂಗ್ ಆಡಿದ ನಾಟಕವೇನು ಗೊತ್ತೇ? ಅಂಬಾನಿ-ಗುಂಬಾನಿಗಳಂತಹ ಭಾರಿ ಕಳ್ಳ ಹಣ ವಿದೇಶದಲ್ಲಿ ಅಡಗಿಸಿಟ್ಟಿರುವ ಉದ್ಯಮಿಗಳು ಮಾರಿಷಸ್‌ನಂತಹ ತೆರಿಗೆ ಸ್ವರ್ಗದಲ್ಲಿರುವ ತಮ್ಮ ಕಳ್ಳ ಹಣವನ್ನು ಬೇನಾಮಿ ಹೆಸರಲ್ಲಿ ಭಾರತದ ಶೇರ್‌ಗಳಲ್ಲಿ ವಿದೇಶಿ ಹೂಡಿಕೆ ಎಂದು ತೋರಿಸಿ, ಬಜೆಟ್ಟಿನಂದು ಸೆನ್ಸೆಕ್ಸ್ ಮತ್ತು ನಿಫ್ಟಿಯನ್ನು ಕೃತ್ರಿಮವಾಗಿ ಮೇಲೇರಿಸಿ, ಬಜೆಟ್ಟಿನಿಂದಾಗಿ ವಿದೇಶಿ ಹೂಡಿಕೆದಾರರು ತುಂಬಾ ಖುಷಿಯಾಗಿ ಭಾರಿ ಹೂಡಿಕೆ ಮಾಡಿದ್ದರಿಂದ ಷೇರು ಮಾರುಕಟ್ಟೆಯಲ್ಲಿ ಗೂಳಿ (ಬುಲ್) ಓಟ ನಡೆದಿದೆ ಎಂದು ಬಿಂಬಿಸಿ ದೇಶದ ಜನರನ್ನು ಮೋಸ ಮಾಡುವ ಆಟ ನಡೆದಿದೆ.

ಒಟ್ಟಾರೆ ಅಂಬಾನಿ-ಗುಂಬಾನಿಗಳ ವಿದೇಶದ ತೆರಿಗೆ ಸ್ವರ್ಗದಲ್ಲಿ ಅಡಗಿಸಿಟ್ಟಿರುವ ಕಪ್ಪುಹಣ ಹೇಗೆ ದೇಶದ ಆರ್ಥಿಕತೆಯನ್ನು ತಿರುಚಲು ಬಳಕೆಯಾಗುತ್ತಿದೆ ನೋಡಿ. ಕೊನೆಗೆ ಇದರಿಂದ ನಷ್ಟಕ್ಕೊಳಗಾಗುವವರು ಸಣ್ಣ ಷೇರು ಹೂಡಿಕೆದಾರರು ಮಾತ್ರ. ಷೇರು ಮಾರುಕಟ್ಟೆ ಇನ್ನೂ ಸ್ವಲ್ಪ ಮೇಲೆ ಏರಿದೊಡನೆಯೇ ಅಂಬಾನಿ-ಗುಂಬಾನಿಗಳು ತಮ್ಮ ಈ ಸೆನ್ಸೆಕ್ಸ್ ಹೂಡಿಕೆಯನ್ನು ಮೆಲ್ಲಗೆ ಹೆಚ್ಚಿನ ಬೆಲೆಗೆ ಮಾರಿ ಲಾಭ ಮಾಡಿಕೊಂಡು ಜಾರಿಕೊಳ್ಳುತ್ತಾರೆ, ಆದರೆ ಸಣ್ಣ ಹೂಡಿಕೆದಾರರು ಸೆನ್ಸೆಕ್ಸ್ ಇನ್ನೂ ಮೇಲೆ ಹೋಗುತ್ತದೆ ಎಂಬ ಆಸೆಗೆ ಬಿದ್ದು ಷೇರು ಖರೀದಿಸಿ ಗುಂಡಿಗೆ ಬೀಳುತ್ತಾರೆ.

ಹೇಗಿದೆ ನೋಡಿ ಕಳಪೆ ಬಜೆಟ್ಟಿನಿಂದಲೂ ಮೋದಿಗೆ ಆಗುವ ರಾಜಕೀಯ ಲಾಭ ಮತ್ತು ಅಂಬಾನಿ-ಗುಂಬಾನಿಗೆ ಆಗುವ ಆರ್ಥಿಕ ಲಾಭ! ಬಜೆಟ್ ಒಳ್ಳೆಯದಾಗಿರಲಿ ಅಥವಾ ಕಳಪೆಯಾಗಿರಲಿ ಕೊನೆಗೆ ಲಾಭ ಮಾಡಿಕೊಳ್ಳುವುದು ಕೇವಲ ಗುಜರಾತಿ ಮಾರ್ವಾಡಿ ಬನಿಯಾ-ಜೈನರು ಮಾತ್ರ. ಮೋದಿಗೆ ಬೇಕಾಗಿರುವುದೂ ಇದೆ ತಾನೇ. ಮುಂದಿನ ಚುನಾವಣೆಗೆ ಕೋಟ್ಯಂತರ ಪಾರ್ಟಿ ಫಂಡ್ ಬರುವುದೂ ಇವರಿಂದಲೇ ಅಲ್ಲವೇ!

- ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ

ನಾಸ್ತಿಕರಾಗಿದ್ದರೂ ತಾನೊಬ್ಬ ಆಸ್ತಿಕ ಹಾಗೂ ಹಿಂದೂ ದೇವರ ಮಹಾಭಕ್ತ ಎಂದು ಅಭಿನಯಿಸುವ ನೈಪುಣ್ಯತೆ ಹೊಂದಿದ್ದಾರೆ. ಆದರಿಂದಾಗಿ ಅವರ ಭಕ್ತಿ ಹಾಗೂ ಹಿಂದೂ ಧರ್ಮಾಭಿಮಾನವೆಲ್ಲಾ ಕೃತ್ರಿಮ ಎಂದು ಹೊರನೋಟಕ್ಕೆ ಸಂಘೀ ಪಡೆಗಳಿಗೆ ಗೊತ್ತಾಗುವುದೇ ಇಲ್ಲ. ಹೀಗಾಗಿ ದೇವರೇ ಕಳುಹಿಸಿರುವ ಯುಗಪುರುಷ ಈ ಮೋದಿ ಎಂದು ಅರೆಸಾಕ್ಷರ ಸಂಘಿ ಕಾಲಾಳುಗಳು ನಂಬುತ್ತಾರೆ! ಆದರೆ ಮೋದಿಯೊಬ್ಬ ಸಾಧಾರಣ ಮನುಷ್ಯ ಎಂಬುದು ಅವರು ನೋಟು ರದ್ದತಿಯಂತಹ ಮಹಾಮೂರ್ಖ ಪ್ರಮಾದ ಎಸಗಿದ ಮೇಲೆ ಅವರ ಕೆಲವು ಭಕ್ತರಿಗೆ ಈಗೀಗ ಸ್ವಲ್ಪ ಅರ್ಥವಾದಂತೆ ಕಾಣಿಸುತ್ತಿರುವುದು ಒಳ್ಳೆಯ ಬೆಳವಣಿಗೆ.

- ಕೇಶವರಾಮ ಅಡಪ, ಕಿನ್ನಿಗೋಳಿ (ದ.ಕ)

ಉಲ್ಲಾಯ ಬ್ರಹ್ಮಸ್ಥಾನದಲ್ಲಿ ವೈದಿಕರಿಂದ ತುಳು ಸಂಸ್ಕೃತಿ ನಾಶ

ಕರಾವಳಿಯ ಕಂಬಳ ಎಂಬ ಕೋಣಗಳ ಓಟ ಉಳಿಸಿಕೊಳ್ಳಬೇಕು ಎಂದು ಬೊಬ್ಬೆ ಹಾಕುವವರು ಮೊದಲು ನಮ್ಮ ತುಳುನಾಡಿನ ಅಚ್ಚ ದ್ರಾವಿಡ ಪದ್ಧತಿಯಲ್ಲಿ ಪೂಜೆ ಆಗುವ ಉಡುಪಿ ಹತ್ತಿರದ ಪಡುಬಿದ್ರಿಯ ಇತಿಹಾಸ ಪ್ರಸಿದ್ಧ ಬ್ರಹ್ಮಸ್ಥಾನ ಉಳಿಸಿಕೊಳ್ಳುವತ್ತ ಗಮನ ಹರಿಸಬೇಕಿದೆ. ಪಡುಬಿದ್ರಿಯ ಈ ಉಲ್ಲಾಯ ಬ್ರಹ್ಮಸ್ಥಾನವು ಪ್ರಕೃತಿದೇವಿ ಆಲಯ ಎಂದೇ ಪರಿಗಣಿಸಲಾಗಿದೆ. ಉಲ್ಲಾಯ ಅಂದರೆ ಗಂಡು-ಹೆಣ್ಣು ಎರಡೂ ಅಲ್ಲದ ಒಂದು ದೈವ (ವೈದಿಕರು ಯಾರನ್ನೂ ಕೇಳದೇ ಇದಕ್ಕೆ ಖಡ್ಗೇಶ್ವರಿ ಅಮ್ಮ ಎಂದು ಇತ್ತೀಚೆಗೆ ವಿಚಿತ್ರ ಹೆಸರು ಇಟ್ಟಿದ್ದಾರೆ!). ಸ್ಥಾವರವೇ ಇಲ್ಲದ ಈ ಹಿಂದೂ ಪವಿತ್ರ ಕ್ಷೇತ್ರವು ಸರಕಾರದ ಮುಜರಾಯಿ ಇಲಾಖೆಯ ಅಡಿ ಇದೆಯಾದರೂ ಇದರ ಆಡಳಿತವನ್ನು ಮುಜರಾಯಿ ಇಲಾಖೆ ಊರವರನ್ನು ಕೇಳದೇ ಒಂದು ಬ್ರಾಹ್ಮಣರ ಟ್ರಸ್ಟ್‌ಗೆ ಬಿಟ್ಟು ಕೊಟ್ಟಿದೆ. ಆದರೂ ಇಲ್ಲಿ ಯಾವುದೇ ಕೆಲಸವಾಗಬೇಕಾದರೂ ಊರಿನ ಎಲ್ಲಾ ಹಿಂದುಳಿದ ಜಾತಿಗಳ ಮುಖಂಡರ ಅನುಮತಿ ಪಡೆಯಬೇಕು ಎಂಬ ದೈವಿ ನಿಯಮವೂ ಇದೆ. ಮೂಲತಃ ಇಲ್ಲಿಯ ಮರ ಗಿಡ ಬಳ್ಳಿಗಳಿಗೆ ಕತ್ತಿ-ಕೊಡಲಿ ತಾಗಿಸಲೇಬಾರದು ಎಂಬ ಕಠಿಣ ನಿಯಮ ನೂರಾರು ವರ್ಷಗಳಿಂದ ಪಾಲಿಸಿಕೊಂಡು ಬರಲಾಗುತ್ತಿದೆ. ಆದರೆ ಮೊನ್ನೆ ಜನವರಿ 18ಕ್ಕೆ ಶುರುವಾದ 50 ದಿನಗಳ ಜಾತ್ರೆ ಮತ್ತು ಢಕ್ಕೆಬಲಿ ಹರಕೆಗೆ ಮುಂಚೆ ಇಲ್ಲಿಯ ಪವಿತ್ರ ವನದಲ್ಲಿ ನೂರಾರು ವರ್ಷಗಳಿಂದ ಬೆಳೆದಿದ್ದ ಮರ ಹಾಗೂ ಬರಲು(ಬಳ್ಳಿ)ಗಳನ್ನು ಕಡಿದು ತೆಗೆದು ಕಾಡಿನಂತಿದ್ದ ಆಲಯವನ್ನು ಬಯಲಿನಂತೆ ಮಾಡಲಾಯಿತು. ಈ ಕೆಲಸಕ್ಕೆ




ಮುನ್ನ ಮುಜರಾಯಿ ಇಲಾಖೆಯವರು ಮತ್ತು ಬ್ರಾಹ್ಮಣ ಟ್ರಸ್ಟಿನವರು ಊರಿನವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲೇ ಇಲ್ಲ. ಈ ಕ್ಷೇತ್ರದಲ್ಲಿ ಅಪಾರ ನಂಬಿಕೆ ಇಟ್ಟಿರುವ ಮೊಗವೀರ ಮತ್ತು ಬಿಲ್ಲವ ಜಾತಿಯ ಹಿರಿಯರಿಗೆ ಈ ಪ್ರಕೃತಿ ನಾಶದಿಂದ ಭಾರಿ ಮಾನಸಿಕ ಆಘಾತವಾಗಿ ಕೆಲವರು ಬ್ರಹ್ಮಸ್ಥಾನದಲ್ಲಿಯೇ ಕಣ್ಣೀರಿಟ್ಟಿದ್ದಾರೆ.

ರಸ್ತೆ ಅಗಲಿಸುವಾಗ ಒಂದು ಸಣ್ಣ ಮರ ಕಡಿದರೂ ಪರಿಸರ ನಾಶ ಎಂದು ಬೊಬ್ಬೆ ಹಾಕುವ ಪರಿಸರವಾದಿಗಳು ಪಡುಬಿದ್ರಿ ಬ್ರಹ್ಮಸ್ಥಾನದಲ್ಲಿ ಮರ ಕಡಿದು ಪ್ರಕೃತಿ ದೇವಿಗೆ ಸರಕಾರದಿಂದಲೇ ಇಷ್ಟು ದೊಡ್ಡ ಅಪಚಾರ ಆಗುವಾಗ ಎಲ್ಲಿದ್ದರು? ಇಲ್ಲಿಯ ಭಕ್ತರಲ್ಲಿ ಬಡವ ಧನಿಕ ಎಂಬ ಭೇದವೇ ಇಲ್ಲ, ಎಲ್ಲರೂ ನೆಲದ ಮೇಲೆಯೇ ಕುಳಿತುಕೊಳ್ಳಬೇಕು, ಆವರಣದ ಒಳಗೆ ಯಾವುದೇ ಆಸನ ತರಬಾರದು ಎಂಬ ನಿಯಮವೇ ಇದೆ. ಹಾಗಿದ್ದರೂ ಈಗ ಆವರಣ ಒಳಗಿರುವ ಮರಗಿಡಗಳನ್ನು ಕಡಿದು ಧನಿಕ ಭಕ್ತರು ಆವರಣದ ಹೊರಗೆಯೇ ತಮ್ಮ ವಾತಾನುಕೂಲಿತ ಕಾರಿನಲ್ಲಿ ಆರಾಮವಾಗಿ ಕುಳಿತು ರಾತ್ರಿಯಿಡೀ ನಡೆಯುವ ಢಕ್ಕೆಬಲಿ ನೋಡಲು ಅನುಕೂಲ ಮಾಡಿಕೊಡಲಾಗಿದೆ. ಈ ಶ್ರೀಮಂತರ ಅನುಕೂಲಕ್ಕಾಗಿ ದಶಕಗಳಿಂದ ಆ ಜಾಗದಲ್ಲಿ ಅಂಗಡಿಗಳನ್ನು ಹಾಕುತ್ತಿದ್ದ ಬಡ ವ್ಯಾಪಾರಿಗಳನ್ನೂ ಈ ಸಾರಿ ದೂರ ಓಡಿಸಲಾಗಿದೆ. ಬ್ರಾಹ್ಮಣರ ಆಡಳಿತದಲ್ಲಿರುವ ಎಲ್ಲಾ ಖಾಸಗಿ ಪವಿತ್ರ ಕ್ಷೇತ್ರಗಳಂತೆ ಇಲ್ಲಿಯೂ ಆ ರೀತಿ ಕೇವಲ ಧನಿಕ ಭಕ್ತರನ್ನು ಒಲಿಸಿಕೊಳ್ಳಲು ಕಸರತ್ತು ಮಾಡಿ ಮುಜರಾಯಿ ಇಲಾಖೆಯೇ ಈ ಪವಿತ್ರ ಕ್ಷೇತ್ರಕ್ಕೆ ಅಪಚಾರ ಮಾಡಿರುವುದು ಖೇದಕರ. ಕೋಣಗಳ ಓಡಾಟದ ಕಂಬಲಕ್ಕೆ ತಮ್ಮ ಧಾರ್ಮಿಕ ಭಾವನೆಗಳನ್ನು ವಿನಾಕಾರಣ ಜೋಡಿಸಿ ಬೀದಿಗಿಳಿಯುವ ತುಳು ಸಂಸ್ಕೃತಿಯ ಸೋ-ಕಾಲ್ಡ್ ರಕ್ಷಕರು ಪಡುಬಿದ್ರಿಯ ಉಲ್ಲಾಯ ಬ್ರಹ್ಮಸ್ಥಾನದಲ್ಲಿ ವೈದಿಕರಿಂದ ಕಣ್ಣೆದುರೇ ತುಳು ಸಂಸ್ಕೃತಿ ನಾಶವಾಗುವಾಗ ಅವರು ಎಲ್ಲಿಯೂ ಕಾಣಿಸದಿರುವುದು ವಿಪರ್ಯಾಸ.

- ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ಕೃಷ್ಣನೇ ಕೊನೆಯಲ್ಲ

ಮುದಿತನದಲ್ಲಿ ಅರಿತ್ತ ಮರೆತ ಕಾರಣ ಸೇನಪಕ್ಷಕ್ಕೆ ಸರಿಸಲ್ಪಟ್ಟ ಎಸ್.ಎಂ. ಕೃಷ್ಣಗೆ ಮುಖ ನೋಡುವವರೂ ಒಂದು ಒಳ್ಳೆಯ ಸುದ್ದಿ ಇರಲೇಬೇಕು. ಇದಕ್ಕಾಗಿ ಪಕ್ಷಗಳೂ, ಸರ್ಕಾರಗಳೂ ಎಷ್ಟೇ ಮುಜುಗರವಾಗಿದ್ದೂ ಅವಮಾನವಾದರೂ



ಪರವಾಗಿಲ್ಲ. ಇಂತಹ ಸ್ವಾರ್ಥಿಗಳು ಎಲ್ಲಾ ಪಕ್ಷಗಳಲ್ಲೂ ಇರುತ್ತಾರೆ. ಅದರಲ್ಲೂ ಕಾಂಗ್ರೆಸ್ ಪಕ್ಷದಲ್ಲಂತೂ ಇದರ ಸಂಖ್ಯೆ ಹೆಚ್ಚು.

ಕೇಂದ್ರ ರೈಲ್ವೆ ಮಂತ್ರಿಯಾಗಿ ಅಷ್ಟಿಷ್ಟು ಒಳ್ಳೆ ಕೆಲಸ ಮಾಡಿದ ಮಹಾಶಯರು ತಮ್ಮ ಮೊಮ್ಮಗನಿಗೋಸ್ಕರ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡಿನ ಕಾಲು ಹಿಡಿದು, ಇಲ್ಲಿ ರಾಜ್ಯದ ಮುಖ್ಯಮಂತ್ರಿ ಎಂಬುದನ್ನೂ ಲೆಕ್ಕಿಸದೇ ಏಕವಚನದಲ್ಲಿ ಬೈದಾಡುತ್ತಾ ಪಕ್ಷಕ್ಕೆ ಹಾನಿ ಮಾಡಿ ಚುನಾವಣೆಯಲ್ಲಿ ಸೋತು ಅವಮಾನಿತನಾದರೂ ಅವರು ಇನ್ನೂ ಬುದ್ಧಿ ಕಲಿತಿಲ್ಲ. ಇನ್ನು ಇನ್ನೊಬ್ಬರು ತಮ್ಮ ಮುದಿತನ ದಿಂದಾಗಿ ಮಂತ್ರಿಗಿರಿಯನ್ನು ಸರಿಯಾಗಿ ನಿಭಾಯಿಸಲಾಗದೇ, ತಾನು ಮಂತ್ರಿಯಾಗಿದ್ದು ಕೇವಲ ಐಷಾರಾಮಿ ಕಾರಿನಲ್ಲಿ ಓಡಾಡಲಿಕ್ಕೆ ಮಾತ್ರ ಎಂಬಂತೆ ಮಾತನಾಡಿ ಅದು ಹೋದನಂತರ ಇನ್ನೂ ಹೆಚ್ಚಿನ ಲಕ್ಷುರಿ ಕಾರಿನಲ್ಲಿ ಓಡಾಡುತ್ತೇನೆ ಎಂದದ್ದು ಜನಪರ ಕೆಲಸಗಳಿಗೆ ಇವರ ಕಾಳಜಿ ಎಷ್ಟು ಎಂಬುದನ್ನು ತೋರಿಸುತ್ತದೆ. ಮಂತ್ರಿಗಿರಿ ಪಡೆದು ಸಾಕಷ್ಟು ಕೆಲಸ ಮಾಡಲು ಅವಕಾಶವಿದ್ದರೂ ವೈಭವಯುತ ಜೀವನ ನಡೆಸುತ್ತಾ ಕುಡಿತ, ಕುದುರೆ ಜೂಜುಗಳಲ್ಲೇ ಕಾಲ ಕಳೆದು ಮಂತ್ರಿಗಿರಿಯಿಂದ ಹೊರದಬ್ಬಿಸಲ್ಪಟ್ಟ ಸ್ಟಾರ್ ನಟನ ಕಥೆಯೂ ಇದೇ ತರಹದ್ದು.

ಇವರಿಗೆ ಪಕ್ಷ, ಸರ್ಕಾರ ತಮ್ಮ ಸ್ವಾರ್ಥ ಸಾಧನೆಷ್ಟೆ. ಅದು ನಡೆಯದಿದ್ದಾಗ ಯಾವುದಕ್ಕೂ ಹೇಸದೆ ಅಡ್ಡದಾರಿ ಹಿಡಿಯುವ ಜಾಯಮಾನ ಇವರೆಲ್ಲರದ್ದು. ಇಂತಹವರು ಇದ್ದುದರಲ್ಲಿ ಒಳ್ಳೆ ಹೆಸರು ಮಾಡಿ ತಮ್ಮ ಇಳಿವಯಸ್ಸಿನಲ್ಲಿ ನೇಪಥ್ಯಕ್ಕೆ ಸರಿದು, ಮರ್ಯಾದೆಯಾಗಿ ಜೀವನ ನಡೆಸಿ ಕಾಲವಶರಾದ ಕೆ.ಹೆಚ್. ರಂಗನಾಥ್, ವೈ.ಆರ್. ಘೋರ್ಪಡೆಯಂತಹವರ ಮಾದರಿಯನ್ನನುಸರಿಸಿ ಅಷ್ಟಿಷ್ಟು ಮರ್ಯಾದೆ, ಗೌರವ ಇಟ್ಟುಕೊಂಡು ಬಾಳಿ ಹೋಗಬೇಕು.

- ಅಹಮದ್ ಷರೀಫ್, ದಾವಣಗೆರೆ

ಸೋಮನಹಳ್ಳಿ ಕೃಷ್ಣನೂ, ಸೋಮನಹಳ್ಳಿ ಮುದುಕಿಯೂ

ತನ್ನಿಂದಲೇ ಸೋಮನಹಳ್ಳಿಗೆ ಬೆಳಕರಿಯುತ್ತದೆ ಎಂದು ಬೀಗಿದ ಮುದುಕಿಯೊಬ್ಬಳು ತನ್ನ ಕೋಳಿ ಹುಂಜ, ಅಗ್ಗಿಷ್ಟಿಕೆ ಹೊತ್ತುಕೊಂಡು ಕಾಡಿಗೆ ಹೋದ ಜನಪದ ಕತೆಯನ್ನು ನೆನಪಿಸುವಂತಿದೆ ಕಾಂಗ್ರೆಸ್ ಪಕ್ಷವನ್ನು ತೊರೆದ ಮಂಡ್ಯ ಜಿಲ್ಲೆ ಸೋಮನಹಳ್ಳಿಯ ಕೃಷ್ಣ ರಾಜೀನಾಮೆ.

ಇಷ್ಟು ವರ್ಷಗಳ ಕಾಲ ಕೃಷ್ಣ ರಾಜ್ಯದ ಮುಖ್ಯಮಂತ್ರಿಯಾಗಿ, ನೆರೆರಾಜ್ಯದ ರಾಜ್ಯಪಾಲರಾಗಿ, ಕೇಂದ್ರದ ವಿದೇಶಾಂಗ ಸಚಿವರಾಗಿ ಎಲ್ಲ ಬಗೆಯ ಅಧಿಕಾರ, ಸೌಲಭ್ಯಗಳನ್ನು ಅನುಭವಿಸಿದವರು. ಪ್ರಸ್ತುತ ಕಾಂಗ್ರೆಸ್ ಕಷ್ಟದಲ್ಲಿರುವಾಗ ಇವರು ತಮ್ಮ ಸ್ವಕೀಯ ಲಾಭಕ್ಕಾಗಿಯೋ ಅಥವಾ ಗಣಿ ಪರವಾನಗಿ, ಅಳಿಯ ಸಿದ್ಧಾರ್ಥನ




ಕಾಫಿ ಡೆ ಮೇಲೆ ಸಿಬಿಐ ಕಣ್ಣು ಬಿದ್ದಿದೆ ಎಂಬ ಕಾರಣಕ್ಕೋ ತನ್ನ ಪತ್ನಿ ಜತೆ ಅನುಸಂಧಾನ ಮಾಡಿ ರಾಜೀನಾಮೆ ನೀಡಿದ್ದಾರೆ.

ವಿದೇಶಾಂಗ ಸಚಿವರಾಗಿ ವಿಶ್ವಸಂಸ್ಥೆ ವೇದಿಕೆ ಮೇಲೆ ಪೋರ್ಚುಗಲ್ ವಿದೇಶಾಂಗ ಸಚಿವರ ಭಾಷಣ ಪಠಿಸಿ, ಭಾರತಕ್ಕೆ ಮುಜುಗರ ಮಾಡಿದ ಇವರು ಅರಳುಮರಳು ಸ್ಥಿತಿಗೆ ಬಂದಿದ್ದಾರೆಂಬುದು ಆಗಲೇ ಜಗಜ್ಜಾಹೀರಾಗಿ ಹೋಯಿತು. ಇನ್ನು ಬೇರಾವ ಪಕ್ಷ ಇವರನ್ನು ಸ್ವಾಗತಿಸುತ್ತದೆ? ಕೃಷ್ಣ ರಾಜೀನಾಮೆ ನೀಡಿದರೂ ಅವರ ಯಾವ ಬೆಂಬಲಿಗರೂ ಅತ್ತ ಇನ್ನೂ ಸುಳಿದಿಲ್ಲವೆಂದರೆ ಅವರ ಕಿಮ್ಮತ್ತು ದೇವೇಗೌಡರಿಗೆ ಹೋಲಿಸಿದರೆ ತಾನೇ ಬಯಲಾಗುತ್ತದೆ. ರಾಜಕಾರಣಿಗಳು ಹೀಗೆ ಪಕ್ಷ ಬಿಟ್ಟು ಹೋಗುತ್ತೇನೆ ಎಂದು ಹೆದರಿಸುವುದಕ್ಕಿಂತ ಘನತೆಯಿಂದ ನಿವೃತ್ತಿ ಹೊಂದಿ ಕಿರಿಯರಿಗೆ ಅನುವು ಮಾಡಿಕೊಡುವುದು ಲೇಸು. ಯಾರಿರಲಿ, ಯಾರು ಹೋಗಲಿ ಜನ ಪರವಾದ ಪಕ್ಷಗಳು ಉಳಿಯುತ್ತವೆ ಇಲ್ಲ ಅಳಿಯುತ್ತವೆ. ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ ಎಂಬ ತಿಳುವಳಿಕೆ ಕೃಷ್ಣನಂಥ ರಾಜಕಾರಣಿಗಳಿಗೆ ಬೇಗ ಬಂದರೆ ಒಳ್ಳೆಯದು. ಸೋಮನಹಳ್ಳಿ ಮುದುಕಿ ಹುಂಜ ಕೂಗದಿದ್ದರೂ ಆ ಊರಿಗೆ ಬೆಳಕರಿಯುತ್ತದೆ.

- ಪ್ರೊ. ಶಿವರಾಮಯ್ಯ, ಬೆಂಗಳೂರು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 22-02-2017 RNI No. KARKAN2005



ಉಪೇಂದ್ರನಿಗೆ ತಿರುಮಂತ್ರ

ವಿಚಿತ್ರ ಕತೆಗಳ ಸಿನಿಮಾ ಮಾಡಿ ಪ್ರೇಕ್ಷಕರ ತಲೆಗೆ ಹುಳು ಬಿಡುವುದರಲ್ಲಿ ಉಪೇಂದ್ರ ಫೇಮಸ್. ತನ್ನ ಸಿನಿಮಾಗಳು ಕೇವಲ ಬುದ್ಧಿವಂತರಿಗೆ ಎಂದು ಹೇಳುತ್ತಲೇ ಬೇರೆ ರೀತಿಯ ಪ್ರಚಾರ ಪಡೆದ ನಟ ಕೂಡ ಇವರು. ಈಗ ಉಪ್ಪಿ ಅಭಿಮಾನಿಗಳೇ ಉಪೇಂದ್ರರ ತಲೆಗೆ ಕಂಬಳಿ ಹುಳು ಬಿಡುತ್ತಿದ್ದಾರೆ. ಇದರಿಂದಾಗಿ ಸ್ವತಃ ಉಪೇಂದ್ರ ತಲೆಕೆಡಿಸಿಕೊಂಡು ಕೂತಿದ್ದಾರೆ.

ಎರಡು ವಾರಗಳ ಹಿಂದೆಯಷ್ಟೇ ಉಪೇಂದ್ರ ದಬಾಂಗ್ ಚಿತ್ರದ ಕನ್ನಡ ಅವತರಣಿಕೆಯಲ್ಲಿ ನಟಿಸುತ್ತಾರೆಂದು ಸುದ್ದಿ ಹಬ್ಬಿಸಿದ್ದರು ಅಭಿಮಾನಿಗಳು. ಈ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಕೂಡ ಆಗಿತ್ತು. ಸಹಜವಾಗಿಯೇ ಅದು ಉಪೇಂದ್ರ ಕಿವಿಗೂ ಬಿತ್ತು. ಆದರೆ ಈ ಸುಳ್ಳು ಸುದ್ದಿಯನ್ನು ಕಂಡ ಕೆಂಡವಾದರು ರಿಯಲ್‌ಸ್ಟಾರ್. ತಾವು ನಟಿಸದೇ ಇರುವ ಸಿನಿಮಾಗಳ ಬಗ್ಗೆ ಅದ್ಹೇಗೆ ಸುದ್ದಿ ಹುಟ್ಟಿಕೊಳ್ಳುತ್ತದೆಂದು ಹುಡುಕಲು ಹೊರಟರು. ಇನ್ನೂ ಅದರ ಸುಳಿವು ಸಿಕ್ಕಿಲ್ಲ. ಈ ಮಧ್ಯೆ ಮತ್ತೆ ಎರಡು ಸಿನಿಮಾಗಳ ಬಗ್ಗೆ ಗಾಸಿಪ್ ಹುಟ್ಟಿಕೊಂಡಿದೆ. 'ಓಂ-2' ಮತ್ತು 'ಶ್-2' ಸಿನಿಮಾದಲ್ಲಿ ಉಪೇಂದ್ರ ತೊಡಗಲಿದ್ದಾರೆಂಬ ಮಾತು ಕೇಳಿಬಂದಿದೆ. ಒಂದು ದಿನದ ಹಿಂದೆಯಷ್ಟೇ ಈ ಕುರಿತು ಅವರು ಸ್ಪಷ್ಟನೆ ನೀಡಿದ್ದಾರೆ. ತಾವು ಈ ರೀತಿಯ ಯಾವುದೇ ಸಿನಿಮಾ ಮಾಡುವುದಿಲ್ಲ ಅಂದಿದ್ದಾರೆ. ಈ ರೀತಿ ಸುದ್ದಿ ಹಬ್ಬಿಸಬೇಡಿ ಎಂದು ಮನವಿ ಮಾಡಿದ್ದಾರೆ. ಹೇಗಿದೆ ಗುರುವಿಗೆ ತಿರುಮಂತ್ರ.

ನಾಗ್ತಿ ಮೇಷ್ಟ್ರು ಮತ್ತು ಫಾರಿನ್ ದುಡ್ಡು

ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಸದ್ಯ ವಿದೇಶ ಪ್ರವಾಸದಲ್ಲಿದ್ದಾರೆ. ಅಮೆರಿಕಾ ಮತ್ತು ಇಂಗ್ಲೆಂಡ್‌ಗೆ ಭೇಟಿ ನೀಡಿರುವ ಅವರು ಅಲ್ಲಿನ ಗೆಳೆಯರನ್ನು ಭೇಟಿ ಮಾಡಿ, ಸಿನಿಮಾ ನಿರ್ಮಾಣಕ್ಕೆ ಹಣ ಹೊಂದಿಸುತ್ತಿದ್ದಾರಂತೆ. ಕನ್ನಡ ಬಳಗದ ಅನೇಕ ಸದಸ್ಯರನ್ನೂ ಭೇಟಿ ಮಾಡಿರುವ ಮೇಷ್ಟ್ರು ಮುಂದಿನ ತಮ್ಮ ಪ್ರಾಜೆಕ್ಟ್ ಬಗೆಗೂ ಚರ್ಚೆ ಮಾಡಿದ್ದಾರೆ. ಈ ಎಲ್ಲ ವಿಷಯವನ್ನು ಸ್ವತಃ ಅವರ ಗೆಳೆಯರೇ ಬಹಿರಂಗಪಡಿಸುತ್ತಿದ್ದಾರೆ. ಸದ್ಯ ನಾಗತಿಹಳ್ಳಿ ಅವರ ಬಳಿ ಎರಡು ಸಿನಿಮಾ ಸ್ಕ್ರಿಪ್ಟ್ ಇವೆ. ಒಂದು ಹೊಸಬರ ಚಿತ್ರ. ಮತ್ತೊಂದು ಶಿವರಾಜ್‌ಕುಮಾರ್‌ಗಾಗಿ ಸಿನಿಮಾ ಮಾಡಲಿದ್ದಾರೆ. ಸದ್ಯಕ್ಕೆ ಶಿವರಾಜ್‌ಕುಮಾರ್ ಬಿಡುವಿಲ್ಲದ ಕಾರಣ, ಹೊಸ ಕಲಾವಿದರಿಗಾಗಿ ಬರೆದ ಕತೆಯೇ ಸಿನಿಮಾ ಆಗಲಿದೆ. ಅದಕ್ಕಾಗಿ ಫಾರಿನ್ ದುಡ್ಡು ತರುವ ಪ್ಲಾನ್ ನಾಗ್ತಿ ಮೇಷ್ಟ್ರದ್ದು. ಬಲ್ಲ ಮೂಲಗಳ ಪ್ರಕಾರ, ನಿರ್ಮಾಣ ಮಾಡುವಷ್ಟು ದುಡ್ಡು ಸಿಕ್ಕಿದೆಯಂತೆ. ಅಲ್ಲದೇ ಈ ಚಿತ್ರಕ್ಕೆ ಹಾಲಿವುಡ್ ತಂತ್ರಜ್ಞರು ಕೆಲಸ ಮಾಡಲಿದ್ದಾರಂತೆ.

ನಾಗತಿಹಳ್ಳಿ ಅವರಿಗೆ ವಿದೇಶಕ್ಕೆ ಹೋಗುವುದೆಂದರೆ ಬೆಂಗಳೂರಿನ ಒಂದು ಗಲ್ಲಿಯಿಂದ ಮತ್ತೊಂದು ಗಲ್ಲಿಗೆ ಹೋದಷ್ಟೇ ಸುಲಭ. ಹಾಗಾಗಿ ಹೊಸ ಸಿನಿಮಾದ ಶೂಟಿಂಗ್ ಅಮೆರಿಕಾದಲ್ಲಿ ನಡೆದರೂ ಅಚ್ಚರಿಪಡಬೇಕಿಲ್ಲ. ಏನೇ ಆಗಲಿ ಸ್ಯಾಂಡಲ್‌ವುಡ್‌ಗೆ ವಿದೇಶಿ ಹಣ ಹರಿದುಬರುತ್ತಿರುವುದು ಸಂತಸದ ಸಂಗತಿ.

ದಂಡುಪಾಳ್ಯದಲ್ಲಿ ಪೂಜಾ

ನಿರ್ದೇಶಕ ಶ್ರೀನಿವಾಸ್ ರಾಜು ಅವರ 'ದಂಡುಪಾಳ್ಯ' ಸಿನಿಮಾದಲ್ಲಿ ಬೆನ್ನು ತೋರಿಸಿ ವಿವಾದಕ್ಕೆ ಕಾರಣವಾಗಿದ್ದರು ಪೂಜಾ. ಮತ್ತೆ ತಾವು ಅಂತಹ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವುದಿಲ್ಲವೆಂದು ಮಾತು ಕೊಟ್ಟಿದ್ದರು. ಕೆಲವೇ ತಿಂಗಳಲ್ಲಿ ಅದೆಲ್ಲವನ್ನೂ ಮರೆತು ಮತ್ತೆ 'ದಂಡುಪಾಳ್ಯ 2' ಚಿತ್ರ ಒಪ್ಪಿಕೊಂಡರು. ಆ ಸಿನಿಮಾದಲ್ಲೂ ಪೂಜಾ ಅವರಿಗೆ ಸಿಕ್ಕಿದ್ದು ಹಸಿಬಿಸಿ ದೃಶ್ಯಗಳೇ. ಇನ್ನೂ ಈ ಸಿನಿಮಾ ರಿಲೀಸ್ ಆಗಿಲ್ಲ, ಆಗಲೇ 'ದಂಡುಪಾಳ್ಯ 3' ಚಿತ್ರದ ಬಗ್ಗೆ ಮಾಹಿತಿ ಹೊರಬಿದ್ದಿದೆ. ಇನ್ನೂ ಕೆಲವೇ ದಿನಗಳಲ್ಲಿ ಪಾರ್ಟ್ 3 ಸಿನಿಮಾ ಮಾಡುವ ಪ್ಲಾನ್ ಮಾಡಿದ್ದಾರಂತೆ ನಿರ್ದೇಶಕರು. ಈ ಸಿನಿಮಾದಲ್ಲೂ ಪೂಜಾ ಗಾಂಧಿಗೆ ಮುಖ್ಯಪಾತ್ರವಂತೆ. ಅಲ್ಲದೇ ಈ ಚಿತ್ರಕ್ಕೆ ನಿರ್ದೇಶಕರ ಜತೆ ಪೂಜಾ ಕೂಡ ಬಂಡವಾಳ ಹೂಡಲಿದ್ದಾರಂತೆ.

'ದಂಡುಪಾಳ್ಯ 2' ಚಿತ್ರಕ್ಕೆ ಇನ್ನೂ ಕಾಲು ಭಾಗದ ಚಿತ್ರೀಕರಣವಿದೆ. ಎರಡು ಮತ್ತು ಮೂರನೇ ಭಾಗದ ಚಿತ್ರೀಕರಣ ಜತೆ ಜತೆಯಾಗಿ ಸಾಗಲಿರುವುದು ವಿಶೇಷ. ಈ ರೀತಿಯ ಚಿತ್ರೀಕರಣ ಮಾಡುತ್ತಿರುವುದು ಇದೇ ಮೊದಲು. ಹಾಗಾಗಿ ಪಕ್ಕಾ ಪ್ಲಾನ್ ಮಾಡಿಕೊಂಡು ಹೊರಟಿದ್ದಾರಂತೆ ನಿರ್ದೇಶಕರು.





ಸನ್ಮಾರ್ಗದಲ್ಲಿ ಯಶ್

ಸಾಮಾಜಿಕ ಕಳಕಳಿಯ ವಿಚಾರದಲ್ಲಿ ಮಾಧ್ಯಮಗಳಿಗೆ ಸವಾಲು ಹಾ... ಯಶ್. "ನನಗೆ ಈ ನೆಲದ ಬಗ್ಗೆ ಜವಾಬ್ದಾರಿ ಇದೆ. ಮಾಧ್ಯಮ... ಇದೆಯಾ?" ಅಂತ ನೇರವಾಗಿಯೇ ನ್ಯೂಸ್ ಚಾನೆಲ್‌ಗಳಿಗೆ ಪ್ರಶ್ನೆ ಎಸೆದಿ... "ರೈತರಿಗಾಗಿ ವೇದಿಕೆ ಕಲ್ಪಿಸಿ, ನನ್ನ ಪಾಲಿನ ಸಹಕಾರ ನೀಡುತ್ತೇನೆ" ... ಒಂದು ಹೆಜ್ಜೆ ಮುಂದಿಟ್ಟಿದ್ದರು. ಆದರೆ, ಆ ಕೆಲಸ ಆಗಲಿಲ್ಲ, ಮಾಧ್ಯಮಗಳೊ... ಹೋರಾಟವನ್ನು ನಿಲ್ಲಿಸಿರುವ ರಾಕಿಂಗ್‌ಸ್ಟಾರ್, ರೈತರಿಗಾಗಿ ತಮ್ಮದೇ ... ಸಂಸ್ಥೆಯೊಂದನ್ನು ಹುಟ್ಟುಹಾಕಿದ್ದಾರೆ. ಯಶೋಮಾರ್ಗ ಹೆಸರಿನಲ್ಲಿ ತನ್ನ ಕಾರ... ಮಾಡಿರುವ ಸಂಸ್ಥೆಯು ನೀರಿನ ಬಳಕೆ ಮತ್ತು ನೀರಾವರಿಯ ಸ... ಕುರಿತಾಗಿ ಚಿಂತನೆ ನಡೆಸಿದೆ. ಅದಕ್ಕಾಗಿ ಫುಲ್‌ಟೈಮ್ ಕೆಲಸ ಮಾ... ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿದ್ದಾರೆ ಯಶ್. ಫೆ.5ರ... ಯಶೋಮಾರ್ಗ ಕಚೇರಿ ಉದ್ಘಾಟನೆ ಆಗಿದ್ದು, ರೈತಾಪಿ ವರ್ಗಕ್ಕೆ ಸಂಬಂಧ... ಅನೇಕ ಚಟುವಟಿಕೆಗಳು ನಡೆಯಲಿವೆಯಂತೆ.

ಯಶೋಮಾರ್ಗದ ಮೂಲಕ ಈಗಾಗಲೇ ಉತ್ತರ ಕರ್ನಾಟಕದ ... ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲಾಗಿದೆ. ಅಲ್ಲದೇ ಜಲ ಸಂರಕ್ಷ... ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸುವ ಕಾರ್ಯವೂ ನಡೆದಿದೆ. ಮು... ದಿನಗಳಲ್ಲಿ ರೈತಾಪಿ ವರ್ಗಕ್ಕೆ ಸಂಬಂಧಿಸಿದ ಅನೇಕ ಚಟುವಟಿಕೆಗ... ಹಮ್ಮಿಕೊಳ್ಳುವುದಾಗಿ ಯಶ್ ಹೇಳಿದ್ದಾರೆ. ಈ ಮೂಲಕ ತಾವು ಕೆ... ಮಾತನ್ನು ಉಳಿಸಿಕೊಂಡಿದ್ದಾರೆ.

ಕಾಳಿಂಗರಾವ್ ಬಯೋಪಿ...

ಕನ್ನಡದಲ್ಲಿ ಈವರೆಗೂ ಜೀವನ ಚರಿತ್ರೆ ಆಧರಿಸಿದ ಚಿತ್ರ... ಬಂದಿಲ್ಲ. ಇದೇ ಮೊದಲ ಬಾರಿಗೆ ಹಿರಿಯ ಸಂಗೀತ ಸಂಯೋ... ಪಿ.ಕಾಳಿಂಗರಾವ್ ಅವರ ಜೀವನ ಚರಿತ್ರೆ ಸಿನಿಮಾ... ಮೂಡಿಬರಲಿದೆ. ಇಂಥದ್ದೊಂದು ಸಾಹಸಕ್ಕೆ ಕೈಹಾಕಿದ್ದಾರೆ ನಿರ್ದೇ... ರಾಜೇಂದ್ರ ಸಿಂಗ್ ಬಾಬು ಮತ್ತು ನಿರ್ಮಾಪಕ ರಾಕ್... ವೆಂಕಟೇಶ್. ಕನ್ನಡ ಸಿನಿಮಾ ರಂಗಕ್ಕೆ ಸಾಕಷ್ಟು ಹಿಟ್ ಗೀತೆಗ... ನೀಡಿದವರು ಕಾಳಿಂಗರಾವ್. ಅಲ್ಲದೇ ಕುವೆಂಪು, ಬೇಂದ್ರೆ ಸೇರಿ... ಅನೇಕ ಪ್ರಸಿದ್ಧ ಕವಿಗಳ ಕವಿತೆಯನ್ನು ಹಾಡಾಗಿ ಮಾಡಿದ ... ಇವರದ್ದು. ಜತೆಗೆ ಕಾಳಿಂಗರಾವ್ ಅವರ ಜೀವನದಲ್ಲಿ ... ಮಹತ್ವದ ಘಟನೆಗಳು ನಡೆದಿವೆ. ಇವೆಲ್ಲವನ್ನೂ ಸಿನಿಮಾ... ತೋರಿಸಲಿದ್ದಾರಂತೆ ನಿರ್ದೇಶಕ ರಾಜೇಂದ್ರ ಸಿಂಗ್‌ಬಾಬು.

ಪ್ರಾಜೆಕ್ಟ್ ಸದ್ಯ ಪ್ರಾಥಮಿಕ ಹಂತದಲ್ಲಿದೆ. ಈಗಾಗಲೇ ಕಾಳಿಂಗರಾ... ಅವರ ಜೀವನದ ಕುರಿತಾಗಿ ಪುಸ್ತಕ ಬಂದಿರುವುದರಿಂದ, ಸ್ಕ್ರಿಪ್ಟ್ ಬಹುಬ... ಸಿದ್ಧವಾಗಲಿದೆಯಂತೆ. ನಿರ್ಮಾಣಕ್ಕೂ ರಾಕ್‌ಲೈನ್ ವೆಂಕಟೇಶ್ ಗ್ರೀನ್ ಸಿ... ನೀಡಿರುವುದರಿಂದ ಅತೀ ಶೀಘ್ರದಲ್ಲೇ ಸಿನಿಮಾ ಸೆಟ್ಟೇರಲಿದೆ. ಸಿನಿಮಾ... ಬಗ್ಗೆ ಬಹುತೇಕ ಮಾತುಕತೆ ಆಗಿದೆ. ಫೆ.9ರ ನಂತರ ಅಧಿಕೃತವಾಗಿ ಪ್ರಕಟಿಸಲಿ... ಅಂದಿದ್ದಾರೆ ನಿರ್ಮಾಪಕರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com